# ಕನ್ನಡ - ಅಧ್ಯಾಪಕ ಪಠ್ಯ
# KANNADA - TEACHER TEXT

## ಮುಂದುವರಿದ ಪಠ್ಯ
## ADVANCED TEXT

ತರಗತಿ

VII

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2024

## ಘಟಕ 1

# ಬೇರು ಬದುಕು

ಸುತ್ತ ಭತ್ತದ ಗದ್ದೆಗಳ ನಡುವೆ ಬಾಲ್ಯದ ಬದುಕು. ಗದ್ದೆ ಉಳುವ, ಬೀಜ ಬಿತ್ತುವ, ನೇಜಿ ನೆಡುವ, ಕೊಯ್ಲು ಮಾಡುವ ಅದನ್ನು ಸಂಸ್ಕರಿಸುವ ದೈಹಿಕಶ್ರಮ ಕಣ್ಮರೆಯಾಗುತ್ತಿದೆ. ಮೂರು ದಶಕಗಳಿಂದ ಕಣ್ಣೆದುರೇ ಮಾಯವಾಗುತ್ತಿರುವ ಗದ್ದೆಗಳು ಕೃಷಿಯ ಬಗೆಗಿನ ಆಸಕ್ತಿಯಿಂದ ದೂರ ಸರಿಯುವುದನ್ನು ಸೂಚಿಸುತ್ತದೆ. ರಸ್ತೆಯ ಇಕ್ಕೆಡೆಗಳಲ್ಲಿ ಹಸಿರಾಗಿ ಕಾಣುತ್ತಿದ್ದ ಭತ್ತದ ಕೃಷಿಯ ಜಾಗಗಳಲ್ಲಿ ಕಟ್ಟಡಗಳು ತಲೆಯೆತ್ತಿ ನಿಂತಿವೆ. ಕರಾವಳಿಯು ಭತ್ತದ ಕಣಜ. ನಾವು ಭತ್ತಕ್ಕಾಗಿ ಇನ್ನೊಬ್ಬರ ಮುಂದೆ ಎಂದಿಗೂ ಕೈ ಚಾಚದವರು. ಭತ್ತ ಬೆಳೆದು ಹೊರಗಿನ ಜಿಲ್ಲೆಯವರಿಗೆ ನೀಡುವ ಸಹೃದಯರು. ಆದರೆ ಈಗ ಭತ್ತ ಬೆಳೆಸುವವರ ಸಂಖ್ಯೆ ಗಣನೀಯವಾಗಿ ಕುಸಿದಿದೆ. “ಹೇಗಾದರೂ ಹಣ ಮಾಡಬಹುದು ಆದರೆ ಅನ್ನವನ್ನು ಸೃಷ್ಟಿಸಲು ಸಾಧ್ಯವಿಲ್ಲ” ಎನ್ನುವ ಮಾತು ನಮ್ಮನ್ನು ಸದಾ ಎಚ್ಚರಿಸುವ ಕರೆಗಂಟೆ. ಕೃಷಿಕರ ಸಂಪರ್ಕ , ಒಡನಾಟಗಳ ಮೂಲಕ ಕೃಷಿ ಕಡೆಗಿನ ಒಲವನ್ನು ಗಾಢವಾಗಿ ಬೇರೂರುವಂತೆ ಮಾಡಿದರೆ ಮಾತ್ರ ಮುಂದಿನ ಪೀಳಿಗೆಯ ಉಳಿವು ಸಾಧ್ಯ.

ಎತ್ತುಗಳ ಮೇಲೆ ನೊಗ ಇರಿಸಿ ನೇಗಿಲಲ್ಲಿ ಗದ್ದೆ ಉಳುವ ದೃಶ್ಯ ನೋಡುವುದೇ ಅಪರೂಪ. ರೈತನ ಪ್ರತಿಯೊಂದು ಆವಶ್ಯಕತೆಗೂ ನೆರವಾಗುತ್ತಿದ್ದ, ಅವಿಭಾಜ್ಯ ಅಂಗವೆಂದೆನಿಸಿದ್ದ, ಎತ್ತಿನ ಬಂಡಿ ಇದೀಗ ಗತಕಾಲದ ನೆನಪು. ಕೃಷಿ ರಂಗದಲ್ಲೂ ಅದ್ಭುತ ಬದಲಾವಣೆಗಳನ್ನು ಕಾಣಬಹುದು. ಕೃಷಿಯ ಪ್ರತಿಯೊಂದು ಚಟುವಟಿಕೆಗೂ ಯಂತ್ರೋಪಕರಣದ ಆಗಮನವು ದೈಹಿಕ ಶ್ರಮ ಮತ್ತು ಸಮಯವನ್ನು ಉಳಿತಾಯ ಮಾಡುತ್ತದೆ. ಸಂಯೋಜಿತ, ಕೃಷಿಗಳ ಬೆಳವಣಿಗೆ ರೈತರ ಅಧಿಕ ಲಾಭ ಪಡೆದು ಸಂಕಷ್ಟಗಳಿಂದ ದೂರಾಗುವಂತೆ ಮಾಡುತ್ತಿದೆ. ಕೃಷಿಯಿಂದಲೇ ಬದುಕು ಕಟ್ಟಿಕೊಂಡು ಸಾಧನೆ ಮಾಡಿದವರು ನಮಗೆಲ್ಲರಿಗೂ ಪ್ರೇರಣೆಯಾಗುತ್ತಿದ್ದಾರೆ.

ಕೃಷಿ ದೇಶದ ಜೀವನಾಡಿ ಎಂದರೂ ತಪ್ಪಾಗಲಾರದು. ನಮ್ಮ ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಕೃಷಿ ನಮ್ಮ ಭಾಷೆ ಮತ್ತು ಸಂಸ್ಕೃತಿಯ ಮೇಲೆ ತನ್ನದೇ ಆದ ಪ್ರಭಾವ ಬೀರಿದೆ. ಒಂದು ಪ್ರದೇಶದ ಭಾಷೆಯನ್ನು ಸಮಗ್ರವಾಗಿ ನೋಡುವಾಗ ಅದರಲ್ಲಿ ಬೇಸಾಯಕ್ಕೆ ಸಂಬಂಧಿಸಿದ ಭಾಷಾಪ್ರಯೋಗಗಳನ್ನು ಸಾಕಷ್ಟು ಕಾಣಬಹುದು. ವ್ಯಾವಹಾರಿಕ ಭಾಷೆಯಲ್ಲಿ ಇದು ಮತ್ತಷ್ಟು ಎದ್ದು ಕಾಣುತ್ತದೆ. ಒಂದು ಭಾಷೆಯ ಶಬ್ದಭಂಡಾರವನ್ನು ಶ್ರೀಮಂತಗೊಳಿಸುವುದಲ್ಲದೆ ಸಂಸ್ಕೃತಿಯ ವಿಕಾಸದಲ್ಲಿಯೂ ಕೃಷಿ ಪ್ರಧಾನ ಪಾತ್ರ ವಹಿಸುತ್ತದೆ. ಕೃಷಿಯ ಅವನತಿಯಿಂದಾಗಿ ಕೃಷಿ ಸಂಬಂಧವಾದ ಪದಗಳು, ಆಚರಣೆಗಳು ಎಲ್ಲವೂ ಮರೆಯಾಗುತ್ತವೆ.

ನಮ್ಮ ದಿನಬಳಕೆಯ ಮಾತುಗಳಲ್ಲಿ, ಒಂದಲ್ಲ ಒಂದು ರೀತಿಯಲ್ಲಿ ಬೇಸಾಯಕ್ಕೆ ಸಂಬಂಧಿಸಿದ ಪದಗಳೋ, ಪದಸಮೂಹಗಳೋ, ಗಾದೆ, ಒಗಟು ನುಡಿಗಟ್ಟುಗಳೋ ಪ್ರಯೋಗವಾಗುತ್ತಿವೆ. ಅವುಗಳನ್ನು ನಾವು ತಿಳಿಯದೆ ಹೋಗಿದ್ದೇವೆ. ಬೇಸಾಯ ನಮ್ಮಿಂದ ದೂರಸರಿದಂತೆ ಅದಕ್ಕೆ ಸಂಬಂಧಪಟ್ಟ ವಿಚಾರಗಳು ನಮ್ಮಿಂದ ದೂರವಾಗುತ್ತಿವೆ. ಕೃಷಿ ಸಂಬಂಧವಾದ ಹಾಡು, ಸಂಪ್ರದಾಯ, ಆಚರಣೆಗಳಿಂದ ಕೂಡಿದ ಸಮೃದ್ಧವಾದ ಶ್ರೀಮಂತ ಭವ್ಯ ಪರಂಪರೆ ನಮಗಿದೆ. ಸರ್ವಸಂಪನ್ನವಾದ ನಮ್ಮ ಸಂಸ್ಕೃತಿ ಕೃಷಿಯಿಂದಲೇ ರೂಪುಗೊಂಡಿದೆ ಎಂಬುದನ್ನು ನಾವು ಮರೆಯುವಂತಿಲ್ಲ.

## ಕಲಿಕಾ ಗುರಿಗಳು

- ಕೃಷಿ ಭಾರತದ ಪ್ರಧಾನ ಉದ್ಯೋಗವಲಯವೆಂದು ತಿಳಿದುಕೊಳ್ಳುವುದು.
- ಕೃಷಿ ವಲಯದ ಪರಂಪರಾಗತ ಕೃಷಿ ಪದ್ಧತಿ ಹಾಗೂ ಆಧುನಿಕ ಕೃಷಿ ಪದ್ಧತಿಗಳ ಕುರಿತು ತಿಳಿದುಕೊಳ್ಳುವುದು.
- ನಮ್ಮ ನಾಡಿನ ಕೃಷಿ ಸಾಧಕರ ಬಗ್ಗೆ ತಿಳಿದುಕೊಳ್ಳುವುದು.
- ಸಂಯೋಜಿತ ಕೃಷಿಯಲ್ಲಿ ತೊಡಗುವುದರಿಂದ ಕೃಷಿಯ ವೈವಿಧ್ಯತೆ ಉಳಿಸುವುದರೊಂದಿಗೆ ಹೆಚ್ಚು ಲಾಭವನ್ನು ಪಡೆಯಬಹುದು ಎಂಬ ತಿಳುವಳಿಕೆ ಹೊಂದುವುದು.
- ಕೃಷಿಯಲ್ಲಿನ ಯಾಂತ್ರೀಕರಣವು ಸಮಯದ ಉಳಿತಾಯ ಮತ್ತು ಶ್ರಮವನ್ನು ಕಡಿಮೆ ಮಾಡಿಸುತ್ತದೆ ಎಂದು ಅರಿತುಕೊಳ್ಳುವುದು.
- ಕೃಷಿಗೆ ಸಂಬಂಧಿಸಿದ ಗಾದೆಗಳು, ನಾಣ್ಣುಡಿಗಳು, ಒಗಟುಗಳು ಮೊದಲಾದವುಗಳ ಔಚಿತ್ಯವನ್ನು ತಿಳಿದು ವ್ಯವಹಾರ ರೂಪದಲ್ಲಿ ಬಳಸಿಕೊಳ್ಳುವುದು.
- ಕೃಷಿಗೆ ಸಂಬಂಧಿಸಿದ ವಿಚಾರಗಳು, ಅಭಿಪ್ರಾಯ, ನಿರೀಕ್ಷಣೆ ,ನಿಗಮನಗಳನ್ನು ವಿವಿಧ ವ್ಯವಹಾರ ರೂಪಗಳಾದ ಪತ್ರ, ಲೇಖನ,ಪ್ರಬಂಧ ಮೊದಲಾದವುಗಳ ಮೂಲಕ ಅಭಿವ್ಯಕ್ತಿಪಡಿಸುವ ಸಾಮರ್ಥ್ಯಗಳಿಸುವುದು.
- ವಿವಿಧ ವ್ಯವಹಾರ ರೂಪಗಳಲ್ಲಿರುವ ವಾಕ್ಯರಚನೆ, ಭಾಷಾ ಘಟಕ, ಪದವಿಂಗಡಣೆ ಇತ್ಯಾದಿಗಳನ್ನು ತಿಳಿದುಕೊಂಡು ಸ್ವಂತ ರಚನೆಗಳಲ್ಲಿ ಬಳಸುವುದು.

# ಯುನಿಟ್ ಗ್ರಿಡ್ ಘಟಕ - 1 ಬೇರು - ಬದುಕು

**ಆಶಯ : ಕೃಷಿ**

**ತರಗತಿ : 7 ಮುಂದುವರಿದ ಪಠ್ಯ**

**ಸಮಯ :**

| ಉಪ ಆಶಯಗಳು | ತಿಳುವಳಿಕೆಗಳು | ಸಾಹಿತ್ಯ ಪ್ರಕಾರ | ಭಾಷಾ ಸಾಮರ್ಥ್ಯಗಳು | ಮೌಲ್ಯ ಮನೋಭಾವಗಳು | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕಾ ಉಪಕರಣಗಳು | ಮೌಲ್ಯ ಮಾಪನ |
|---|---|---|---|---|---|---|---|---|
| ಕೃಷಿ ಒಲವು ಮತ್ತು ಸಂರಕ್ಷಣೆ | ಯುವ ಜನಾಂಗ ಕೃಷಿಯತ್ತ ಒಲವು ತೋರಿದರೆ ಮಾತ್ರ ಮುಂದಿನ ತಲೆಮಾರು ಉಳಿಯಬಹುದು.<br><br>ಕೃಷಿಕರು ಅನೇಕ ಸಮಸ್ಯೆಗಳನ್ನು ಎದುರಿಸಿಕೊಂಡು ತಮ್ಮ ಕಾಯಕವನ್ನು ಮುಂದುವರಿಸುತ್ತಿದ್ದಾರೆ. | ಚೆರ್ರಿ ಹಣ್ಣಿನ ಮರ (ಅನುವಾದ ಕತೆ) | ಕೃಷಿಗೆ ಸಂಬಂಧಿಸಿದ ಕಥೆ , ಲೇಖನ, ಪ್ರಬಂಧ ಮೊದಲಾದವುಗಳನ್ನು ಓದಿ ಅರ್ಥೈಸಿಕೊಳ್ಳುವುದು ಮತ್ತು ಚರ್ಚೆಯಲ್ಲಿ ತಾನು ತಿಳಿದುಕೊಂಡ ವಿಚಾರಗಳನ್ನು ಮಂಡಿಸುವುದು.<br><br>ಕೃಷಿಗೆ ಸಂಬಂಧಿಸಿದ ವಿವಿಧ ವ್ಯವಹಾರ ರೂಪಗಳಾದ ಟಿಪ್ಪಣಿ , ಲೇಖನ , | ಆಧುನಿಕ ಜಗತ್ತಿನಲ್ಲಿ ಕೃಷಿಯ ಪ್ರಾಧಾನ್ಯತೆಯನ್ನು ತಿಳಿದು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮನೋಭಾವ<br><br>ಕೃಷಿಕರ ಸಮಸ್ಯೆ ದೇಶದ ಸಮಸ್ಯೆ ಎಂದು ತಿಳಿದು ಸಮಸ್ಯೆ ಬಗೆಹರಿಸಲು ಕೈ ಜೋಡಿಸುವ ಮನೋಭಾವ | ವಾಕ್ಯ ರಚನೆ<br><br>ಘಟನೆಗಳ ಕ್ರಮೀಕರಣ<br><br>ಸಂಯುಕ್ತ ವಾಕ್ಯದಿಂದ ಸರಳವಾಕ್ಯ | ಟಿಪ್ಪಣಿ ಬರವಣಿಗೆ<br><br>ಸಂಭಾಷಣೆ<br><br>ಅನುಭವ ಟಿಪ್ಪಣಿ<br><br>ಕಿರು ಲೇಖನ ವಿವರಣೆ | ಐ.ಸಿ.ಟಿ ಮೂಲಕ ಚಿತ್ರ ಪ್ರದರ್ಶನ ರಸ್ಕಿನ್ ಬಾಂಡ್ ವ್ಯಕ್ತಿ ಪರಿಚಯ ವಿವಿಧ ಹಣ್ಣುಗಳ ವಿವರಣೆಯ ಅಲ್ಬಂ ಚೆರ್ರಿ ಹಣ್ಣಿನ ಮರ ಕತೆಯ ಕಿರು ಚಿತ್ರ ವೀಡಿಯೋ | ತರಗತಿ ಕೋಣೆಯಲ್ಲಿ ನಡೆಯುವ ಚರ್ಚೆಗಳಲ್ಲಿ ಮಕ್ಕಳ ಭಾಗವಹಿಸುವಿಕೆಯ ಮೌಲ್ಯಮಾಪನ<br><br>ಸಾಹಿತ್ಯ ಪ್ರಕಾರಗಳ ಓದುವಿಕೆಯ ಬಳಿಕ ಆಶಯ ಗ್ರಹಣದ ಮೌಲ್ಯ ಮಾಪನ<br><br>ಕಿರುಲೇಖನ,ವಿವರಣೆ ಅನುಭವ ಟಿಪ್ಪಣಿ ಮೊದಲಾದ ಸೃಜನ ಶೀಲ ಚಟುವಟಿಕೆಗಳಲ್ಲಿ |

| | | | | | | | | |
|---|---|---|---|---|---|---|---|---|
| | | | ವಿವರಣೆ, ಅನುಭವ ಮೊದಲಾದ ಸೃಜನಶೀಲ ರಚನೆಗಳಲ್ಲಿ ತೊಡಗುವುದು. | | | | | ಮಕ್ಕಳ ಭಾಷಾ ಸಾಮರ್ಥ್ಯದ ಮೌಲ್ಯ ಮಾಪನ |
| ಪರಂಪರಾಗತ ಕೃಷಿ ಮತ್ತು ಆಧುನಿಕ ಕೃಷಿ | ಕೃಷಿ ನಮ್ಮ ಪರಂಪರಾಗತ ಉದ್ಯೋಗ ಕ್ಷೇತ್ರವಾಗಿದೆ.<br><br>ಕೃಷಿಯಲ್ಲಿನ ಯಾಂತ್ರೀಕರಣದಿಂದ ಶ್ರಮ ಮತ್ತು ಸಮಯವನ್ನು ಉಳಿಸಬಹುದು.<br><br>ಕೃಷಿಗೆ ಸಂಬಂಧಿಸಿದ ಗಾದೆಗಳು, ನಾಣ್ಣುಡಿಗಳು ದಿನಬಳಕೆಯ ಭಾಷೆಯಲ್ಲಿ ಬಳಕೆಯಲ್ಲಿವೆ. | ನೇಗಿಲ ಯೋಗಿ (ಕವನ) | ಕೃಷಿಗೆ ಸಂಬಂಧಿಸಿದ ಹಾಡುಗಳನ್ನು ರಾಗ ತಾಳ ಲಯ ಬದ್ದವಾಗಿ ಹಾಡುವುದು ಮತ್ತು ಆಸ್ವಾದಿಸುವುದು.<br><br>ಕೃಷಿಗೆ ಸಂಬಂಧಿಸಿದ ಗಾದೆಗಳು ,ನಾಣ್ಣುಡಿ ಮೊದಲಾದವುಗಳನ್ನು ದೈನಂದಿನ ಭಾಷೆಯಲ್ಲಿ ಬಳಸುವುದು. | ಕೃಷಿಗೆ ಸಂಬಂಧಿಸಿದ ಗಾದೆಗಳು,ನಾಣ್ಣುಡಿ , ಒಗಟುಗಳು ಮೊದಲಾದವುಗಳ ಔಚಿತ್ಯವನ್ನು ತಿಳಿದು ವ್ಯವಹಾರ ರೂಪದಲ್ಲಿ ಬಳಸುವ ಮನೋಭಾವ<br><br>ಕೃಷಿಗೆ ಸಂಬಂಧಿಸಿದ ಸಾಹಿತ್ಯ ಪ್ರಕಾರಗಳನ್ನು ಓದುವ ಮನೋಭಾವ<br>ಕೃಷಿಗೆ ಸಂಬಂಧಿಸಿದ ವಿವಿಧ ಸೃಜನಶೀಲ ರಚನೆಗಳಲ್ಲಿ ತೊಡಗಿ ಕೃಷಿಯ ಮಹತ್ವವನ್ನು ಪಸರಿಸುವ ಮನೋಭಾವ | ಪ್ರಾಸ ಪದಗಳು<br><br>ಪದ ವಿಂಗಡಣೆ | ಆಶಯ ಬರವಣಿಗೆ<br><br>ಸ್ವಾರಸ್ಯ ಬರವಣಿಗೆ<br><br>ಟಿಪ್ಪಣಿ ಬರವಣಿಗೆ<br><br>ಲಿಖಿತ ಭಾಷಣ<br><br>ಗಾದೆ ವಿಸ್ತರಣೆ | ನೇಗಿಲ ಯೋಗಿ ಹಾಡಿನ ಧ್ವನಿ ಮುದ್ರಣ<br>ಹಾಡಿನ ಕರೋಕೆ<br>ಗಾದೆಗಳು /<br>ಗಾದೆಗಳ ವಿಸ್ತರಣೆ ಪುಸ್ತಕ<br>ಕೃಷಿಗೆ ಸಂಬಂಧಿಸಿದ ಜನಪದ ಹಾಡುಗಳು<br>ಆಧುನಿಕ ಕೃಷಿ ಯಂತ್ರೋಪಕರಣಗಳ ವೀಡಿಯೋ ತುಣುಕು | ಗುಂಪುಗಳೊಳಗೆ ನಡೆಯುವ ಹಾಡುವಿಕೆ ಸ್ಪರ್ಧೆಯ ಮೌಲ್ಯ ಮಾಪನ |

| | | | | | | | | |
|---|---|---|---|---|---|---|---|---|
| | ಕೃಷಿ ವಸ್ತುವಾಗಿರುವ ಅನೇಕ ಸಾಹಿತ್ಯ ರಚನೆಗಳು ಕನ್ನಡ ಭಾಷೆಯಲ್ಲಿದೆ. | | | | | | | |
| ಸಾವಯವ ಕೃಷಿ | ನಮ್ಮ ನಾಡಿನಲ್ಲೂ ಕೃಷಿಯಲ್ಲಿ ಸಾಧನೆಗೈದ ಸಾಧಕರಿದ್ದಾರೆ.<br><br>ಕೃಷಿಯನ್ನು ಒಂದು ಉದ್ಯಮವಾಗಿ ಬೆಳೆಸಿ ಲಾಭದಾಯಕವಾಗಿ ಮಾಡಬಹುದು.<br><br>ಕೃಷಿಯೊಂದಿಗೆ ಹಲವು ಜೀವಿಗಳ ಸಾಕಣೆಯು ಹೆಚ್ಚು ಲಾಭದಾಯಕವಾಗಿದೆ. | ಬಾಳು ಬೆಳಗಿಸಿದ ಕೃಷಿ (ಅಂಕಣ ಬರಹ) | ವಿವಿಧ ರೀತಿಯ ಪತ್ರಗಳನ್ನು ಅದರ ಚೌಕಟ್ಟಿಗೆ ಹೊಂದಿಕೊಂಡು ಬರೆಯುವ ಸಾಮರ್ಥ್ಯಗಳಿಸುವುದು.<br><br>ಭಾಷಾ ಅಂಶಗಳ ಔಚಿತ್ಯವನ್ನು ತಿಳಿದು ತನ್ನ ರಚನೆಗಳಲ್ಲಿ ಪ್ರಯೋಗಿಸುವುದು. | ಕೃಷಿಕರನ್ನು ಗೌರವಿಸುವ ಮನೋಭಾವ ಬೆಳೆಸುವುದು.<br><br>ಕೃಷಿಯ ಅನಂತ ಸಾಧ್ಯತೆಗಳ ಬಗ್ಗೆ ತಿಳಿಯುವ ಮನೋಭಾವ<br><br>ಜೀವನದಲ್ಲಿ ಎದುರಾಗುವ ಕಷ್ಟಗಳನ್ನು ಮೆಟ್ಟಿ ನಿಂತು ಧೈರ್ಯ ದಿಂದ ಮುನ್ನಡೆಯುವ ಮನೋಭಾವ. | ಅನ್ಯ ದೇಶೀಯ ಪದ<br><br>ಕನ್ನಡ ಅಂಕೆಗಳು | ಟಿಪ್ಪಣಿ<br><br>ಪತ್ರ ಬರವಣಿಗೆ<br><br>ಸಂದರ್ಶನ ಪ್ರಶ್ನಾವಳಿ<br><br>ಪ್ರಬಂಧ ರಚನೆ | ಕೃಷಿ ವಸ್ತುವಾಗಿರುವ ಸಾಹಿತ್ಯ ಪ್ರಕಾರಗಳು<br>ಕನ್ನಡ ಅಂಕೆಗಳ ಪಟ್ಟಿ<br>ಕೃಷಿ ಸಾಧಕರ ಪತ್ರಿಕಾ ತುಣುಕುಗಳು | ಗುಂಪು ಚಟುವಟಿಕೆಗಳಲ್ಲಿ ಮಕ್ಕಳ ಭಾಗವಹಿಸುವಿಕೆಯ ಮೌಲ್ಯ ಮಾಪನ<br><br>ಮಕ್ಕಳು ನಡೆಸುವ ಸಂದರ್ಶನ ಕಾರ್ಯಕ್ರಮ ಮತ್ತು ಅದರ ವರದಿಯ ಮೌಲ್ಯ ಮಾಪನ |

## ಪ್ರವೇಶ ಚಟುವಟಿಕೆ

ವಿದ್ಯಾರ್ಥಿಗಳು ಪ್ರವೇಶ ಚಟುವಟಿಕೆಯಲ್ಲಿ ಕೊಟ್ಟಿರುವ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಸೂಚಿಸುವುದು. ಅನಂತರ ಲಘು ಚರ್ಚೆ ನಡೆಸುವುದು.

**ಚರ್ಚಾ ಸೂಚಕಗಳು :**

- ಒಂದನೇ ಚಿತ್ರದಲ್ಲಿ ನೀವು ಕಾಣುವ ಕೃಷಿ ಚಟುವಟಿಕೆಗಳ ವಿಶೇಷತೆಗಳೇನು?
- ಒಂದು ಮತ್ತು ಎರಡನೇ ಚಿತ್ರಗಳ ಕೃಷಿ ಚಟುವಟಿಕೆಗಳಲ್ಲಿ ನೀವು ಕಾಣುವ ವ್ಯತ್ಯಾಸಗಳೇನು?
- ಮೂರನೇ ಚಿತ್ರದ ಆಧಾರದಲ್ಲಿ ಕೃಷಿ ಕ್ಷೇತ್ರವು ಎದುರಿಸುವ ಸಮಸ್ಯೆಗಳನ್ನು ಹೇಳುವಿರಾ?
- ಹೈನುಗಾರಿಕೆ , ಕೋಳಿ ಸಾಕಣೆ ಹೇಗೆ ಪ್ರಯೋಜನಕಾರಿಯಾಗಿದೆ?
- ನಗರೀಕರಣವು ಕೃಷಿಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ?

ಪಾಠ ಪುಸ್ತಕದಲ್ಲಿ ನೀಡಿರುವ ಚಿತ್ರಗಳ ಸಹಾಯದಿಂದ ತಾವು ಕಂಡು ಕೊಂಡ ವಿಚಾರಗಳನ್ನು ಪ್ರಸ್ತುತ ಪಡಿಸಲು ಅವಕಾಶ ನೀಡುವುದು. ಚರ್ಚೆಯನ್ನು ಅಧ್ಯಾಪಕರು ಮುಂದುವರಿಸುವುದು. ಕೃಷಿ ರಂಗದ ಆಧಾರದಲ್ಲಿ ಪ್ರತಿಯೊಂದು ಚಿತ್ರದ ಬಗ್ಗೆ ತಮ್ಮ ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಚಟುವಟಿಕೆ ಪುಸ್ತಕದಲ್ಲಿ ಬರೆಯಲು ತಿಳಿಸುವುದು. ಬಳಿಕ ವಿದ್ಯಾರ್ಥಿಗಳಲ್ಲಿ ಕೆಲವರು ಗಟ್ಟಿಯಾಗಿ ಓದುವುದು. ಮಕ್ಕಳ ಮಂಡನೆಯನ್ನು ಅಭಿನಂದಿಸುವುದರೊಂದಿಗೆ ಕ್ರೋಡಿಕರಿಸುವುದು.

**ಅನಿಸಿಕೆ ಅಭಿಪ್ರಾಯಗಳ ಕ್ರೋಡೀಕರಣ ಈ ರೀತಿಯೂ ಇರಬಹುದು.**

ಭಾರತೀಯ ಕೃಷಿ ರಂಗದಲ್ಲಿ ಅತ್ಯದ್ಭುತ ಕ್ರಾಂತಿಯುಂಟಾಗಿದೆ. ಹಿಂದಿನ ಕಾಲದಲ್ಲಿ ಎತ್ತುಗಳ ಹಿಂದೆ ನೇಗಿಲು ಹಿಡಿದು ದಿನ ಪೂರ್ತಿ ಓಡಾಡಿ ಗದ್ದೆಗಳನ್ನು ಉಳುತ್ತಿದ್ದರು. ಮನೆ ಮಂದಿಯೆಲ್ಲಾ ಗದ್ದೆಯ ಕೆಲಸ ಕಾರ್ಯಗಳಲ್ಲಿ ರಾತ್ರಿ ಹಗಲು ದುಡಿಯುತ್ತಿದ್ದರು. ಪ್ರತಿಯೊಬ್ಬರೂ ತಮ್ಮ ಎಕರೆಗಟ್ಟಲೆ ಕೃಷಿ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದರು. ಬಿತ್ತನೆ, ಕಳೆ ಕೀಳುವುದು, ಗೊಬ್ಬರ ಹಾಕುವುದು, ನೇಜಿ ನೆಡುವುದು,ಕಟಾವು ಹೀಗೆ ಎಲ್ಲಾ ಕೆಲಸಗಳಿಗೂ ಮನುಷ್ಯ ದೈಹಿಕ ಶ್ರಮವನ್ನೇ ಬಳಸುತ್ತಿದ್ದರಿಂದ ಸಮಯ ಹಾಗೂ ಹಣ ಎರಡೂ ಅಧಿಕವಾಗಿ ವ್ಯರ್ಥವಾಗುತ್ತಿತ್ತು.

ಈಗ ಪರಿಸ್ಥಿತಿ ತುಂಬಾ ಬದಲಾಗಿದೆ. ನೇಗಿಲ ಜಾಗದಲ್ಲಿ ಟಿಲ್ಲರ್ , ಟ್ರ್ಯಾಕ್ಟರ್ ಬಳಕೆಗೆ ಬಂದಿದೆ. ಕೇವಲ ಒಂದೆರಡು ಗಂಟೆಗಳಲ್ಲಿ ಉಳುಮೆ ಮಾಡಲು ಸಾಧ್ಯವಾಗುತ್ತದೆ. ಜೊತೆಗೆ ಬಿತ್ತನೆ ಮಾಡಲು, ಕೊಯ್ಲು ಮಾಡಲು ಹೀಗೆ ಎಲ್ಲಾ ಕೆಲಸಗಳಿಗೆ ಯಂತ್ರಗಳು ಬಳಕೆಯಲ್ಲಿವೆ. ಹಿಂದಿನ ಕಾಲದ ಹಾಗೆ ಅಧಿಕ ಆಳುಗಳ ಶ್ರಮ ಅಗತ್ಯವಿಲ್ಲ. ಈಗ ಹೆಚ್ಚಿನ ರೈತರು ತಮ್ಮ ಸಾಂಪ್ರದಾಯಿಕ ಕೃಷಿ ವಿಧಾನದಿಂದ ವೈಜ್ಞಾನಿಕ ಹಾಗೂ ತಂತ್ರಜ್ಞಾನದಿಂದ ಕೂಡಿದ ಬೇಸಾಯದಲ್ಲಿ ತೊಡಗಿದ್ದಾರೆ. ಮಳೆಗಾಗಿ ಕಾಯದೆ ವಿವಿಧ ನೀರಾವರಿ ವ್ಯವಸ್ಥೆಗಳನ್ನು ಕೃಷಿ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಲಾಗಿದೆ.

ರೈತರು ಬೆಳೆಗಳನ್ನು ಬೆಳೆದು ಫಲ ಪಡೆಯುವ ಮುನ್ನವೇ ಸಾಕಷ್ಟು ಸಮಸ್ಯೆಗಳನ್ನು ಕೂಡಾ ಎದುರಿಸಬೇಕಾಗುತ್ತದೆ. ನೆರೆ

ಹಾವಳಿ, ಕಾಡು ಪ್ರಾಣಿಗಳ ಉಪಟಳ, ರೋಗ ಬಾಧೆ, ನೀರಿನ ಕೊರತೆ ಹೀಗೆ ನಾನಾ ತರದ ತೊಂದರೆಗಳನ್ನು ಎದುರಿಸಲು ಹರಸಾಹಸ ಪಡುತ್ತಾರೆ. ನಷ್ಟವನ್ನು ಸರಿದೂಗಿಸಲು ಸಾಧ್ಯವಾಗದೆ ತಪ್ಪು ನಿರ್ಧಾರಗಳನ್ನು ಕೈಗೊಂಡು ಕೃಷಿಯಿಂದ ದೂರ ಉಳಿಯುವ ಸಂದರ್ಭಗಳು ಇವೆ. ಆದರೆ ಸರಕಾರಗಳು ರೈತರು ಕಷ್ಟದಿಂದ ಪಾರಾಗಲು ವಿವಿಧ ಯೋಜನೆಗಳ ಮೂಲಕ ಬೆಂಬಲವನ್ನು ನೀಡಿ ಕೃಷಿಯನ್ನು ಪ್ರೋತ್ಸಾಹಿಸುತ್ತದೆ.

ಕೃಷಿ ಎನ್ನುವಾಗ ಕೇವಲ ಸಸ್ಯಗಳನ್ನು ಬೆಳೆಸುವುದು ಮಾತ್ರವಲ್ಲ. ಹೈನುಗಾರಿಕೆ, ಕೋಳಿ ಸಾಕಣೆ , ಜೇನು ಕೃಷಿ, ಮೀನು ಕೃಷಿ ಹೀಗೆ ಹಲವು ರೀತಿಯ ಕೃಷಿಗಳಿವೆ.ಇವುಗಳನ್ನು ಸಂಯೋಜಿಸಿಕೊಂಡು ಮಾಡುವ ಮೂಲಕ ಹೆಚ್ಚು ಲಾಭವನ್ನು ಪಡೆಯಲು ಸಾಧ್ಯವಿದೆ. ಹೈನುಗಾರಿಕೆ , ಕೋಳಿ ಸಾಕಣೆಯ ಮೂಲಕ ಸಾವಯವ ಗೊಬ್ಬರವನ್ನು ತಯಾರಿಸಿ ತನ್ನ ಕೃಷಿ ಭೂಮಿಯಲ್ಲಿ ಬಳಸಿ ಉತ್ತಮ ಫಸಲನ್ನೂ ಪಡೆಯಬಹುದು.

ನಗರೀಕರಣದ ಭಾಗವಾಗಿ ಕೃಷಿ ಬಯಲುಗಳಲ್ಲಿ ಬಹುಮಹಡಿ ಕಟ್ಟಡಗಳು ತಲೆಯೆತ್ತಿ ನಿಂತಿವೆ. ಹೆಚ್ಚು ಲಾಭದಾಯಕವಾದ ಉದ್ಯೋಗವನ್ನು ಅರಸುತ್ತಾ ಯುವ ಪೀಳಿಗೆಯು ತಮ್ಮ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ಹೆಜ್ಜೆ ಹಾಕುತ್ತಿದ್ದಾರೆ. ಈಗಲೇ ಎಚ್ಚೆತ್ತು ಜನರಲ್ಲಿ ಕೃಷಿ ಭೂಮಿಯನ್ನು ಉಳಿಸುವ ಜಾಗೃತಿಯನ್ನು ಮೂಡಿಸಬೇಕಿದೆ.

## ಚೆರ‍್ರಿ ಹಣ್ಣಿನ ಮರ

ಕೃಷಿಯಲ್ಲಿ ಖುಷಿಯಿಂದ ತೊಡಗಿಕೊಂಡಾಗ ಮಾತ್ರವೇ ನಾವು ಏನನ್ನಾದರೂ ಸಾಧಿಸಲು ಸಾಧ್ಯ. 'ಚೆರ‍್ರಿ ಹಣ್ಣಿನ ಮರ' ಎಂಬ ಕಥೆಯು ಪ್ರಕೃತಿಯೊಂದಿಗೆ ನಿಕಟ ಸಂಪರ್ಕವನ್ನು ಬೆಳೆಸುವ ಜೊತೆಗೆ ತಾಳ್ಮೆ ಮತ್ತು ಪರಿಶ್ರಮವನ್ನು ಕಲಿಸಿಕೊಡುವ ಸುಂದರವಾದ ಕಥೆಯಾಗಿದೆ. ಬೀಜವು ಫಲ ನೀಡುವ ಮರವಾಗಿ ಬದಲಾಗುವ ಪವಾಡವನ್ನು ಮತ್ತು ಗಿಡವು ಇದಿರಾದ ಎಲ್ಲಾ ಸಮಸ್ಯೆಗಳನ್ನು ಮೆಟ್ಟಿನಿಂತು ಮೇಲೆದ್ದ ಬಗೆಯನ್ನು ತಿಳಿಸಿಕೊಡುತ್ತದೆ. ಸ್ಫೂರ್ತಿದಾಯಕ ಕತೆಯಾಗಿರುವ ಇದು ಕೃಷಿಯ ಬಾಲ ಪಾಠಗಳನ್ನು ಮನಸ್ಸಿನಲ್ಲಿ ಅಚ್ಚೊತ್ತುವ ರೀತಿಯಲ್ಲಿ ಮಂಡಿಸಲಾಗಿದೆ. ತಾವೇ ಬೆಳೆಸಿದ ಮರದಿಂದ ಫಲ ಪಡೆಯುವ ಸಂತೃಪ್ತಿಯು ಎಲ್ಲರಲ್ಲೂ ಕೃಷಿಯ ಕಡೆಗಿನ ಒಲವನ್ನು ಹೆಚ್ಚಿಸುತ್ತದೆ.ಸಣ್ಣ ವಯಸ್ಸಿನಲ್ಲಿಯೇ ಗಿಡಮರಗಳ ಮೇಲೆ ಪ್ರೀತಿ,ಕೃಷಿಯ ಕುರಿತು ಆಸಕ್ತಿ, ಗಿಡಮರಗಳಿಗೂ ಸಂವೇದನೆಗಳಿವೆ ಎನ್ನುವಂತಹ ವಿಚಾರಗಳನ್ನು ಈ ಪಾಠದ ಮೂಲಕ ತಿಳಿದುಕೊಳ್ಳಬಹುದು.ಗಿಡ ಮರಗಳು ಮನುಷ್ಯರಿಗೆ ಮಾತ್ರವಲ್ಲದೆ ಇಡೀ ಪ್ರಾಣಿ ಪ್ರಪಂಚಕ್ಕೆ ಅಮೂಲ್ಯವಾಗಿದೆ ಎಂದು ತಿಳಿದುಕೊಳ್ಳುವುದು.

### ಪಾಠ ಓದುವಿಕೆ

ಅಧ್ಯಾಪಕರು ತರಗತಿಯ ಮಕ್ಕಳಲ್ಲಿ ಕೃಷಿ ಚಟುವಟಿಕೆಗಳ ಬಗ್ಗೆ ಕೆಲವೊಂದು ಪ್ರಶ್ನೆಗಳನ್ನು ಕೇಳುವುದು.

- ನೀವು ಯಾವುದಾದರೂ ಬೀಜ / ಗಿಡಗಳನ್ನು ನೆಟ್ಟು ಬೆಳೆಸಿದ್ದೀರಾ?
- ಕೃಷಿ ಚಟುವಟಿಕೆಗಳಿಗೆ ಯಾವೆಲ್ಲಾ ಉಪಕರಣಗಳ ಅಗತ್ಯವಿದೆ?
- ಯಾವ ಯಾವ ಸೌಲಭ್ಯಗಳು ಬೇಕಾಗುತ್ತವೆ?
- ಈ ಚಟುವಟಿಕೆಯಲ್ಲಿ ನೀವು ಎದುರಿಸಿದ ತೊಂದರೆಗಳು ಯಾವುವು?

ಕೆಲವು ಮಕ್ಕಳ ಪ್ರತಿಕ್ರಿಯೆಯ ಬಳಿಕ 'ಚೆರ್ರಿ ಹಣ್ಣಿನ ಮರ' ಎಂಬ ಪಾಠ ಭಾಗವನ್ನು ಮೌನವಾಗಿ ಓದುವುದು. ಅರ್ಥ ತಿಳಿಯದ ಪದಗಳಿದ್ದರೆ ಪರಸ್ಪರ ಚರ್ಚಿಸಿ ಪದಕೋಶವನ್ನು ಪರಿಶೀಲಿಸಿ ತಿಳಿದುಕೊಳ್ಳುವುದು.. ಅಗತ್ಯವಿದ್ದಲ್ಲಿ ಶಿಕ್ಷಕರು ವಿವರಣೆ ನೀಡುವುದು. ಬಳಿಕ ವಿದ್ಯಾರ್ಥಿಗಳು ಆಶಯಗಳನ್ನು ಹಂಚಿಕೊಳ್ಳುವುದು. ಬಾಯ್ದೆರೆ ಓದು ನಡೆಸುವುದು. ಅಧ್ಯಾಪಕರು ಸ್ವರ ಭಾರ ಏರಿಳಿತದೊಂದಿಗೆ ಓದುವುದು.ಅಗತ್ಯವಿದ್ದಲ್ಲಿ ಅಧ್ಯಾಪಕರು ವಿವರಿಸಿ ವಿದ್ಯಾರ್ಥಿಗಳ ಆಶಯಗ್ರಹಣಕ್ಕೆ ಸಹಕರಿಸುವುದು.

## ವಿಶದೀಕರಣ

ಪಾಠ ಭಾಗದಲ್ಲಿ ಪ್ರಯೋಗಿಸಿದ ಕೆಲವು ಪದಗಳ ವಿಶದೀಕರಣ ಈ ಕೆಳಗೆ ನೀಡಲಾಗಿದೆ.ಅಗತ್ಯವಿರುವ ಸಂದರ್ಭದಲ್ಲಿ ಬಳಸಬೇಕು.

**ಮಸ್ಸೂರಿ ಪೇಟೆ :** ಮಸ್ಸೂರಿಯು ಭಾರತದ ಉತ್ತರಾಖಂಡ ಡೆಹ್ರಾಡೂನ್ ಜಿಲ್ಲೆಯ ಡೆಹ್ರಾಡೂನ್ ನಗರದ ಸಮೀಪವಿರುವ ಗಿರಿಧಾಮವಾಗಿದೆ. ಇದು ಗರ್ವಾಲ್ ಹಿಮಾಲಯ ಶ್ರೇಣಿಯ ತಪ್ಪಲಿನಲ್ಲಿದೆ. ಇದನ್ನು ಬೆಟ್ಟಗಳ ರಾಣಿ ಎಂದು ಕರೆಯುತ್ತಾರೆ.

**ದೇವದಾರು ಮರ :** ಸಮಶೀತೋಷ್ಣ ವಾಯುಗುಣವಿರುವ ಕಾಶ್ಮೀರ , ಗಡವಾಲ್ ಮುಂತಾದ ಪಶ್ಚಿಮ ಹಿಮಾಲಯದ ಪರ್ವತ ಪ್ರದೇಶಗಳಲ್ಲಿ ಇದು ಸ್ವಾಭಾವಿಕವಾಗಿ ಬೆಳೆಯುತ್ತದೆ. ಇದು ದೀರ್ಘಾಯು. ಸುಮಾರು 700 ರಿಂದ 800 ವರ್ಷಗಳ ಕಾಲ ಬದುಕಿರುವ ದಾಖಲೆಗಳಿವೆ. ಪೀಠೋಪಕರಣಗಳ ತಯಾರಿಕೆ ಮಾತ್ರವಲ್ಲದೆ ಇದರ ತೊಗಟೆ, ಗೋಂದು, ದೇವದಾರು ಎಣ್ಣೆ ಇತ್ಯಾದಿಗಳನ್ನು ಔಷಧಿಗಳಿಗಾಗಿಯೂ ಉಪಯೋಗಿಸುತ್ತಾರೆ.

**ಗೊಲ್ಲ ಭಾಮೆ :** (ಹುಲ್ಲು ಕುದುರೆ ) ಸಾಮಾನ್ಯವಾಗಿ ಮಳೆಯ ನಂತರದ ತಿಂಗಳುಗಳಲ್ಲಿ ಕಂಡುಬರುವ ಕೀಟಗಳಾಗಿವೆ. ಈ ಕೀಟವು ಉದ್ದವಾದ ತೆಳ್ಳಗಿನ ದೇಹ, ಉದ್ದವಾದ ಕುತ್ತಿಗೆ, ಚಪ್ಪಟೆ ತೋಳುಗಳು, ತ್ರಿಕೋನ ತಲೆ ಮತ್ತು ಕಣ್ಣುಗಳಿಂದ ರೂಪಿಸಲ್ಪಟ್ಟಿದೆ . ತಲೆಯನ್ನು 180 ಡಿಗ್ರಿ ತಿರುಗಿಸಬಹುದು. ಅವು ಹಸಿರು ಅಥವಾ ಕಂದು ಬಣ್ಣದಲ್ಲಿದ್ದು ಸಸ್ಯಗಳ ನಡುವೆ ಸುಪ್ತವಾಗಿರುವುದರಿಂದ ಗುರುತಿಸುವುದು ಕಷ್ಟ.

**ಓಕ್ ಮರ :** ಪ್ರಪಂಚದ ಉತ್ತರಾರ್ಧ ಗೋಳದ ಸಮಶೀತೋಷ್ಣ ವಲಯದಲ್ಲಿ ಪ್ರಮುಖವಾಗಿ ಬೆಳೆಯುತ್ತಿದ್ದರೂ ಏಷ್ಯಾ ಮತ್ತು ಅಮೇರಿಕಾದ ಉಷ್ಣ ವಲಯದ ಎತ್ತರ ಮತ್ತು ತಂಪಾದ ಹವೆಯಲ್ಲಿ ಬೆಳೆಯುವ ಸಸ್ಯವರ್ಗವಾಗಿದೆ. ಸಾಮಾನ್ಯವಾಗಿ 80 ರಿಂದ 100 ಅಡಿ ಎತ್ತರಕ್ಕೆ ಬೆಳೆಯುತ್ತದೆ. ಭಾರಿ ಸುತ್ತಳತೆಯ ಬುಡವನ್ನು ಅಂಕುಡೊಂಕಾದ ರೆಂಬೆಗಳನ್ನೂ ಹೊಂದಿರುವ ಈ ಮರಗಳು ನಿಜಕ್ಕೂ ಭವ್ಯವಾಗಿರುತ್ತವೆ. ಈ ಮರವನ್ನು ಪೀಠೋಪಕರಣ ಮತ್ತು ಅಲಂಕಾರಿಕ ವಸ್ತುಗಳ ನಿರ್ಮಾಣದಲ್ಲಿ ಬಳಸುತ್ತಾರೆ.

**ನತ್ತಿಂಗ ಹಕ್ಕಿ :** ನಿಶಾಚರ ಪಕ್ಷಿಯಾದ ನತ್ತಿಂಗವು ಹೆಚ್ಚಾಗಿ ನೆಲದ ಮೇಲೆ ಇರುತ್ತವೆ. ರಾತ್ರೆಯಾದಾಗ ಆಹಾರಕ್ಕಾಗಿ ಬೇಟೆಯಾಡುತ್ತವೆ. ಅದರ ಕಣ್ಣುಗಳು ಕತ್ತಲಲ್ಲೂ ಹೊಳೆಯುತ್ತವೆ. ನೆಲದ ಮೇಲೆಯೇ ಮೊಟ್ಟೆ ಇಟ್ಟು ಮರಿಮಾಡುತ್ತವೆ. ನತ್ತಿಂಗ ಪಕ್ಷಿ ಪ್ರಪಂಚದಲ್ಲೇ ಅತ್ಯಂತ ಹೆಚ್ಚು ವರ್ಣತದ್ರೂಪಿ (camouflage) ಎಂದರೆ ಅತಿಶಯೋಕ್ತಿ ಅಲ್ಲ . ನಿಮ್ಮ ಕಾಲ ಬುಡದಲ್ಲಿದ್ದರೂ ಅದರ ಇರುವಿಕೆ ಗೊತ್ತಾಗುವುದಿಲ್ಲ, ಕಾಣದೇ ಕಾಣುವ ಹಕ್ಕಿಗೆ ಹೆಸರೇ "ನತ್ತಿಂಗ".

**ಚಿಮ್ಮುಂಡೆಗಳು, ಸಿಕಾಡಗಳು :** ಇವುಗಳು ಜೀರುಂಡೆಯ ವರ್ಗಕ್ಕೆ ಸೇರಿದ ಕೀಟಗಳು. ತನ್ನ ಮುಂಭಾಗದ ರೆಕ್ಕೆಗಳನ್ನು ಬಡಿಯುವ ಮೂಲಕ  ವಿಶೇಷ ಮಧುರ ಗೀತೆಯನ್ನು ಹೊರಸೂಸುತ್ತದೆ. ಇವುಗಳು ನಿಶಾಚರಿಗಳಾಗಿವೆ. ಬೆಳೆಗಳಿಗೆ ಹಾನಿಯನ್ನು ಉಂಟು ಮಾಡುತ್ತದೆ. ಈ ಕೀಟಗಳ ಸಂಖ್ಯೆ ಕಾಲ ಕ್ರಮೇಣ ಕ್ಷೀಣಿಸ ತೊಡಗಿದ್ದು ಅಳಿವಿನಂಚಿನಲ್ಲಿವೆ.

## ಲೇಖಕರ ಪರಿಚಯ

'ಚೆರ್ರಿ ಹಣ್ಣಿನ ಮರ' ಎಂಬ ಕಥೆಯ ಲೇಖಕರ ಪರಿಚಯ ಭಾಗವನ್ನು ಮಕ್ಕಳು ಮೌನವಾಗಿ ಓದುವುದು. ಬಳಿಕ ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು.

- ಲೇಖಕರ ಕಾರ್ಯ ಕ್ಷೇತ್ರ ಯಾವುದು?
- ಲೇಖಕರು ಬರೆದ ಇತರ ಕೃತಿಗಳು ಯಾವುವು?
- ಅವರಿಗೆ ದೊರೆತ ಪ್ರಶಸ್ತಿಗಳು ಯಾವುವು?

ಈ ಕಥೆಯು ಅನುವಾದಿತ ಕತೆ ಆದುದರಿಂದ ಮೂಲ ಲೇಖಕರ ಲಘು  ಪರಿಚಯವನ್ನು ಅಧ್ಯಾಪಕರು ಮಾಡಬೇಕು. ಹೆಚ್ಚಿನ ವಿವರಗಳನ್ನು ಮಕ್ಕಳಲ್ಲಿ ಸಂಗ್ರಹಿಸಿಕೊಳ್ಳಲು ಸೂಚಿಸಬೇಕು.

## ಮೂಲ ಲೇಖಕರ ಪರಿಚಯ - ರಸ್ಕಿನ್ ಬಾಂಡ್

ಬ್ರಿಟಿಷ್ ಮೂಲದ ಭಾರತೀಯ ಲೇಖಕ ರಸ್ಕಿನ್ ಬಾಂಡ್, ಭಾರತದಲ್ಲಿ ನೆಲೆನಿಂತು ಭಾರತೀಯತೆಯ ಕುರಿತು ಬರೆದ ಇಂಗ್ಲಿಷಿನ ಮಹತ್ವದ ಲೇಖಕರಲ್ಲಿ ಪ್ರಮುಖರು, ಹಿಮಾಚಲ ಪ್ರದೇಶದ ಕಸೌಲಿಯಲ್ಲಿ 1934ರ ಮೇ 19ರಂದು ಜನಿಸಿದ ರಸ್ಕಿನ್ ಬಾಂಡ್ ನೂರಾರು ಕತೆಗಳು, ಪ್ರಬಂಧಗಳು, ಕಾದಂಬರಿಗಳು ಹಾಗೂ ಪ್ರವಾಸ ಕಥನಗಳನ್ನು ಬರೆದಿದ್ದಾರೆ. ಭಾರತದ ಮಸ್ಸೂರಿಯ ಲ್ಯಾಂಡೋರ್ನ್ನಲ್ಲಿ ಅವರು ತಾವು ದತ್ತು ಪಡೆದ ಕುಟುಂಬದೊಂದಿಗೆ ವಾಸಿಸುತ್ತಿದ್ದಾರೆ. ಭಾರತದಲ್ಲಿ ಮಕ್ಕಳ ಶಿಕ್ಷಣಕ್ಕೆ ರಸ್ಕಿನ್ ಬಾಂಡ್ ಅವರು ನೀಡಿರುವ ಸಾಹಿತ್ಯಕ ಕೊಡುಗೆಯನ್ನು ಪರಿಗಣಿಸಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಅವರನ್ನು 1992ರಲ್ಲಿ ಗೌರವಿಸಿದೆ. ಭಾರತ ಸರಕಾರವು 1999ರಲ್ಲಿ ಪದ್ಮಶ್ರೀ  ಪ್ರಶಸ್ತಿ ಮತ್ತು 2014ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಅವರನ್ನು ಗೌರವಿಸಿದೆ.

ರಸ್ಕಿನ್ ಬಾಂಡ್ ಅವರ ಕತೆಗಳು ಬಹು ಬಣ್ಣಗಳು ತುಂಬಿದ ಪ್ರಕೃತಿ - ಪರಿಸರದ ಶಬ್ದಚಿತ್ರಗಳಂತೆ ಕಾಣುತ್ತದೆ. ಮನಸ್ಸಿಗೆ ಚಲನಚಿತ್ರಗಳಾಗಿ ತೋರುತ್ತವೆ. ಇದಕ್ಕೆ ಅನುರೂಪವಾಗಿ ಅವರು ಭಾಷೆಯನ್ನು ಬಳಸುತ್ತಾರೆ. ಇದರಿಂದಾಗಿ ಕತೆಗಳಿಗೆ ಸರಾಗ ಚಲನೆ ದೊರೆತು ನೇರವಾಗಿ ಮನಸ್ಸನ್ನು ಹೊಕ್ಕು ಅರ್ಥಗಳು ಬಿಚ್ಚಿಕೊಳ್ಳುತ್ತವೆ. ಇದಕ್ಕೆ ಇನ್ನೊಂದು ಕಾರಣ ನವಿರಾದ ನಿರೂಪಣೆ.

## ಉತ್ತರಿಸಿರಿ

ಅಧ್ಯಾಪಕರು ತರಗತಿಯಲ್ಲಿ ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು. ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಉತ್ತರಿಸುವುದು. ಹೇಳಿದ ಉತ್ತರವನ್ನು ಪರಸ್ಪರ ಚರ್ಚಿಸಿ ಬರೆದು ಮಂಡಿಸುವುದು. ಅಧ್ಯಾಪಕರ ಮಾರ್ಗದರ್ಶನದಲ್ಲಿ ಉತ್ತಮಪಡಿಸಿ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳುವುದು.ಅಧ್ಯಾಪಕರು ಎಡಿಟಿಂಗ್ ಮಾಡುವುದು.

## ಘಟನೆಗಳ ಕ್ರಮೀಕರಣ

ಮಕ್ಕಳು ಒಬ್ಬೊಬ್ಬರಾಗಿ ಎದ್ದು ನಿಂತು ಪಾಠ ಭಾಗದ ಆಧಾರದಲ್ಲಿ ಕ್ರಮವಾಗಿ ಪ್ರಧಾನ ಘಟನೆಗಳನ್ನು ಬಾಯ್ದೆರೆಯಾಗಿ ಹೇಳುವುದು. ಅದನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಮಕ್ಕಳು ಚಟುವಟಿಕೆ ಪುಸ್ತಕದಲ್ಲಿ ಬರೆಯುವುದು.

## ಕ್ರಮೀಕರಣ ಹೀಗೂ ಇರಬಹುದು

- ರಾಕೇಶ್ ಶಾಲೆಯಿಂದ ಬರುವಾಗ ಚೆರ್ರಿ ಹಣ್ಣುಗಳನ್ನು ಕೊಂಡನು.
- ನೆಲ ಮೆದುವಾಗಿದ್ದರಿಂದ ಬೀಜವನ್ನು ಹಾಗೆಯೇ ಬೆರಳಿನಿಂದ ಒತ್ತಿದನು.
- ರಾಕೇಶ್ ಗಿಡಕ್ಕೆ ನೀರು ಚಿಮುಕಿಸಿ ಅದರ ಸುತ್ತ ಬೆಣಚು ಕಲ್ಲುಗಳನ್ನು ಜೋಡಿಸಿದ.
- ಮೇಕೆಯೊಂದು ಕೈತೋಟ ಪ್ರವೇಶಿಸಿ ಎಲ್ಲಾ ಎಲೆಗಳನ್ನು ತಿಂದು ಹಾಕಿತು.
- ಹುಲ್ಲಿನ ಜೊತೆಯಲ್ಲಿ ಚೆರ್ರಿ ಗಿಡವನ್ನು ಕೊಯ್ದು ಹೆಂಗಸನ್ನು ತಾತ ಚೆನ್ನಾಗಿ ಬೈದರು.
- ಗೊಲ್ಲಬಾಮೆ ತನ್ನ ಕತ್ತನ್ನು ಸುತ್ತ ತಿರುಗಿಸುತ್ತಾ ಅತ್ತಿತ್ತ ನೋಡುತಿತ್ತು.
- ಚೆರಿ ಎಲೆಗಳನ್ನು ತಿಂದ ಕಂಬಳಿ ಹುಳುವನ್ನು ಎತ್ತಿ ಒಣ ಎಲೆಗಳ ಮಧ್ಯೆ ಬಿಟ್ಟ.
- ಬುಲ್ ಬುಲ್ ಮತ್ತು ಚಿತ್ರ ಪಕ್ಷಿಗಳು ಹುಳಿ ಹಣ್ಣನ್ನೇ ಹಬ್ಬದೂಟದಂತೆ ಸವಿದವು.
- “ಇದನ್ನು ನಾವೇ ನೆಟ್ಟು ಬೆಳೆಸಿದ್ದು ಆದ್ದರಿಂದ ಇದು ನಮಗೆ ವಿಶೇಷ” ಎಂದರು ತಾತ.

## ಸಂಭಾಷಣೆ

ಈಗಾಗಲೇ ವಿದ್ಯಾರ್ಥಿಗಳು ‘ಚೆರ್ರಿ ಹಣ್ಣಿನ ಮರ’ ಕಥೆಯನ್ನು ತಿಳಿದುಕೊಂಡಿದ್ದಾರೆ. ರಾಕೇಶನು ತಾತನ ಮನೆಯಿಂದ ಹಳ್ಳಿಗೆ ತೆರಳಿದಾಗ ತಂದೆ ತಾಯಿಯರೊಂದಿಗೆ ನಡೆದಿರಬಹುದಾದ ಸಂಭಾಷಣೆಯನ್ನು ಊಹಿಸಿ ಬರೆಯಲು ಹೇಳುವುದು. ಸಂದರ್ಭದ ಕುರಿತು ಸ್ಪಷ್ಟವಾದ ಮಾಹಿತಿಯನ್ನು ನೀಡುವುದು. ಸಂಭಾಷಣೆ ರಚನೆಗೆ ಮೊದಲು ರಚನೆ ಹೇಗಿರಬೇಕು ಎಂಬುದರ ಕುರಿತು ತರಗತಿ ಚರ್ಚೆ ನಡೆಸುವುದು.

**ಚರ್ಚಾ ಸೂಚಕ**

- ವಿಷಯದ ಪ್ರಾಧಾನ್ಯತೆ (ವಸ್ತು /ಆಶಯ/ ತಿಳುವಳಿಕೆ )
- ಪಾತ್ರಗಳು
- ಭಾವನೆಗೆ ಯೋಗ್ಯವಾದ ಮಾತುಗಳು
- ಲೇಖನ ಚಿಹ್ನೆಗಳ ಬಳಕೆ
- ಮಾತುಗಾರಿಕೆಯ ಶೈಲಿ

ವೈಯಕ್ತಿಕ ರಚನೆಯ ಬಳಿಕ ಗುಂಪಿನಲ್ಲಿ ಕುಳಿತು ಉತ್ತಮಪಡಿಸಿ ಪಾತ್ರವನ್ನು ಹಂಚಿಕೊಂಡು ತರಗತಿಯಲ್ಲಿ ಮಂಡಿಸುವುದು.

**ಸಂಭಾಷಣೆ ಮಾದರಿ**

ರಾಕೇಶ್ : ಅಮ್ಮಾ.......

ತಾಯಿ : ಹಾಂ .... ಮಗನೇ... ತಾತ ಎಲ್ಲಿ ಒಬ್ಬನೇ ಬಂದದ್ದೋ?

ರಾಕೇಶ್ : ಹೌದಮ್ಮ...ತಾತನನ್ನು ಒತ್ತಾಯ ಮಾಡಿದೆ ಅವರು ಮುಂದಿನ ಸಲ ಬರುತ್ತಾರಂತೆ.

ತಾಯಿ : ಕೈ ಕಾಲು ತೊಳೆದು ಒಳಗೆ ಬಾ .... ಮೊದಲು ತಿಂಡಿ ತಿನ್ನು....

ರಾಕೇಶ್ : ಆಯ್ತಮ್ಮ.....

ತಾಯಿ : ಪರೀಕ್ಷೆ ಎಲ್ಲಾ ಹೇಗಿತ್ತು?

ರಾಕೇಶ್ : ಪರೀಕ್ಷೆ ಸ್ವಲ್ಪ ಸುಲಭವಿತ್ತು. ಮುಂದಿನ ವರ್ಷದ ಪಾಠ ಪುಸ್ತಕಗಳನ್ನು ಕೂಡಾ ಕೊಟ್ಟಿದ್ದಾರೆ.

ತಾಯಿ : ಓ ಹೌದೇ ...ಮಳೆ ಶುರುವಾಗಿದೆ ಮಗ..ಅಪ್ಪ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ರಾಕೇಶ್ : ನಾಳೆಯಿಂದ ನಾನು ಅಪ್ಪನ ಜೊತೆ ಗದ್ದೆಗೆ ಹೋಗುತ್ತೇನೆ...

ತಾಯಿ : ಕೃಷಿ ಕೆಲಸ ನಮ್ಮ ಕೈ ಬಿಡುವುದಿಲ್ಲ...

ರಾಕೇಶ್ : ಹೌದು ಅಮ್ಮ .... ತಾತನ ಮನೆಯಲ್ಲಿ ನಾನೊಂದು ಚೆರ್ರಿ ಬೀಜ ಬಿತ್ತಿದ್ದೇನೆ....

ತಾಯಿ : ಬೀಜ ಬಿತ್ತಿದರೆ ಸಾಲದು...ಅದರ ಆರೈಕೆ ಮಾಡಿದರೆ ಮಾತ್ರ ಅದು ಬೆಳೆಯಬಹುದು.

ರಾಕೇಶ್ : ನಾನು ಅದನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ. ದಿನ ನಿತ್ಯ ನೀರು ಅದೇ ರೀತಿ ಗೊಬ್ಬರ ಹಾಕಿ,ಬೇಲಿ ಕಟ್ಟಿ ನೋಡಿ ಕೊಳ್ಳುತ್ತಿದ್ದೇನೆ. ಈಗ ಅದು ಬೆಳೆದು ದೊಡ್ಡದಾಗಿದೆ.

ತಾಯಿ : ಹಾಗದರೆ ಸ್ವಲ್ಪ ಸಮಯದಲ್ಲಿ ಹಣ್ಣು ಆದೀತು.

ರಾಕೇಶ್ : ಹೌದಮ್ಮ..... ಹಣ್ಣಾದಾಗ ನಿನಗೂ ತರುತ್ತೇನೆ.

ತಾಯಿ : ............................................................................................

ರಾಕೇಶ್ : ............................................................................................

## ಅನುಭವ ಟಿಪ್ಪಣಿ

"ಕಾಡಿನಲ್ಲಿ ಬೇಕಾದಷ್ಟು ಮರಗಳಿವೆ. ಆದರೆ ಈ ಮರವನ್ನೇ ನಾವೇಕೆ ಇಷ್ಟಪಡುತ್ತೇವೆ" ಎಂದು ರಾಕೇಶ್ ಕೇಳಿದ ಪ್ರಶ್ನೆಗೆ "ಇದನ್ನ ನಾವೇ ನೆಟ್ಟು ಬೆಳೆಸಿದ್ದು ಆದ್ದರಿಂದ ಇದು ನಮಗೆ ವಿಶೇಷ" ಎಂದರು ತಾತ. - ಈ ಮಾತುಗಳ ಬಗೆಗೆ ತಮ್ಮ ಅಭಿಪ್ರಾಯಗಳನ್ನು ಮತ್ತು ತಾವು ನೆಟ್ಟು ಬೆಳೆಸಿದ ಗಿಡದ ಕುರಿತಾದ ಅನುಭವವನ್ನು ವೈಯಕ್ತಿಕವಾಗಿ ಬರೆದು ಮಂಡಿಸುವುದು. ಮಂಡಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸೂಚಕಗಳ ಆಧಾರದಲ್ಲಿ ಉತ್ತಮವಾದ ಟಿಪ್ಪಣಿಯನ್ನು ಆಯ್ಕೆ ಮಾಡುವುದು. ಸೂಚಕಗಳನ್ನು ತರಗತಿ ಚರ್ಚೆಯ ಆಧಾರದಲ್ಲಿ ಕಂಡುಕೊಳ್ಳುವುದು. ಈ ಮೂಲಕ ತಮ್ಮ ರಚನೆಗಳನ್ನು ಉತ್ತಮಪಡಿಸಿಕೊಳ್ಳುವುದು.

## ಸೂಚಕದಲ್ಲಿ ಏನಿರಬೇಕು?

- ಪಾಠಭಾಗದ ಮಾತುಗಳ ಆಶಯವನ್ನು ಸರಳವಾಗಿ, ಸ್ಪಷ್ಟವಾಗಿ, ಚುಟುಕಾಗಿ ಹೇಳಲಾಗಿದೆ.
- ಆಶಯಗಳು ಅನುಕ್ರಮವಾಗಿ ಬಂದಿವೆ.
- ಅಭಿಪ್ರಾಯ , ಸ್ವ ಅನುಭವದ ಪ್ರಕಟಣೆ.
- ನಿರೂಪಣೆಯ ಶೈಲಿ, ಭಾಷೆ ಉತ್ತಮವಾಗಿದೆ.

## ಅನುಭವ ಟಿಪ್ಪಣಿ ಮಾದರಿ

ನನ್ನ ಹತ್ತನೇ ವರ್ಷದ ಹುಟ್ಟುಹಬ್ಬಕ್ಕೆ ನನ್ನ ಬಂದುಗಳು ಮತ್ತು ಗೆಳೆಯರು ಹಲವು ಉಡುಗೊರೆಗಳನ್ನು ಕೊಟ್ಟರು.. ಅವುಗಳಲ್ಲಿ ನನಗೆ ನನ್ನ ಮಾವ ಕೊಟ್ಟ ಜಂಬು ನೇರಳೆ ಗಿಡ ತುಂಬಾ ಇಷ್ಟವಾಯಿತು.ಅಪ್ಪನ ಸಲಹೆ ಸಹಾಯದೊಂದಿಗೆ ಮರುದಿನ ಬೆಳಗ್ಗೆ ಅಂಗಳದ ಬದಿಯ ತೋಟದಲ್ಲಿ ನೆಟ್ಟೆನು. ಪ್ರತಿ ದಿನವೂ ಅದಕ್ಕೆ ನೀರನ್ನು ಹಾಕುತ್ತಿದ್ದೆನು. ನೋಡು ನೋಡುತ್ತಿದ್ದಂತೆಯೇ ಆ ಗಿಡ ಚಿಗುರಿ ಎತ್ತರಕ್ಕೆ ಬೆಳೆಯಲು ಪ್ರಾರಂಭಿಸಿತು.ಆದರೆ ನಮ್ಮ ನೆರೆ ಮನೆಯ ಹಸುವೊಂದು ಬಂದು ಗಿಡದ ಎಲೆಗಳನ್ನೆಲ್ಲಾ ತಿಂದು ಹಾಳು ಮಾಡಿದಾಗ ತುಂಬಾ ಬೇಸರವಾಯಿತು. ಆದರೆ ಗಿಡದ ಕಾಂಡ ಹಸಿಯಾಗಿಯೇ ಇದ್ದುದರಿಂದ ಅದು ಬೆಳೆಯಬಹುದೆಂಬ ಆಶಾ ಭಾವನೆಯಿಂದ ನಾನು ನೀರರುದನ್ನು ನಿಲ್ಲಿಸಲಿಲ್ಲ.ಗೊಬ್ಬರವನ್ನು ಹಾಕಿದೆ. ಉತ್ತಮವಾದ ಬೇಲಿಯನ್ನು ಕಟ್ಟಿ ಸಂರಕ್ಷಿಸಿದೆ. ನನ್ನಾಸೆಯಂತೆ ಗಿಡ ಮತ್ತೆ ಚಿಗುರಿ

ಹೂ ಬಿಟ್ಟಿತು. ಕಾಯಿಗಳು ಬೆಳೆದು ಹಣ್ಣಾದುವು. ಗಿಡದ ಹಣ್ಣಿಗಾಗಿ ಪ್ರಾಣಿ ಪಕ್ಷಿಗಳು ತೋಟಕ್ಕೆ ಬರುತ್ತವೆ. ನನ್ನ ಗೆಳೆಯರಿಗೆ ನೆರೆಹೊರೆಯವರಿಗೆ ಹಣ್ಣನ್ನು ಕೊಯ್ದು ಕೊಡುತ್ತೇನೆ. ನಾನು ನೆಟ್ಟು ಬೆಳೆಸಿದ ಗಿಡದ ಹಣ್ಣು ತಿನ್ನುವಾಗ ತುಂಬಾ ಖುಷಿ ಎನಿಸುತ್ತದೆ.

## ಕಿರು ಲೇಖನ

ಕೇವಲ ಆಲಿಸುವುದರಿಂದ ಓದುವುದರಿಂದ ಮಾತ್ರ ನಮ್ಮ ಭಾಷಾ ಜ್ಞಾನ ವೃದ್ಧಿಯಾಗುವುದಿಲ್ಲ. ಗಳಿಸಿದ ಪದ ಸಂಪತ್ತನ್ನು, ಆಶಯ ತಿಳುವಳಿಕೆಗಳನ್ನು ಯೋಗ್ಯ ಸಂದರ್ಭಗಳಲ್ಲಿ ಬಳಸುವುದು ಗೊತ್ತಿದ್ದರೆ ಭಾಷಾ ಜ್ಞಾನ ಬೆಳೆಯುತ್ತದೆ. ಭಾಷಾ ಜ್ಞಾನ ಬೆಳೆಯಲು ಕಿರು ಲೇಖನ ರಚನೆ ಒಂದು ಪ್ರಧಾನ ಸಾಧನವಾಗಿದೆ.ಮಾತ್ರವಲ್ಲ ಮಕ್ಕಳ ಜ್ಞಾನವನ್ನು ಅಳೆಯಲಿರುವ ಮಾಪಕವೂ ಆಗಿದೆ. ಆದುದರಿಂದ ಇಂತಹ ಚಟುವಟಿಕೆಗಳು ಉತ್ತಮ ರೀತಿಯಲ್ಲಿ ನಡೆಸಬೇಕಾಗಿದೆ.

ಗಿಡ ಮರಗಳಿಂದ ನಮಗೆ ದೊರಕುವ ಪ್ರಯೋಜನಗಳ ಕುರಿತು ಕಿರು ಲೇಖನ ಬರೆಯುವ ಮೊದಲು ಪ್ರಯೋಜನಗಳನ್ನು ಬಾಯ್ದೆರೆಯಾಗಿ ಹೇಳಿಸುವುದು. ಅಧ್ಯಾಪಕರು ಕರಿಹಲಗೆಯಲ್ಲಿ ಗಿಡಮರಗಳ ಕುರಿತು ಆಶಯ ಭೂಪಟ ಮಾಡುವುದು. ನಂತರ ಮಕ್ಕಳು ವೈಯಕ್ತಿಕವಾಗಿ ಲೇಖನ ಬರೆಯುವುದು.ಗುಂಪಿನಲ್ಲಿ ಮಂಡಿಸುವುದು. ಉತ್ತಮಪಡಿಸಿ ತರಗತಿಯಲ್ಲಿ ಮಂಡಿಸುವುದು. ಅಧ್ಯಾಪಕರು ಸೂಕ್ತ ಸಲಹೆ ಸೂಚನೆಗಳನ್ನು ನೀಡುವುದು.

## ಕಿರು ಲೇಖನ ಹೀಗೂ ಇರಬಹುದಲ್ಲವೇ?

ಗಿಡ ಮರಗಳು ಭೂಮಿಯ ಮೇಲಿನ ಜೀವ ಸಂಕುಲಗಳನ್ನು ಉಳಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಪ್ರಕೃತಿ ಸೌಂದರ್ಯದ ಜೊತೆ ಅನೇಕ ಪ್ರಯೋಜನಗಳನ್ನು ನೀಡುತ್ತವೆ. ನಾವು ಉಸಿರಾಡುವ ಗಾಳಿಯನ್ನು ಶುದ್ಧೀಕರಿಸುವುದರಿಂದ ಹಿಡಿದು ಆಹಾರ, ವಸತಿ ಮತ್ತು ಔಷಧವನ್ನು ಒದಗಿಸುವವರೆಗೆ, ಅವುಗಳ ಮಹತ್ವವನ್ನು ನಿರಾಕರಿಸಲಾಗದು.

ಮೊದಲನೆಯದಾಗಿ, ಅಮೆಜಾನ್ ಮಳೆಕಾಡುಗಳಂತಹ ಮರಗಳು ಪ್ರಪಂಚದ ಆಮ್ಲಜನಕದ ಗಣನೀಯ ಭಾಗವನ್ನು ಒದಗಿಸುತ್ತವೆ, ಇದು ಭೂಮಂಡಲದ ಶ್ವಾಸಕೋಶವಾಗಿ ಕಾರ್ಯನಿರ್ವಹಿಸುತ್ತದೆ. ಅವುಗಳು ಇಂಗಾಲದ ಡೈಆಕ್ಸೈಡ್ ಅನ್ನು ಹೀರಿಕೊಂಡು ಶುದ್ಧ ಅನಿಲವನ್ನು ನೀಡುತ್ತದೆ. ಹವಾಮಾನ ಬದಲಾವಣೆಯ ಪರಿಣಾಮಗಳನ್ನು ತಗ್ಗಿಸುತ್ತವೆ. ಹೆಚ್ಚುವರಿಯಾಗಿ, ಅರಣ್ಯಗಳು ಅಸಂಖ್ಯಾತ ಜೀವಿಗಳ ಆವಾಸಸ್ಥಾನಗಳಾಗಿ ಕಾರ್ಯನಿರ್ವಹಿಸುತ್ತವೆ, ಜೀವವೈವಿಧ್ಯತೆಯನ್ನು ಬೆಳೆಸುತ್ತವೆ ಮತ್ತು ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳುತ್ತವೆ.

ಪೋಷಣೆಯ ವಿಷಯದಲ್ಲಿ, ಗಿಡ ಮರಗಳು ಹಣ್ಣುಗಳು, ತರಕಾರಿಗಳು, ಧಾನ್ಯಗಳು ಮತ್ತು ಬೀಜಗಳನ್ನು ನೀಡುತ್ತವೆ. ಇದು ಮಾನವ ಪೋಷಣೆಯ ಮೂಲಾಧಾರವಾಗಿದೆ. ಅಕ್ಕಿ, ಗೋಧಿ ಮತ್ತು ಮೆಕ್ಕೆ ಜೋಳದಂತಹ ಪ್ರಧಾನ ಬೆಳೆಗಳು ಪ್ರಪಂಚದಾದ್ಯಂತ ಶತಕೋಟಿ ಜನರಿಗೆ ಆಹಾರವನ್ನು ನೀಡುತ್ತವೆ. ಆದರೆ ಸೇಬುಗಳು, ಬಾಳೆಹಣ್ಣುಗಳು ಮತ್ತು ಕಿತ್ತಳೆಗಳಂತಹ ಹಣ್ಣುಗಳು ಅಗತ್ಯವಾದ ಜೀವಸತ್ವಗಳು ಮತ್ತು ಖನಿಜಗಳನ್ನು ಒದಗಿಸುತ್ತವೆ. ಇದಲ್ಲದೆ,

ಸಸ್ಯಗಳನ್ನು ದೀರ್ಘಕಾಲದವರೆಗೆ ಔಷಧೀಯ ಉದ್ದೇಶಗಳಿಗಾಗಿ ಬಳಸಲಾಗಿದೆ. ಸಾಂಪ್ರದಾಯಿಕ ಚಿಕಿತ್ಸಾ ವ್ಯವಸ್ಥೆಗಳಾದ ಆಯುರ್ವೇದ ಮತ್ತು ಸಾಂಪ್ರದಾಯಿಕ ಚೈನೀಸ್ ಮೆಡಿಸಿನ್ ಸಸ್ಯ ಆಧಾರಿತ ಪರಿಹಾರಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಸಸ್ಯಗಳು ಆಧುನಿಕ ವೈದ್ಯಕೀಯಕ್ಕೆ ಅಪಾರ ಕೊಡುಗೆಯನ್ನು ನೀಡಿವೆ.

ನೈಸರ್ಗಿಕ ವಿಪತ್ತುಗಳನ್ನು ತಗ್ಗಿಸುವಲ್ಲಿ ಸಸ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಮ್ಯಾಂಗ್ರೋವ್ಗಳು ಕರಾವಳಿಯ ಸವೆತ ಮತ್ತು ಚಂಡಮಾರುತದ ಉಲ್ಬಣಗಳ ವಿರುದ್ಧ ನೈಸರ್ಗಿಕ ಬಫರ್ಗಳಾಗಿ ಕಾರ್ಯನಿರ್ವಹಿಸುತ್ತವೆ, ಆದರೆ ಕಾಡುಗಳು ಮಣ್ಣನ್ನು ಸ್ಥಿರಗೊಳಿಸುವ ಮತ್ತು ನೀರಿನ ಹರಿವನ್ನು ನಿಯಂತ್ರಿಸುವ ಮೂಲಕ ಭೂಕುಸಿತ ಮತ್ತು ಪ್ರವಾಹದ ಅಪಾಯವನ್ನು ಕಡಿಮೆ ಮಾಡುತ್ತದೆ. ನಗರ ಪರಿಸರದಲ್ಲಿ, ಮರಗಳು ವಾಯು ಮಾಲಿನ್ಯವನ್ನು ಕಡಿಮೆ ಮಾಡುವ ಮೂಲಕ, ಶಬ್ದವನ್ನು ಹೀರಿಕೊಳ್ಳುವ ಮತ್ತು ನೆರಳು ಮತ್ತು ತಂಪಾಗಿಸುವ ಪರಿಣಾಮಗಳನ್ನು ಒದಗಿಸುವ ಮೂಲಕ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ. ಹಸಿರು ಸ್ಥಳಗಳು ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಕೊಡುಗೆ ನೀಡುತ್ತವೆ, ನಗರ ಜೀವನದ ಜಂಜಾಟದಿಂದ ಬಿಡುವು ನೀಡುತ್ತವೆ.

ಒಟ್ಟಿನಲ್ಲಿ ಗಿಡ ಮರಗಳು ಕೇವಲ ಅಲಂಕಾರಿಕ ಅಂಶಗಳಲ್ಲ, ಭೂಮಿಯಲ್ಲಿನ ಆರೋಗ್ಯ ಮತ್ತು ಸಮೃದ್ಧಿಗೆ ಅನಿವಾರ್ಯ ಕೊಡುಗೆಗಳಾಗಿವೆ. ಮುಂದಿನ ಪೀಳಿಗೆಗೆ ಸುಸ್ಥಿರ ಭವಿಷ್ಯವನ್ನು ಖಚಿತಪಡಿಸಿಕೊಳ್ಳಲು ಅವುಗಳನ್ನು ಸಂರಕ್ಷಿಸುವುದು ಮತ್ತು ಪೋಷಿಸುವುದು ಅತ್ಯಗತ್ಯವಾಗಿದೆ.

## ವಿವರಣೆ ಬರೆಯಿರಿ

ಈ ಪಾಠ ಭಾಗದಲ್ಲಿ ಬರುವ ಪ್ರಧಾನ ವ್ಯವಹಾರ ರೂಪವು ವಿವರಣೆಯಾಗಿದೆ. ವಿದ್ಯಾರ್ಥಿಗಳು ಒಂದು ವಿಷಯದ ಬಗ್ಗೆ ಸ್ಫುಟವಾಗಿ ಮಾತನಾಡಲೂ ವಿವರಣೆ ನೀಡಲೂ, ಬರೆಯಲು ಶಕ್ತರಾಗಬೇಕು ಎಂಬ ಉದ್ದೇಶದಿಂದ ಈ ಚಟುವಟಿಕೆಯನ್ನು ಅಳವಡಿಸಲಾಗಿದೆ. ಅಧ್ಯಾಪಕರು ಚೆರ್ರಿ ಹಣ್ಣಿನ ವಿವರಣೆಯನ್ನು ಐ.ಸಿ.ಟಿ ಯ ಸಹಾಯದೊಂದಿಗೆ ತರಗತಿಯಲ್ಲಿ ಪ್ರದರ್ಶಿಸುವುದು.

### ಚೆರ್ರಿ ಹಣ್ಣುಗಳು

ಚೆರ್ರಿ ಹಣ್ಣುಗಳು ನಯವಾದ, ಹೊಳೆಯುವ ಸಿಪ್ಪೆಯ ಸಣ್ಣ, ದುಂಡಗಿನ ಹಣ್ಣುಗಳಾಗಿವೆ. ಇದು ಗಾಢವಾದ ಕೆಂಪು ಬಣ್ಣದಿಂದ ಬಹುತೇಕ ಕಪ್ಪು ಬಣ್ಣವನ್ನು ಹೊಂದಿರುತ್ತದೆ. ಇವುಗಳು ಸಾಮಾನ್ಯವಾಗಿ ಮರಗಳ ಮೇಲೆ ಬೆಳೆಯುತ್ತವೆ. ಸಿಹಿ ಮತ್ತು ಕಟುವಾದ ಪರಿಮಳಕ್ಕೆ ಹೆಸರುವಾಸಿಯಾಗಿದೆ. ಸಿಹಿ ಚೆರ್ರಿಗಳು ಮತ್ತು ಹುಳಿ ಚೆರ್ರಿಗಳು ಸೇರಿದಂತೆ ಹಲವಾರು ವಿಧದ ಚೆರ್ರಿಗಳಿವೆ. ಪ್ರತಿಯೊಂದೂ ತನ್ನದೇ ಆದ ವಿಭಿನ್ನ ರುಚಿ ಮತ್ತು ಉಪಯೋಗಗಳನ್ನು ಹೊಂದಿದೆ.

ಸಿಹಿ ಚೆರ್ರಿಗಳನ್ನು ಸಾಮಾನ್ಯವಾಗಿ ತಾಜಾವಾಗಿ ಸೇವಿಸಲಾಗುತ್ತದೆ ಮತ್ತು ಕೆಲವೊಂದು ಸಿಹಿತಿಂಡಿಗಳಲ್ಲಿ ಹೆಚ್ಚಾಗಿ ಇದನ್ನು ಬಳಸಲಾಗುತ್ತದೆ. ಇವುಗಳ ರಸಭರಿತವಾದ ಮಾಂಸಲ ಮತ್ತು ಸಿಹಿ ಸುವಾಸನೆಯನ್ನು ಎಲ್ಲರೂ ಇಷ್ಟಪಡುತ್ತಾರೆ.

ಹುಳಿ ಚೆರ್ರಿಗಳು ಎಂದೂ ಕರೆಯಲ್ಪಡುವ ಟಾರ್ಟ್ ಚೆರ್ರಿಗಳು ಹೆಚ್ಚು ಆಮ್ಲೀಯ ರುಚಿಯನ್ನು ಹೊಂದಿರುತ್ತವೆ.

ಇದನ್ನು ಹೆಚ್ಚಾಗಿ ಅಡುಗೆ ಮತ್ತು ಬೇಕರಿಗಳಲ್ಲಿ ಬಳಸಲಾಗುತ್ತದೆ. ಸಾಮಾನ್ಯವಾಗಿ ಜಾಮ್ಗಳು, ಸಾಸ್ಗಳು ಮತ್ತು ಚೆರ್ರಿ ರುಚಿಯ ಪಾನೀಯಗಳನ್ನು ತಯಾರಿಸಲು ಕೂಡಾ ಬಳಸುತ್ತಾರೆ.

ಚೆರ್ರಿಗಳು ರುಚಿಕರ ಮಾತ್ರವಲ್ಲ ಉತ್ತಮ ಪೋಷಕಾಂಶಗಳಿಂದ ಕೂಡಿದೆ. ಅವು ವಿಟಮಿನ್ ಎ ಮತ್ತು ಸಿ, ಹಾಗೆಯೇ ಪೊಟ್ಯಾಸಿಯಮ್ ಮತ್ತು ಆಂಥೋಸಯಾನಿನ್ಗಳ ಉತ್ತಮ ಮೂಲವಾಗಿದೆ. ಈ ಸಂಯುಕ್ತಗಳು ವಿವಿಧ ಆರೋಗ್ಯ ಪ್ರಯೋಜನಗಳಿಗೆ ಸಹಕಾರಿಯಾಗಿವೆ. ಉರಿಯೂತ ಮತ್ತು ಕೆಲವು ರೀತಿಯ ಕ್ಯಾನ್ಸರ್ ವಿರುದ್ಧ ರಕ್ಷಣೆ ಜೊತೆಗೆ ಹೃದಯದ ಆರೋಗ್ಯಕ್ಕೆ ಉತ್ತಮವಾಗಿದೆ.

ಒಟ್ಟಾರೆಯಾಗಿ, ಚೆರ್ರಿಗಳು ಬಹುಮುಖ ಮತ್ತು ಪೌಷ್ಟಿಕಾಂಶದ ಹಣ್ಣಾಗಿದ್ದು, ಇದನ್ನು ತಾಜಾ, ಬೇಯಿಸಿದ ಅಥವಾ ಸಂರಕ್ಷಿಸಿದ ವಿವಿಧ ರೀತಿಯಲ್ಲಿ ಬಳಸಬಹುದು. ಅವುಗಳ ರೋಮಾಂಚಕ ಬಣ್ಣ, ರುಚಿಕರವಾದ ಸುವಾಸನೆ ಮತ್ತು ಹಲವಾರು ಆರೋಗ್ಯ ಪ್ರಯೋಜನಗಳು ಅವುಗಳನ್ನು ಹಣ್ಣು ಪ್ರಿಯರಲ್ಲಿ ಜನಪ್ರಿಯ ಆಯ್ಕೆಯನ್ನಾಗಿ ಮಾಡುತ್ತದೆ.

## ವಿವರಣೆ ಹೇಗಿರಬೇಕು?

- ಆಶಯ ಸ್ಪಷ್ಟತೆಯಿರಬೇಕು
- ಆಶಯ ಕ್ರಮೀಕರಣವಿರಬೇಕು
- ಉತ್ತಮ ಭಾಷಾ ಶೈಲಿ ಇರಬೇಕು.

ಅಧ್ಯಾಪಕರು ಮಕ್ಕಳಿಗೆ ಪರಿಚಯವಿರುವ ವಿವಿಧ ಹಣ್ಣುಗಳ ಹೆಸರುಗಳನ್ನು ಹೇಳಲು ಸೂಚಿಸುವುದು. ಕರಿಹಲಗೆಯಲ್ಲಿ ಪಟ್ಟಿ ಮಾಡುವುದು. ಮಕ್ಕಳು ಅವುಗಳಲ್ಲಿ ತಮಗಿಷ್ಟವಾದ ಒಂದು ಹಣ್ಣಿನ ಬಗ್ಗೆ ವಿವರಣೆಯನ್ನು ವೈಯಕ್ತಿಕವಾಗಿ ಬರೆಯುವುದು. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ಮಾಡುವುದು. ಕೆಲವು ವಿದ್ಯಾರ್ಥಿಗಳಲ್ಲಿ ವಿವರಣೆಯನ್ನು ಗಟ್ಟಿಯಾಗಿ ಓದಿಸುವುದು. ಉತ್ತಮ ಪಡಿಸಲಿರುವ ಸಲಹೆಗಳನ್ನು ಮತ್ತು ಬಿಟ್ಟು ಹೋದ ಅಂಶಗಳನ್ನು ಚರ್ಚೆಯ ಮೂಲಕ ಸೇರಿಸುವುದು. ಎಲ್ಲ ಮಕ್ಕಳಿಗೆ ಕಾಗದ ನೀಡಿ ಹಣ್ಣಿನ ವಿವರಣೆ ಬರೆಸುವುದು. ಹಣ್ಣುಗಳ ಆಲ್ಬಂ ತಯಾರಿಸಿ ಬಾಲಸಭೆಯಲ್ಲಿ ಬಿಡುಗಡೆ ಮಾಡುವುದು.

## ಸಂಯುಕ್ತ - ಸರಳ ವಾಕ್ಯ

ಸರಳ ಹಾಗೂ ಸಂಯುಕ್ತ ವಾಕ್ಯಗಳೊಳಗಿನ ವ್ಯತ್ಯಾಸವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದೇ ಈ ಚಟುವಟಿಕೆಯ ಉದ್ದೇಶವಾಗಿದೆ. ಸರಳ ವಾಕ್ಯಗಳಲ್ಲಿ ಒಂದು ಪೂರ್ಣ ಕ್ರಿಯಾಪದವಿರುತ್ತದೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಸರಳ ವಾಕ್ಯಗಳು ಕೂಡಿಕೊಂಡಿರುವ ವಾಕ್ಯವೇ ಸಂಯುಕ್ತ ವಾಕ್ಯವಾಗಿದೆ.

ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ಕೊಟ್ಟಿರುವ ಉದಾಹರಣೆಗಳನ್ನು ಗಮನಿಸಿಕೊಂಡು ಸಂಯುಕ್ತ ವಾಕ್ಯವನ್ನು ಸರಳ ವಾಕ್ಯಗಳಾಗಿ ಬರೆಯುವುದು.

- ರಾಕೇಶ್ ಗಿಡಕ್ಕೆ ನೀರು ಚಿಮುಕಿಸಿದನು. ಅವನು ಅದರ ಸುತ್ತ ಬೆಣಚು ಕಲ್ಲುಗಳನ್ನು ಜೋಡಿಸಿದನು.
- ಗಿಡದ ಮುಂದೆ ರಾಕೇಶ್ ಕುಕ್ಕರಗಾಲಲ್ಲಿ ಕುಳಿತನು. ಅವನ ತಾತ ಸೊಂಟವನ್ನು ಬಗ್ಗಿಸಿ ನೋಡಿದರು.
- ಬೆಟ್ಟದಿಂದ ಹುಲ್ಲು ಕೊಯ್ದುಕೊಂಡು ಹೋಗಲು ಬರುವ ಹೆಂಗಸು. ಅವಳು ತನ್ನ ಕುಡುಗೋಲಿನಿಂದ ಹುಲ್ಲಿನ ಜೊತೆಯಲ್ಲಿ ಚೆರ್ರಿ ಗಿಡವನ್ನೂ ಕೊಯ್ದು ಹಾಕಿದಳು.
- ರಾಕೇಶ್ ಚೆರ್ರಿ ಹಣ್ಣನ್ನು ಬಾಯಲ್ಲಿ ಇಟ್ಟುಕೊಂಡನು. ಅವನು 'ತುಂಬಾ ಹುಳಿ' ಎಂದು ತಕ್ಷಣ ಉಗಿದು ಬಿಟ್ಟನು.

# ನೇಗಿಲ ಯೋಗಿ

ಸಾಂಪ್ರದಾಯಿಕ ಕೃಷಿ ವಿಧಾನದಿಂದ ಆಧುನಿಕ ವೈಜ್ಞಾನಿಕ ತಂತ್ರಜ್ಞಾನಾಧಾರಿತ ಕೃಷಿ ರೀತಿಗೆ ರೈತರು ಬದಲಾಗುತ್ತಿದ್ದಾರೆ. ಈ ಕಾರಣದಿಂದ ಸಾಂಪ್ರದಾಯಿಕ ಕೃಷಿ ಶೈಲಿಯು ಕಣ್ಣಿಗೆ ದೂರವಾಗುತ್ತಿದೆ. ಭೂಮಿಯ ಜೈವಿಕ ಸತ್ವವನ್ನುನಾಶಮಾಡದೆ ಉತ್ತು ಬಿತ್ತಿ ಬೆಳೆ ತೆಗೆಯುವುದು ಮತ್ತು ಅಧಿಕ ಹಣದ ಖರ್ಚಿಲ್ಲದೆ ಹವಾಮಾನಕ್ಕೆ ಹೊಂದಿಕೊಂಡ ಸರಳ ಜ್ಞಾನ ಪ್ರಯೋಗದಲ್ಲಿ ವ್ಯವಸಾಯ ಮಾಡುವುದು, ದುರಾಸೆಗೆ ಬಲಿಯಾಗದೇ ನಿರಾಶೆಯ ಕೂಪಕ್ಕೂ ಬೀಳದೇ ಸಮಸ್ಥಿತಿಯ ಕೃಷಿ ಬದುಕನ್ನು ಕಟ್ಟಿಕೊಳ್ಳುವುದು, ಸಾಂಪ್ರದಾಯಿಕ ಕೃಷಿ ರೀತಿಯಲ್ಲಾಗಿದೆ. ಕುವೆಂಪುರವರ 'ನೇಗಿಲ ಯೋಗಿ' ಕವನದಲ್ಲಿ ಫಲಾಪೇಕ್ಷೆಯಿಲ್ಲದೆ ಪರರ ಸೇವೆಗೈಯುವ ರೈತನ ಬದುಕಿನ ಚಿತ್ರಣವಿದೆ. ಸಾಂಪ್ರದಾಯಿಕ ಕೃಷಿ ಶೈಲಿಯ ಬದುಕನ್ನು ಈ ಕವನದಲ್ಲಿ ಬಿಂಬಿಸಲಾಗಿದೆ. ಕೃಷಿಯು ನಮ್ಮ ಜನರಿಗೆ ಪ್ರಧಾನ ಉದ್ಯೋಗ ಅಂತೆಯೇ ನಮ್ಮ ಜನರು ಕೃಷಿಯನ್ನು ಪ್ರೀತಿಸುವುದರೊಂದಿಗೆ ಅದನ್ನೊಂದು ಜೀವನದ ಭಾಗವಾಗಿಯೂ ತಪಸ್ಸಿನಂತೆಯೂ ಕಾಣುತ್ತಿದ್ದರು ಎಂದು ಕವಿ ಈ ಕವನದಲ್ಲಿ ವಿವರಿಸಿರುವುದನ್ನು ಕಾಣಬಹುದು.

## ಕವಿ ಪರಿಚಯ

ಕವಿ ಪರಿಚಯವನ್ನು ಮೌನವಾಗಿ ಓದುವುದು. ಕೆಲವರಲ್ಲಿ ಗಟ್ಟಿಯಾಗಿ ಓದಿಸುವುದು. ವಿದ್ಯಾರ್ಥಿಗಳು ಕವಿಯ ಕೃತಿಗಳು, ಪ್ರಶಸ್ತಿಗಳು ಇತ್ಯಾದಿಗಳನ್ನು ಆ ಭಾಗದಿಂದ ಗುರುತಿಸುವುದು. ಆಶಯ ಗ್ರಹಣ ಪ್ರಶ್ನೆಗಳ ಮೂಲಕ ಕುವೆಂಪುರವರ ವಿಶೇಷ ವ್ಯಕ್ತಿತ್ವದ ಕುರಿತು ವಿದ್ಯಾರ್ಥಿಗಳ ಗಮನ ಸೆಳೆಯುವುದು. ಅನಂತರ ಅಧ್ಯಾಪಕರು ಎಲ್.ಸಿ.ಡಿ ಮೂಲಕ ಕುವೆಂಪುರವರ ಚಿತ್ರ ಅವರ ಕವಿ ಪರಿಚಯವನ್ನು ತೋರಿಸುವುದು.

## ಹಾಡಿರಿ

ತರಗತಿಯಲ್ಲಿ ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಹತ್ತು ನಿಮಿಷ ಸಮಯವಕಾಶವನ್ನು ಕೊಟ್ಟು ಕವನಕ್ಕೆ ರಾಗ ಸಂಯೋಜಿಸಲು ಹೇಳುವುದು. ನಿಶ್ಚಿತ ಸಮಯದ ಬಳಿಕ ಗುಂಪುಗಳಿಂದ ಹಾಡುವ ಸ್ಪರ್ಧೆಯನ್ನು ನಡೆಸುವುದು. ಗುಂಪುಗಳು ಹಾಡುವಿಕೆಯನ್ನು ಪರಸ್ಪರ ಮೌಲ್ಯಮಾಪನ ಮಾಡುವುದು. ಹಾಡುವಿಕೆಯ ಮೌಲ್ಯಮಾಪನ ಸೂಚಕವನ್ನು ಕರಿಹಲಗೆಯಲ್ಲಿ ಪಟ್ಟಿ ಮಾಡುವುದು.

**ಹಾಡುವಿಕೆಯ ಮೌಲ್ಯಮಾಪನ ಸೂಚಕಗಳು**

- ರಾಗ / ತಾಳ / ಲಯ
- ಭಾವ
- ಉಚ್ಚಾರ ಸ್ಪಷ್ಟತೆ
- ಪದ ವಿಂಗಡಿಸಿದ ರೀತಿ ಸರಿಯಾಗಿರುವುದು.
- ಆಶಯ ಸ್ಪಷ್ಟತೆ
- ಗುಂಪಿನಲ್ಲಿ ಎಲ್ಲರ ಪಾಲ್ಗೊಳ್ಳುವಿಕೆ

ಒಂದು ಗುಂಪು ಹಾಡುವಾಗ ಉಳಿದ ಗುಂಪಿನವರು ಅಂಕಗಳನ್ನು ಹಾಕುವುದು. ಎಲ್ಲಾ ಗುಂಪುಗಳು ಹಾಡಿದ ಬಳಿಕ ಪ್ರತಿ ಗುಂಪಿಗೆ ಹಾಕಲಾದ ಅಂಕಗಳನ್ನು ಹೇಳಿಸುವುದು. ಜೊತೆಯಲ್ಲಿ ಒಂದು ಗುಂಪಿನವರು ಹಾಡುವಾಗ ಇತರರು ಆ ಗುಂಪಿನಲ್ಲಿ ಕಂಡುಕೊಂಡ ಲೋಪದೋಷಗಳನ್ನು ಹೇಳಿಸುವುದು. ಇದು ಮುಂದಿನ ಸಲ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಸರಿಯಾಗಿ ಹಾಡಲು ಸಹಕಾರಿಯಾಗುವುದು. ಪ್ರತಿ ಗುಂಪಿನವರು ತಮ್ಮ ತಮ್ಮ ಗುಂಪಿಗೆ ದೊರೆತ ಅಂಕಗಳನ್ನು ಒಟ್ಟು ಸೇರಿಸಿ ತಮ್ಮಲ್ಲಿ ಉತ್ತಮವಾಗಿ ಹಾಡಿದವರು ಯಾರು ಎಂದು ಗುರುತಿಸಿಕೊಳ್ಳುವುದು. ಕೊನೆಗೆ ಉತ್ತಮವಾಗಿ ಹಾಡಿದವರನ್ನು ಅಭಿನಂದಿಸುವುದು. ವೈಯಕ್ತಿಕವಾಗಿ ಹಾಡಲು ಆಸಕ್ತಿಯಿರುವ ಮಕ್ಕಳಿಗೆ ಅವಕಾಶವನ್ನೊದಗಿಸುವುದು. ಬಳಿಕ ಅಧ್ಯಾಪಕರು ಕವನವನ್ನು ಹಾಡುವುದು. ಆ ಬಳಿಕ ಧ್ವನಿಸುರುಳಿಯನ್ನು ಕೇಳಿಸುವುದು. ಮಕ್ಕಳು ಕವನವನ್ನು ಹಾಡುವಾಗ ದ್ವನಿ ಮುದ್ರಿಸಿ ತರಗತಿ ಗುಂಪಿನಲ್ಲಿ ಹಂಚಿಕೊಳ್ಳಲು ತಿಳಿಸುವುದು.

## ಉತ್ತರಿಸುವುದು

ಮಕ್ಕಳಿಗೆ ಕವನವು ಎಷ್ಟರ ಮಟ್ಟಿಗೆ ಅರ್ಥವಾಗಿದೆ ಎಂದು ನೋಡುವ ಉದ್ದೇಶದಿಂದ ಈ ಚಟುವಟಿಕೆಗಳನ್ನು ನೀಡಲಾಗಿದೆ. ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಂಡು ಬಾಯ್ದೆರೆಯಾಗಿ ಹೇಳಲಿ. ಬಳಿಕ ವೈಯಕ್ತಿಕವಾಗಿ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ. ಅಗತ್ಯ ಸಂದರ್ಭದಲ್ಲಿ ಅಧ್ಯಾಪಕರು ಯೋಗ್ಯವಾದ ಸಲಹೆ ಸೂಚನೆಗಳನ್ನು ನೀಡುವುದು. ಸೂಚನೆಯ ಆಧಾರದಲ್ಲಿ ಮಕ್ಕಳು ತಮ್ಮ ಉತ್ತರಗಳನ್ನು ಉತ್ತಮಗೊಳಿಸುವುದು.

## ಆಶಯ ಬರವಣಿಗೆ

ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಆಶಯ ಬರೆಯಲಿ. ಗುಂಪಿನಿಂದ ಒಬ್ಬರಂತೆ ಮಂಡಿಸಲಿ. ಬಳಿಕ ತರಗತಿಯಲ್ಲಿ ಚರ್ಚಿಸಿ ಆಶಯವನ್ನು ಪರಿಷ್ಕರಿಸಿ ಬರೆದುಕೊಳ್ಳಲಿ.

## ಕವನದ ಆಶಯ ಹೀಗೂ ಇರಬಹುದು

"ನೇಗಿಲ ಯೋಗಿ" ಈ ಹಾಡು ನಮ್ಮ ರೈತರಿಗೆ ದೊರೆತ ಬಹುದೊಡ್ಡ ಸನ್ಮಾನವೆಂದು ಹೇಳಬಹುದು. ಪ್ರಸ್ತುತ ಈ ಕವಿತೆಯನ್ನು ಕುವೆಂಪುರವರ 'ಕೊಳಲು' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ನೇಗಿಲನ್ನು ಹಿಡಿದು ಮಣ್ಣನ್ನು ಹದಗೊಳಿಸಿ ತನ್ನ ಮೈ ಮನವನ್ನು ಹತೋಟಿಯಲ್ಲಿಟ್ಟುಕೊಂಡು ಲೋಕದ ಒಳಿತಿಗಾಗಿ ನಿರಂತರವಾಗಿ ಚಿಂತಿಸುತ್ತ, ಜನರಿಗೆ ಒಳ್ಳೆಯ ಅರಿವನ್ನು ತಿಳಿ ಹೇಳುವ ಯೋಗಿಯಂತೆ ಜನರ ಹೊಟ್ಟೆಗೆ ಅನ್ನವನ್ನು ನೀಡಿ ನಮ್ಮೆಲ್ಲರನ್ನೂ ಸಲಹುತ್ತಿರುವ ಬೇಸಾಯಗಾರನನ್ನು ಕವಿಯು ಇಲ್ಲಿ 'ನೇಗಿಲ ಯೋಗಿ' ಎಂದು ಬಣ್ಣಿಸಿದ್ದಾರೆ. ಎತ್ತುಗಳ ಕೊರಳಿಗೆ ನೊಗವನ್ನು ಕಟ್ಟಿ ಮಣ್ಣನ್ನು ಹದಗೊಳಿಸುತ್ತಾ ಆಯಾಸವನ್ನು ಕಡಿಮೆಗೊಳಿಸಲು ಹಾಡನ್ನು ಹಾಡುತ್ತಿರುವ ನೇಗಿಲ ಯೋಗಿಯನ್ನು ನೋಡಲ್ಲಿ ಎಂದು ಕವಿ ಹೇಳುತ್ತಾರೆ. ಯಾವುದೇ ರೀತಿಯ ಫಲವನ್ನು ನಿರೀಕ್ಷಿಸದೆ ತಾನು ಮಾಡುವ ಕೆಲಸವನ್ನು ಸೇವೆ ಎಂದು ತಿಳಿಯುತ್ತಾ ದುಡಿಯುವವನು ನಮ್ಮ ರೈತ. ಮಣ್ಣನ್ನು ಹದಗೊಳಿಸುವುದರಿಂದ ಹಿಡಿದು ಫಸಲನ್ನು ಪಡೆಯುವವರೆಗೆ ರೈತನು ಮಾಡುವ ಕೆಲಸಗಳೇ ಅವನು ಮಾಡುವ ಪೂಜೆ ಎಂದು ಬಣ್ಣಿಸಿದ್ದಾರೆ. ಹಗಲು, ಇರುಳು ಎನ್ನದೆ ಮಳೆ, ಗಾಳಿ, ಬಿಸಿಲಿಗೆ ಮೈಯನ್ನು ಒಡ್ಡಿ ತಾನು ಬೆಳೆದ ಬೆಳೆಗಳಿಗೆ ಮತ್ತು ತನ್ನ ಜೀವಕ್ಕೆ ಉಂಟಾಗುವ ಅಪಾಯವನ್ನು ಲೆಕ್ಕಿಸದೆ ಬೇಸಾಯಗಾರನು ಬೆಳೆಗಳನ್ನು ಬೆಳೆಯುತ್ತಾನೆ. ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗದೇ ಇದ್ದಾಗ ಸಾಲದ ಸುಳಿಯಲ್ಲಿ ಸಿಲುಕಿ ನರಳಾಡುತ್ತಾನೆ. ತನ್ನ ಶ್ರಮದ ದುಡಿಮೆಯ ಜೊತೆಗೆ ತನ್ನ ಒಡವೆ, ಆಸ್ತಿಗಳನ್ನು ಕಳೆದುಕೊಂಡು ಜನರಿಗೆ ಅಗತ್ಯವಾದ ಅನ್ನವನ್ನು ಕೊಡುಗೆಯಾಗಿ ನೀಡುವ ಅವನೇ ನಿಜವಾದ ತ್ಯಾಗಿ ಎಂದು ಹೇಳುತ್ತಾರೆ. ನಿಸರ್ಗದ ಮಡಿಲಿನಲ್ಲಿ ಬೇಸಾಯವನ್ನು ಮಾಡುತ್ತಾ ಸರಳ ಜೀವನವನ್ನು ನಡೆಸುತ್ತಾ ಆನಂದವನ್ನು ಪಡೆಯುತ್ತಾನೆ.

ಲೋಕದ ವಿದ್ಯಮಾನಗಳಲ್ಲಿ ಬದಲಾವಣೆಯಾಗುತ್ತಿದ್ದರೂ, ನಿಸರ್ಗದಲ್ಲಿ ಏರುಪೇರುಗಳಾಗುತ್ತಿದ್ದರೂ, ಜನರ ಜೀವನದಲ್ಲಿ ಒಳಿತು-ಕೆಡುಕು ಉಂಟಾದರೂ, ಇರುವ ರಾಜ್ಯಗಳು ನಾಶವಾಗಿ ಅಥವಾ ಹೊಸ ರಾಜ್ಯಗಳ ಸೃಷ್ಟಿಯಾದರೂ, ರಾಜ ತನ್ನ ಸಿಂಹಾಸನವನ್ನು ಕಳೆದುಕೊಂಡರೂ ಸಹ ಬೇಸಾಯಗಾರ ತನ್ನ ಕಾಯಕಕ್ಕೆ ವಿರಾಮವನ್ನು ನೀಡದೆ ತನ್ನ ಕೆಲಸಗಳಲ್ಲಿ ಸದಾ ತಲ್ಲೀನನಾಗಿರುತ್ತಾನೆ. ನಾನಾ ರೀತಿಯ ಕೆಲಸಗಳನ್ನು ವರ್ಷದುದ್ದಕ್ಕೂ ಮಾಡುತ್ತಲೇ ಇರುತ್ತಾನೆ.

ನೇಗಿಲು ಹಿಡಿದ ದುಡಿಮೆ ಜನರ ಸಿರಿ ಸಂಪದಗಳಿಗೆ ಕಲೆ,ಸಂಗೀತ ಸಾಹಿತ್ಯದಿಂದ ಕೂಡಿದ ನಾಗರೀಕತೆಯ ಎಲ್ಲಾ ಚಟುವಟಿಕೆಗಳಿಗೂ ಮುಖ್ಯ ಆಸರೆಯಾಗಿದೆ. ರೈತರು ದುಡಿದು ಹೊಟ್ಟೆ ತುಂಬಿಸಿದರೆ ಮಾತ್ರ ದೊರೆ ದರ್ಪದಿಂದ ಮೆರೆಯಲು ಸಾಧ್ಯ, ವೀರರು ಪರಾಕ್ರಮದಿಂದ ಹೋರಾಡಲು ಸಾಧ್ಯ, ಶಿಲ್ಪಿಗಳು ಸುಂದರವಾದ ಶಿಲ್ಪಗಳನ್ನು ಕೆತ್ತಲು ಸಾಧ್ಯ, ಕವಿಗಳು ಉತ್ತಮವಾದ ಸಾಹಿತ್ಯವನ್ನು ರಚಿಸಲು ಸಾಧ್ಯ, ಎಲ್ಲಾ ಚಟುವಟಿಕೆಗಳ ಮುಖ್ಯ ಆಧಾರ ರೈತನ ಶ್ರಮವಾಗಿದೆ.

ಜನರಿಗೆ ತಾವು ಉಣ್ಣುತ್ತಿರುವ ಆಹಾರವನ್ನು ಯಾರು ಬೆಳೆಯುತ್ತಾರೆ ಎಂಬುವುದು ತಿಳಿದಿರುವುದಿಲ್ಲ ಆದರೂ ಯಾವುದೇ ಗೌರವವನ್ನು ಆಶಿಸದೆ ಬೇಸಾಯಗಾರನು ಶ್ರಮಪಟ್ಟು ದುಡಿದು ತನ್ನನ್ನು ನಂಬಿದ ಜನರಿಗಾಗಿ ಆಹಾರವನ್ನು ಒದಗಿಸುತ್ತಾನೆ. ಮಾನವ ಸಮುದಾಯದ ಹೊಟ್ಟೆಯ ಹಸಿವನ್ನು ತಣಿಸಿ ಜನರು ಒಲವು ನಲಿವು, ನೆಮ್ಮದಿಯಿಂದ ಬಾಳುವುದಕ್ಕೆ ನೇಗಿಲ ದುಡಿಮೆಯೇ ತಳಹದಿಯಾಗಿದೆ. ಕೋಟಿಗಟ್ಟಲೆ ಬೇಸಾಯಗಾರರ ದುಡಿಮೆಯಿಂದ

ರೂಪುಗೊಂಡಿರುವ 'ನೇಗಿಲ ಧರ್ಮ' ಜಗತ್ತಿನ ಜನಸಮುದಾಯದಲ್ಲಿ ಜಾತಿ, ಮತ, ಲಿಂಗ, ಪ್ರಾಂತ್ಯವೆಂಬ ತಾರತಮ್ಯ ಮಾಡದೆ ಎಲ್ಲರಿಗೂ ಅನ್ನವನ್ನು ನೀಡುತ್ತದೆ ಎಂಬ ಆಶಯವನ್ನು ಈ ಕವನದ ಮೂಲಕ ಕವಿ ಸಾರಿದ್ದಾರೆ.

## ಸ್ವಾರಸ್ಯ ಬರವಣಿಗೆ

ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ಈ ಚಟುವಟಿಕೆಯನ್ನು ಮಾಡಬಹುದು. ಈಗಾಗಲೇ ಪದ್ಯದ ಸಂಪೂರ್ಣ ಆಶಯವನ್ನು ತಿಳಿದಿರುತ್ತಾರೆ. ಸ್ವಾರಸ್ಯ ಬರವಣಿಗೆಯ ಮೊದಲು ಅದರಲ್ಲಿ ಏನೆಲ್ಲ ಇರಬೇಕು ಎಂಬ ವಿಚಾರದಲ್ಲಿ ತರಗತಿ ಚರ್ಚೆ ನಡೆಯಬೇಕು. ಕವಿ ಕಾವ್ಯದಲ್ಲಿ ಬಳಸಿದ ವಿಶಿಷ್ಟ ಪದಪ್ರಯೋಗಗಳು, ಶೈಲಿ ಹಾಗೂ ಅವುಗಳಿಂದ ಹೊರಹೊಮ್ಮಿದ ಅರ್ಥದ ಕುರಿತು ವಿದ್ಯಾರ್ಥಿಗಳು ಚಿಂತಿಸುವಂತೆ ಮಾಡಬೇಕು. ಬಳಿಕ ಸ್ವಾರಸ್ಯವನ್ನು ವೈಯಕ್ತಿಕವಾಗಿ ಬರೆಯಲು ಹೇಳುವುದು. ಕೆಲವರಿಂದ ಮಂಡನೆಯಾದ ಬಳಿಕ ಗುಂಪಿನಲ್ಲಿ ಉತ್ತಮಪಡಿಸುವುದು. ಸ್ವಾರಸ್ಯವನ್ನು ಬರೆಯುವಾಗ ಕೊಟ್ಟಿರುವ ಸಾಲುಗಳ ಆಶಯ, ವಿಶೇಷ ಪದ ಪ್ರಯೋಗ, ವಾಚ್ಯಾರ್ಥವಲ್ಲದೆ, ಬೇರೊಂದು ಅರ್ಥ, ಕವಿಯ ಉದ್ದೇಶ ಇತ್ಯಾದಿಗಳನ್ನು ಸೂಚಿಸಿದರೆ ಒಳ್ಳೆಯದು.

## ಸ್ವಾರಸ್ಯ ಬರವಣಿಗೆ ಹೀಗೂ ಇರಬಹುದಲ್ಲವೇ?

ಕುವೆಂಪುರವರು ಬರೆದ "ನೇಗಿಲ ಯೋಗಿ" ಎಂಬ ಕವನದಿಂದ ಮೇಲಿನ ಸಾಲುಗಳನ್ನು ಆರಿಸಲಾಗಿದೆ. ಈ ಸಾಲುಗಳು ರೈತರ ಜೀವನವನ್ನು, ಮಣ್ಣಿನ ಗುಣವನ್ನು ತಿಳಿಸುತ್ತದೆ ನಮ್ಮ ನಾಗರಿಕತೆ ಎಂಬುದು ಈ ಪುಣ್ಯಭೂಮಿಯಲ್ಲಿ ನೇಗಿಲ ಆಶ್ರಯವನ್ನು ಅವಲಂಬಿಸಿದೆ. ಅಂದರೆ ನಾಗರಿಕರು ಬದುಕಬೇಕಾದರೆ ರೈತ ನೇಗಿಲನ್ನು ಹಿಡಿಯಲೇಬೇಕು. ಈ ನೇಗಿಲನ್ನು ಹಿಡಿದು ದುಡಿದಂತಹ ರೈತರ ಶ್ರಮದ ಫಲವಾಗಿ ದೊರೆಗಳು ದರ್ಪದಿಂದ ಆಳುತ್ತಾರೆ, ರಾಜರು ಆಳ್ವಿಕೆ ಮಾಡುತ್ತಾರೆ. ರೈತರು ದುಡಿದರೆ ಮಾತ್ರ ವೀರರ, ಶಿಲ್ಪಿಗಳ, ಕವಿಗಳ ಹೊಟ್ಟೆ ತುಂಬಿ ಆರೋಗ್ಯವಾಗಿರಲು ಸಾಧ್ಯ. ಆರೋಗ್ಯವಾಗಿದ್ದರೆ ಮಾತ್ರ ಸೈನಿಕನು ಪರಾಕ್ರಮಿಯಾಗಲು ಸಾಧ್ಯ, ವೀರನಾಗಲು ಸಾಧ್ಯ ಶಿಲ್ಪಿಯು ಒಂದು ಅದ್ಭುತ ಕೆತ್ತನೆಯನ್ನು ಮಾಡಲು ಸಾಧ್ಯ, ಕವಿಯು ತನ್ನ ಬರವಣಿಗೆಯಲ್ಲಿ ಸಾಹಿತ್ಯವನ್ನು ರಚಿಸಲು ಸಾಧ್ಯ. ಆ ಮೂಲಕ ಭೂಮಿಯ ಮೇಲಿನ ಎಲ್ಲಾ ಚಟುವಟಿಕೆಗಳಿಗೂ ಆಧಾರ ರೈತನ ಶ್ರಮ ಎಂಬುದನ್ನು ಕುವೆಂಪು ಅವರು ಈ ಸಾಲುಗಳಲ್ಲಿ ಸ್ವಾರಸ್ಯ ಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ.

## ಟಿಪ್ಪಣಿ ಬರವಣಿಗೆ

ರೈತರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ? ಎಂಬ ಪ್ರಶ್ನೆಯನ್ನು ತರಗತಿಯಲ್ಲಿ ಮಂಡಿಸುವುದು. ಮಕ್ಕಳು ಕಂಡುಕೊಂಡ ವಿಚಾರಗಳನ್ನು ಮಂಡಿಸಲು ಅವಕಾಶ ನೀಡುವುದು. ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ನಂತರ ಈ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದು ? ಎನ್ನುವ ಪ್ರಶ್ನೆಯ ಮೂಲಕ ಚರ್ಚೆಯನ್ನು ಮುಂದುವರಿಸುವುದು. ಮಕ್ಕಳಿಗೆ ಅಭಿಪ್ರಾಯ ಮಂಡಿಸಲು ಮುಕ್ತ ಅವಕಾಶ ನೀಡುವುದು. ಬಳಿಕ ತಿಳಿದು ಕೊಂಡ ವಿಚಾರಗಳನ್ನು ಟಿಪ್ಪಣಿ ರೂಪದಲ್ಲಿ ಬರೆಯುವುದು. ಗುಂಪಿನಲ್ಲಿ ಮಂಡಿಸಿ ಉತ್ತಮ ಪಡಿಸುವುದು.

## ಲಿಖಿತ ಭಾಷಣ

ವಿದ್ಯಾರ್ಥಿಗಳು ಈಗಾಗಲೇ ಭಾಷಣ ಕಲೆಯ ಕುರಿತು ಹಿಂದಿನ ತರಗತಿಗಳಲ್ಲಿ ತಿಳಿದುಕೊಂಡಿದ್ದಾರೆ. ಉತ್ತಮವಾಗಿ, ಪ್ರಭಾವ ಬೀರುವಂತೆ ಭಾಷಣ ಮಾಡುವವರು ವಾಗ್ಮಿಗಳೆನಿಸುತ್ತಾರೆ ಎಂದು ತಿಳಿಸುವುದು. ಭಾಷಣ ಮಾಡುವ ಮೊದಲು ಆ ವಿಷಯದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುವ ವಿಧಾನವನ್ನು ಅಧ್ಯಾಪಕರು ತಿಳಿಸುವುದು. ಕಲೆ ಹಾಕಿದ ಅಂಶಗಳನ್ನು ಲಿಖಿತ ಭಾಷಣವಾಗಿ ವಿಸ್ತರಿಸುವ ಬಗೆಯನ್ನು ತಿಳಿಸುವುದು. “ಅನ್ನದಾತ ನಮ್ಮ ರೈತ” ಎಂಬುದರ ಬಗ್ಗೆ ವಿದ್ಯಾರ್ಥಿಗಳು ಅವರಿಗೆ ತಿಳಿದಿರುವ ಮುಖ್ಯ ಅಂಶಗಳನ್ನು ಹೇಳಲಿ.ಅಧ್ಯಾಪಕರು ಅವುಗಳನ್ನು ಕರಿಹಲಗೆಯಲ್ಲಿ ಬರೆಯುವುದು. ವಿದ್ಯಾರ್ಥಿಗಳೆಲ್ಲರೂ ಲಿಖಿತ ಭಾಷಣಕ್ಕೆ ಬೇಕಾದ ಅಂಶಗಳನ್ನು ಪುಸ್ತಕದಲ್ಲಿ ಬರೆದಿಡಲಿ. ಆನಂತರ ವೈಯಕ್ತಿಕವಾಗಿ ಲೇಖನ ಬರೆಯಲಿ. ಲಿಖಿತ ಭಾಷಣದಲ್ಲಿ ಬರವಣಿಗೆ ಉತ್ತಮವಾಗಿರಬೇಕು , ಸಂಬೋಧನೆಯೂ ಇರಬೇಕೆಂದು ಅಧ್ಯಾಪಕರು ವಿದ್ಯಾರ್ಥಿಗಳಿಗೆ ನೆನಪಿಸುವುದು. ಪ್ರಸಿದ್ಧ ಹೇಳಿಕೆಗಳು, ಅನುಭವಿಗಳ ಮಾತುಗಳನ್ನು ಸಂದರ್ಭೋಚಿತವಾಗಿ ಉಲ್ಲೇಖಿಸಬೇಕು ಎಂದು ತಿಳಿಸುವುದು. ವೈಯಕ್ತಿಕವಾಗಿ ಬರೆದುದನ್ನು ತರಗತಿಯಲ್ಲಿ ಆಯ್ದ ವಿದ್ಯಾರ್ಥಿಗಳು ಓದಲಿ. ವಿದ್ಯಾರ್ಥಿಗಳು ಪರಸ್ಪರ ಚರ್ಚಿಸಿ, ಅಧ್ಯಾಪಕರ ಮಾರ್ಗದರ್ಶನವನ್ನು ಪಡೆದು ಬರವಣಿಗೆಯನ್ನು ಉತ್ತಮಗೊಳಿಸಲಿ. ಉತ್ತಮಗೊಳಿಸಿದ ಲೇಖನವನ್ನು ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

**“ಅನ್ನದಾತ ನಮ್ಮ ರೈತ” ಎಂಬ ವಿಷಯದ ಕುರಿತು ಲಿಖಿತ ಭಾಷಣ ಸಿದ್ಧ ಪಡಿಸಲು ಸಹಾಯಕವಾಗುವ ಮುಖ್ಯ ಅಂಶಗಳು**

- ರೈತನ ಋಣ
- ಆಹಾರ ಅವಿಭಾಜ್ಯ ಘಟಕ
- ವಾಣಿಜ್ಯ ಬೆಳೆಗಳು
- ಆರ್ಥಿಕತೆಯ ರೂವಾರಿ
- ರೈತರ ದಿನ
- ಕಡಿಮೆ ಲಾಭ
- ಕೀಳರಿಮೆ
- ಕೃಷಿ ಒಲವು
- ರೈತರು ಇಂದು ಎದುರಿಸುವ ಸಮಸ್ಯೆಗಳು

## ಲಿಖಿತ ಭಾಷಣ ಹೀಗೂ ಇರಬಹುದು

ಗೌರವಾನ್ವಿತ ಸಭಾಧ್ಯಕ್ಷರೇ, ಅತಿಥಿಗಳೇ, ಗುರು ವೃಂದದವರೇ ಹಾಗೂ ಸಹಪಾಠಿಗಳೇ, ಎಲ್ಲರಿಗೂ ನಮಸ್ಕಾರ. ನಾನೀಗ ' ರೈತ ನಮ್ಮ ಅನ್ನದಾತ' ಎಂಬ ವಿಷಯದ ಕುರಿತು ಕೆಲವು ವಿಚಾರಗಳನ್ನು ನಿಮ್ಮ ಮುಂದೆ ಹಂಚಿಕೊಳ್ಳಲು ಅಪೇಕ್ಷಿಸುತ್ತೇನೆ.....

ನಾವೆಲ್ಲರೂ ನಮ್ಮ ಜೀವನದ ಒಂದಲ್ಲ ಒಂದು ಸಂದರ್ಭದಲ್ಲಿ ಡಾಕ್ಟರ್, ಟೀಚರು, ವಕೀಲರು, ಪೊಲೀಸರು ಹೀಗೆ ಅನೇಕರ ಬಳಿ ಸಹಾಯ ಪಡೆದು ಕೃತಜ್ಞತೆಯನ್ನು ಸಲ್ಲಿಸಿದ್ದೇವೆ. ಆದರೆ ದಿನದ ಮೂರು ಹೊತ್ತಿನ ಆಹಾರವನ್ನು ಉತ್ಪಾದಿಸಿ ನಮ್ಮೆಲ್ಲರ ಆರೋಗ್ಯವನ್ನು ಕಾಪಾಡುವ ರೈತನನ್ನು ಎಂದಾದರೂ ಯೋಚಿಸಿದ್ದೇವೆಯೇ? ಅವನು ಬೆವರಿನ ಋಣವನ್ನು ನಮ್ಮಿಂದ ತೀರಿಸಲು ಸಾಧ್ಯವಿದೆಯೇ ? ಇಲ್ಲ.. ಕಂಡಿತಾ ಇಲ್ಲ... ಈ ಭೂಮಿಯಲ್ಲಿ ಬದುಕುತ್ತಿರುವ ಮನುಕುಲದ ಉಳಿವಿಗೆ ನೀರು, ವಾಯು ಹೇಗೆ ಮುಖ್ಯವೋ ಆಹಾರವೂ ಅಷ್ಟೇ ಮುಖ್ಯವಾಗಿರುತ್ತದೆ. ಆದುದರಿಂದಲೇ ಆಹಾರವನ್ನು ಉತ್ಪಾದಿಸುವ ರೈತರು ನಮ್ಮ ಅನ್ನದಾತರು. ಅವರು ನಮ್ಮ ರಾಷ್ಟ್ರದ ಆಧಾರ ಸ್ತಂಭಗಳು. ತಮ್ಮ ಜೀವನದುದ್ದಕ್ಕೂ ರಾಷ್ಟ್ರದಲ್ಲಿ ವಾಸಿಸುವ ಪ್ರತಿಯೊಬ್ಬರಿಗೂ ಆಹಾರ ಪದಾರ್ಥಗಳನ್ನು ಪೂರೈಸಲು ಶ್ರಮಿಸುತ್ತಾರೆ. ಮಳೆ - ಬಿಸಿಲು, ರಾತ್ರಿ - ಹಗಲು, ಲಾಭ - ನಷ್ಟ ಇವು ಯಾವುದನ್ನು ಲೆಕ್ಕಿಸದೆ ಶ್ರಮವಹಿಸಿ ದುಡಿಯುತ್ತಾರೆ.

ನಮ್ಮ ಭಾರತದಲ್ಲಿ ಜನಸಂಖ್ಯೆಯ ಸುಮಾರು ಮೂರರಲ್ಲಿ ಎರಡರಷ್ಟು ಜನರು ತಮ್ಮ ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಅವರು ಆಹಾರ ,ಮೇವು ಮತ್ತು ಇತರ ಕಚ್ಚಾ ವಸ್ತುಗಳನ್ನು ಉತ್ಪಾದಿಸುತ್ತಾರೆ. ಅವರು ನಮ್ಮ ಜೀವ ರಕ್ಷಕರಾಗಿದ್ದರೂ ಅವರ ಶ್ರಮಕ್ಕೆ ಪ್ರತಿಯಾಗಿ ಪಡೆಯುವ ಮೌಲ್ಯವು ತುಂಬಾ ಕಡಿಮೆಯಾಗಿದೆ. ಅನೇಕ ಜನರು ಕೃಷಿ ಉತ್ಪಾದನೆ ಮತ್ತು ಕೃಷಿ ವೃತ್ತಿಯನ್ನು ಅಸಹ್ಯಪಡುತ್ತಾರೆ. ಇದಕ್ಕೆ ಪ್ರಮುಖ ಕಾರಣ ಅವರು ಗಳಿಸುವ ಕಡಿಮೆ ಲಾಭ. ಎಲ್ಲಕ್ಕಿಂತ ಹೆಚ್ಚಾಗಿ ಹಣಕ್ಕೆ ಬೆಲೆ ಕೊಡುವ ಜನರಿಗೆ ರೈತನ ನಿಜವಾದ ಬೆಲೆ ಇನ್ನೂ ಅರಿವಿಗೆ ಬಂದಿಲ್ಲ. ಅವರು ತಮ್ಮ ಮೇಜಿನ ಮೇಲೆ ಸ್ವೀಕರಿಸುವ ಆಹಾರವು ರೈತರ ಕೊಡುಗೆಯಾಗಿದೆ ಎಂಬ ಅಂಶವನ್ನೇ ಮರೆತಿದ್ದಾರೆ.

ರೈತರು ನಮ್ಮ ಆರ್ಥಿಕತೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಇಡೀ ರಾಷ್ಟ್ರದಲ್ಲಿ ಡಿಸೆಂಬರ್ 23 ರನ್ನು ರಾಷ್ಟ್ರೀಯ ರೈತರ ದಿನ ಅಥವಾ ಕಿಸಾನ್ ದಿನವನ್ನಾಗಿ ಆಚರಿಸಲಾಗುತ್ತದೆ . ಈ ದಿನವು 'ರೈತರ ಒಳಿತಿಗಾಗಿ ವಿವಿಧ ಮಸೂದೆಗಳನ್ನು ರಚಿಸುವ ಮೂಲಕ ಕೃಷಿ ಕ್ಷೇತ್ರವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಚೌಧರಿ ಚರಣ್ ಸಿಂಗ್ ಅವರ' ಜನ್ಮ ದಿನವಾಗಿದೆ. ಅವರು ಲಾಲ್ ಬಹದ್ದೂರ್ ಶಾಸ್ತ್ರಿ ಯವರ "ಜೈ ಜವಾನ್ ಜೈ ಕಿಸಾನ್" ಘೋಷಣೆಯನ್ನು ಎತ್ತಿ ಹಿಡಿದವರು ಮತ್ತು ಭಾರತದಲ್ಲಿ ಕೃಷಿ ಉತ್ಪಾದನೆಯನ್ನು ಉತ್ತೇಜಿಸಲು ಉತ್ಸಾಹದಿಂದ ಪ್ರಯತ್ನಿಸಿದವರು.

ನಾವು ಈ ಭೂಮಿಯಲ್ಲಿ ಬಹಳ ಸಂತೋಷದಿಂದ ಬದುಕು ಸಾಗಿಸುತ್ತಿದ್ದೇವೆ. ಆದರೆ ನಮ್ಮ ಬದುಕಿನ ಬೇರು ಕೃಷಿಯಲ್ಲಿ ಹಾಸು ಹೊಕ್ಕಾಗಿದೆ. ಆಹಾರವಿಲ್ಲದೆ ಹೆಚ್ಚು ಕಾಲ ಬದುಕಿ ಉಳಿಯಲು ಸಾಧ್ಯವೇ ಇಲ್ಲ. ಕಷ್ಟ ಪಟ್ಟು ಕೃಷಿ ಭೂಮಿಯಲ್ಲಿ ದುಡಿದರೆ ಮಾತ್ರವೇ ನಮಗೆ ಆಹಾರ ದೊರೆಯಬಹುದು. ಕೃಷಿ ಪ್ರಧಾನವಾದ ಭಾರತದೇಶವು 'ರೈತನೇ ಭಾರತದ ಬೆನ್ನೆಲುಬು' ಎಂದು ಹೇಳುತ್ತಾ ಕೃಷಿ ಋಷಿಯನ್ನು ಕೊಂಡಾಡಿದೆ. ನಾಡಿನ ಜನತೆಗೆ ಆಹಾರವನ್ನು ಒದಗಿಸುವ ಪವಿತ್ರ ಕಾರ್ಯ ಹಿಂದಿನಿಂದಲೂ ನಡೆದುಕೊಂಡು ಬಂದ ಸಮಾಜ ನಮ್ಮದು. ರೈತರೆಲ್ಲರೂ ಕೈ ಕಟ್ಟಿ ಕುಳಿತರೆ ನಾವೆಲ್ಲರೂ ಉಪವಾಸ ಬೀಳಬೇಕಾದಿತು. ಮಾತ್ರವಲ್ಲದೇ ಜೀವವನ್ನೇ ಕಳೆದುಕೊಳ್ಳಬೇಕಾದೀತು ಆದುದರಿಂದ 'ರೈತ ನಮ್ಮ

ಅನ್ನದಾತ' ಅವನೇ ನಮ್ಮ ಜೀವದಾತ ಎಂದು ಹೇಳುತ್ತಾ ನನ್ನ ಪುಟ್ಟ ಭಾಷಣವನ್ನು ಕೊನೆಗೊಳಿಸುತ್ತೇನೆ

**ಜೈಹಿಂದ್ ... ಜೈಕಿಸಾನ್**

## ಗಾದೆ ವಿಸ್ತರಣೆ

ಗಾದೆಗಳಲ್ಲಿ ಅಡಕವಾಗಿರುವ ವಾಚ್ಯಾರ್ಥ, ಲಕ್ಷ್ಯಾರ್ಥ, ವ್ಯಂಗ್ಯಾರ್ಥ, ಲೋಕನೀತಿ ಇತ್ಯಾದಿಗಳ ಕುರಿತು ವಿದ್ಯಾರ್ಥಿಗಳು ತಿಳಿದಿರುವರು. ಕೊಟ್ಟಿರುವ ಗಾದೆ ಮಾತನ್ನು ವಿದ್ಯಾರ್ಥಿಗಳು ಗುಂಪಿನಲ್ಲಿ ಕುಳಿತು ಚರ್ಚಿಸಲಿ. ಆ ಬಳಿಕ ಆ ಗಾದೆ ಮಾತು ಬದುಕಿಗೆ ಅನ್ವಯವಾಗುವ ಬಗೆಯ ಕುರಿತು ಚರ್ಚಿಸಲಿ. ಹತ್ತು ನಿಮಿಷಗಳ ಕಾಲಾವಕಾಶವನ್ನು ಇದಕ್ಕಾಗಿ ನೀಡಬಹುದು. ಬಳಿಕ ಗುಂಪಿನಿಂದ ಒಬ್ಬರು ತಾವು ಬರೆದ ಬರಹಗಳನ್ನು ಮಂಡಿಸುವುದು.ಅಧ್ಯಾಪಕರು ಸೂಕ್ತ ಸಲಹೆಗಳನ್ನು ನೀಡಿ ಸಹಕರಿಸುವುದು.

ಬೇಸಾಯಕ್ಕೆ ಸಂಬಂಧಿಸಿ ಬಹಳಷ್ಟು ಗಾದೆಮಾತುಗಳು ಪ್ರಚಲಿತದಲ್ಲಿವೆ. ಅರ್ಥಪೂರ್ಣವಾದ ಗಾದೆಮಾತುಗಳು ನಿತ್ಯಜೀವನದಲ್ಲಿ ಹಾಸುಹೊಕ್ಕಾಗಿವೆ. ಹೆಚ್ಚಿನ ಸಂಗ್ರಹವನ್ನು, ಭಾಷಾಪ್ರಯೋಗಗಳನ್ನು ಮಾಡುವುದು. ಅವುಗಳ ಔಚಿತ್ಯವನ್ನರಿತು ದಿನಬಳಕೆಯ ವ್ಯವಹಾರದಲ್ಲಿ ಬಳಸಿಕೊಳ್ಳುವ ಸಾಮರ್ಥ್ಯವನ್ನು ಗಳಿಸಬೇಕಾಗಿದೆ.

### ಬೇಸಾಯಕ್ಕೆ ಸಂಬಂಧಪಟ್ಟ ಗಾದೆಗಳು

- ಅಗ್ಗದ ಆಸೆಗೆ ಮುಗ್ಗಿದ ಜೋಳ
- ಕೈಕೆಸರಾದರೆ ಬಾಯಿ ಮೊಸರು
- ಎಣ್ಣೆಹಾಕಿದರೆ ಕಣ್ಣಿಗೆ ಗುಣ, ಮಣ್ಣುಹಾಕಿದರೆ ಬುಡಕ್ಕೆ ಗುಣ
- ಹನಿಹನಿಗೂಡಿದರೆ ಹಳ್ಳ, ತೆನೆತೆನೆಗೂಡಿದರೆ ಬಳ್ಳ
- ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು
- ತಗ್ಗಿದ ಗದ್ದೆಗೆ ಮೂರು ಬೆಳೆ

## ಪ್ರಾಸ ಪದ

ಸಮೀಪದ ಸಾಲುಗಳಲ್ಲಿ ಅಂತ್ಯಪ್ರಾಸ ಬಂದಿರುವ ರಚನೆಗಳಿವು ಎನ್ನುವುದರ ಕಡೆಗೆ ವಿದ್ಯಾರ್ಥಿಗಳ ಗಮನ ಸೆಳೆಯುವುದು. ಕವನದಲ್ಲಿ ಬಂದ ಪ್ರಾಸಪದಗಳನ್ನು ಗುರುತಿಸಿ ಬರೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು.

| | | |
|---|---|---|
| ತ್ಯಾಗಿ | - | ಭೋಗಿ |
| ಸೈನಿಕರೆಲ್ಲ | - | ಬಿಡುವುದೆ ಇಲ್ಲ |
| ಮೆರೆದರು | - | ಬರೆದರು |
| ಕರ್ಮ | - | ಧರ್ಮ |
| ಅತಿಸುಖಕೆಳಸದೆ | - | ಗೌರವಕಾಶಿಸದೆ |

## ಪದ ವಿಂಗಡಣೆ

ಕವನವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಅದರಲ್ಲಿ ಬರುವ ಸಂಧಿ ಪದಗಳನ್ನು ಅರ್ಥಕೆಡದಂತೆ ವಿಂಗಡಿಸಿ ಓದಲು ತಿಳಿದಿರಬೇಕು. ಅದಕ್ಕಾಗಿ ಪಾಠ ಪುಸ್ತಕದಲ್ಲಿ ನೀಡಿರುವ ಪದವಿಂಗಡಣೆ ಚಟುವಟಿಕೆಯಲ್ಲಿ ಕೊಟ್ಟಿರುವ ಮಾದರಿಯನ್ನು ಗಮನಿಸಿಕೊಳ್ಳುವುದು. ವಿದ್ಯಾರ್ಥಿಗಳಲ್ಲಿ ಗುಂಪುಗಳಲ್ಲಿ ಕುಳಿತು ಪದವಿಂಗಡಣೆ ಮಾಡಲು ಹೇಳುವುದು. ರಸಪ್ರಶ್ನೆಯ ಮಾದರಿಯಲ್ಲಿ ಈ ಚಟುವಟಿಕೆಯನ್ನು ಮಾಡಬಹುದು. ಅಧ್ಯಾಪಕರು ಪದಗಳನ್ನು ಹೇಳುವುದು. ಒಂದನೇ ಗುಂಪಿನಿಂದ ವಿಂಗಡಿಸಿ ಹೇಳಲು ಪ್ರಾರಂಭಿಸುವುದು. ಗೊತ್ತಿಲ್ಲದಿದ್ದರೆ ಪಾಸ್ ಕೊಡುವುದು. ವಿದ್ಯಾರ್ಥಿಗಳಿಗೆ ತಿಳಿಯದ ಪದಗಳನ್ನು ಅಧ್ಯಾಪಕರು ಹೇಳುವುದು. ಆಗ ಅಂಕ ಅಧ್ಯಾಪಕರಿಗೆ ದೊರಕುವುದು. ಪದಗಳನ್ನು ಸರಿಯಾಗಿ ವಿಂಗಡಿಸಿ ಹೆಚ್ಚು ಅಂಕಗಳಿಸಿದ ತಂಡವನ್ನು ಅಭಿನಂದಿಸುವುದು. ವಿಂಗಡಿಸಿ ಬರೆಯಲು ಸಾಧ್ಯವಿರುವ ಇನ್ನೂ ಹೆಚ್ಚಿನ ಪದಗಳನ್ನು ಕವನದಿಂದ ಗುರುತಿಸಿ ವಿಂಗಡಿಸಿ ಬರೆಯಲು ಸೂಚಿಸುವುದು.

- ನಿಯಮದೊಳಗವನೇ - ನಿಯಮದ + ಒಳಗೆ + ಅವನೇ
- ನಡೆಯುತಲಿರಲಿ - ನಡೆಯುತಲಿ + ಇರಲಿ
- ರಾಜ್ಯಗಳಳಿಯಲಿ - ರಾಜ್ಯಗಳು + ಅಳಿಯಲಿ
- ನೇಗಿಲಿನಾಶ್ರಯದಿ - ನೇಗಿಲಿನ + ಆಶ್ರಯದಿ
- ಕೈಯಾಧಾರದಿ - ಕೈಯ + ಆಧಾರದಿ
- ದರ್ಪದೊಳಾಳಿದರು - ದರ್ಪದೊಳು + ಆಳಿದರು
- ಅನ್ನವನೀಯುವನು - ಅನ್ನವನು + ಈಯುವನು
- ಗೌರವಕಾಶಿಸದೆ - ಗೌರವಕೆ + ಆಶಿಸದೆ
- ನೇಗಿಲಕುಲದೊಳಗಡಗಿದೆ - ನೇಗಿಲಕುಲದ + ಒಳಗಡೆ+ ಅಡಗಿದೆ
- ಶಿಲ್ಪಿಗಳೆಸೆದರು - ಶಿಲ್ಪಿಗಳು + ಎಸೆದರು

# ಬಾಳು ಬೆಳಗಿಸಿದ ಕೃಷಿ

ಸಾವಯವ ತ್ಯಾಜ್ಯ ಹಾಗೂ ಉತ್ಪನ್ನಗಳನ್ನು ಬಳಸಿ, ಸಾವಯವ ಪರಿಕರಗಳನ್ನು ತಯಾರಿಸಿ, ಭೂಮಿಗೆ ಹಾಕುವುದರಿಂದ ಬೆಳೆಗಳಿಗೆ ಬೇಕಾದ ಪೋಷಕಾಂಶಗಳು ಪೂರೈಕೆಯಾಗುತ್ತವೆ. ಬೆಳೆಗಳಿಗೆ ರೋಗ ಹಾಗೂ ಕೀಟಗಳ ಬಾಧೆ ಕಡಿಮೆಯಾಗುತ್ತದೆ. ಭೂಮಿಯನ್ನು ಜೀವಾಣುಗಳಿಂದ ಜೀವಂತಮಾಡಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಉತ್ಪಾದನೆ ಪಡೆಯಬಹುದು. ಇದರಿಂದ ಭೂಮಿ ನೀರು ಹಾಗೂ ಆಹಾರಗಳು ವಿಷದಿಂದ ಮುಕ್ತವಾಗುತ್ತವೆ. ಇತ್ತೀಚಿನ ದಿನಗಳಲ್ಲಿ ಸಾವಯವ ಉತ್ಪಾದನೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತದೆ. ರೈತರಿಗೆ ಪ್ರೋತ್ಸಾಹ, ತರಬೇತಿ, ಮಾರ್ಗದರ್ಶನ, ಸಲಹೆ ಸಹಕಾರಗಳನ್ನು ನೀಡುತ್ತಿವೆ. ಇದರ ಸದುಪಯೋಗ ಪಡೆದು ರೈತರು ಸಾವಯವ ಕೃಷಿಯನ್ನು ಮಾಡಿ ಕಡಿಮೆ ವೆಚ್ಚದಲ್ಲಿ ಜಾಣತನದಿಂದ ಹೆಚ್ಚು ಇಳುವರಿಯನ್ನು ಪಡೆದುಕೊಳ್ಳಬಹುದು. ಸಾವಯವ ಕೃಷಿಯು ಮಹಿಳೆಯೊಬ್ಬಳ ಜೀವನವನ್ನು ಪಾವನವಾಗಿಸಿದ ನೈಜ ಕಥೆಯನ್ನು 'ಬಾಳು ಬೆಳಗಿಸಿದ ಕೃಷಿ' ಎನ್ನುವ ಅಂಕಣ ಬರಹದಲ್ಲಿ ವಿವರಿಸಲಾಗಿದೆ.

### ಪಾಠ ಓದುವಿಕೆ

ಅಧ್ಯಾಪಕರು ಹಾಜರಿ ಸಂಖ್ಯೆಯೊಂದನ್ನು ಹೇಳುವುದು. ಆ ಸಂಖ್ಯೆಯ ವಿದ್ಯಾರ್ಥಿ ಪಾಠಭಾಗವನ್ನು ಬಾಯ್ದೆರೆಯಾಗಿ ಸ್ವರಭಾರದೊಂದಿಗೆ ಭಾವಪೂರ್ಣವಾಗಿ ಓದುವುದು. ಉಳಿದವರು ಗಮನಿಸುವುದು. ಓದುವಾಗ ಬಂದ ತಪ್ಪನ್ನು ಗುರುತಿಸಿದ ವಿದ್ಯಾರ್ಥಿ ಮುಂದುವರೆಸಿ ಓದುವುದು. ಹೀಗೆ ಪಾಠಭಾಗವನ್ನು ಪೂರ್ತಿಯಾಗಿ ಓದುವುದು. ಅನಂತರ ಪಾಠದಲ್ಲಿ ಬಂದಿರುವ ನವೀನ ಪದಗಳನ್ನು ಗುರುತಿಸಿಕೊಂಡು ಅರ್ಥಕೋಶದ ಸಹಾಯದಿಂದ ಅರ್ಥ ಕಂಡುಕೊಳ್ಳುವುದು.

### ಕಠಿಣ ಪದಗಳನ್ನು ಸಂಗ್ರಹಿಸಿ ಅರ್ಥ ಬರೆಯುವ ಸ್ಪರ್ಧೆ

ವಿದ್ಯಾರ್ಥಿಗಳಲ್ಲಿ ಕಠಿಣ ಪದಗಳನ್ನು ಗುಂಪುಗಳಲ್ಲಿ ಕಂಡುಹುಡುಕಲು ಹೇಳುವುದು. ಅದಕ್ಕೆ ಅರ್ಥವನ್ನು ಬರೆಯಲು ಹೇಳುವುದು. ಅರ್ಥಕೋಶದ ಸಹಾಯವನ್ನು ಉಪಯೋಗಿಸಿಕೊಳ್ಳುವುದು. ಆನಂತರ ಅಧ್ಯಾಪಕರು ಪದಗಳನ್ನು ಹೇಳುವುದು. ಆ ಪದಗಳಿಗೆ ಅರ್ಥವನ್ನು ಬರೆದ ಗುಂಪುಗಳಿಗೆ ಅಂಕವನ್ನು ನೀಡುವುದು. ಗರಿಷ್ಠ ಅಂಕವನ್ನು ಪಡೆದ ಗುಂಪನ್ನು ಅಭಿನಂದಿಸುವುದು. ವಿದ್ಯಾರ್ಥಿಗಳು ಹೇಳಿದ ಅರ್ಥ ತಪ್ಪಾದರೆ ಅಧ್ಯಾಪಕರು ಸರಿಯಾದ ಅರ್ಥವನ್ನು ಹೇಳುವುದು. ವಿದ್ಯಾರ್ಥಿಗಳಿಗೆ ಅರ್ಥ ದೊರಕದ ಪದಗಳ ಅರ್ಥವನ್ನು ತಿಳಿಸುವುದು.

### ಉತ್ತರಿಸುವುದು

ಪುಸ್ತಕದಲ್ಲಿ ಕೊಡಲಾದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಉತ್ತರವನ್ನು ಬರೆಯುವುದು. ತರಗತಿಯಲ್ಲಿ ಮಂಡಿಸುವುದು. ಪರಸ್ಪರ ಮೌಲ್ಯಮಾಪನ ಮತ್ತು ಅಧ್ಯಾಪಕರ ಸಹಾಯದಿಂದ ಸರಿಪಡಿಸಿ ಬರೆದುಕೊಳ್ಳುವುದು. ಈ ಮೂಲಕ ಪಾಠಭಾಗದ ಆಶಯವು ವಿದ್ಯಾರ್ಥಿಗಳಿಗೆ ಮನದಟ್ಟಾಗಿದೆಯೇ ಎಂದು ಅರಿತುಕೊಳ್ಳಬಹುದು.

### ಚರ್ಚಿಸಿ ಬರೆಯಿರಿ

ಮಕ್ಕಳು ನಿರರ್ಗಳವಾಗಿ ಮಾತನಾಡಲು ಅನಿಸಿಕೆಗಳನ್ನು ನಿರ್ಭಯವಾಗಿ ಹೇಳಲು ಮತ್ತು ತನ್ನ ತಿಳುವಳಿಕೆಗಳನ್ನು ತಿದ್ದುಪಡಿ ಮಾಡಿಕೊಂಡು ತೀರ್ಮಾನಗಳನ್ನು ತೆಗೆದುಕೊಳ್ಳಲು ಚರ್ಚೆಯು ಅತಿ ಅಗತ್ಯವಾಗಿದೆ. ಶಶಿಕಲಾಳ ಸಾಧನೆಗೆ ತಂದೆ ತಾಯಿಯರ ಪ್ರೋತ್ಸಾಹಕ ಮಾತುಗಳು ಕಾರಣವಾದ ರೀತಿಯಲ್ಲಿ ಮಕ್ಕಳ ಅನುಭವಗಳನ್ನು ಹೊರತೆಗೆಯಲು ಅಧ್ಯಾಪಕರು ಕೆಲವೊಂದು ಪ್ರಶ್ನೆಗಳನ್ನು ಕೇಳುವುದು.

- ನಿಮ್ಮನ್ನು ಹೆಚ್ಚು ಇಷ್ಟ ಪಡುವವರು ಯಾರು?
- ನಿಮ್ಮ ಕಷ್ಟ ಕಾಲದಲ್ಲಿ, ಸಮಸ್ಯೆ ಉಂಟಾದಾಗ ಸಹಾಯ ಮಾಡುವವರು ಯಾರು ? ಯಾವ ರೀತಿಯಲ್ಲಿ?
- ನಿಮ್ಮ ಪಾಠ ಮತ್ತಿತರ ಚಟುವಟಿಕೆಗಳಲ್ಲಿ ಪ್ರೋತ್ಸಾಹ ಹೇಗೆ ನೀಡುತ್ತಾರೆ?
- ನಮ್ಮಲ್ಲಿ ಆತ್ಮವಿಶ್ವಾಸ ,ಧೈರ್ಯ ತುಂಬುವಲ್ಲಿ ಪ್ರೋತ್ಸಾಹಕ ಮಾತುಗಳು ಹೇಗೆ ಸಹಕಾರಿಯಾಗಿದೆ?
- ಶಶಿಕಲಾ ಸಾಧನೆಯ ಹಿಂದೆ ತಂದೆ ತಾಯಿಯರ ಪಾತ್ರವೇನು?

ಹೀಗೆ ತರಗತಿಯ ಕೆಲವು ಮಕ್ಕಳ ಪ್ರತಿಕ್ರಿಯೆಯ ಬಳಿಕ ವೈಯಕ್ತಿಕವಾಗಿ ಬರೆಯುವುದು. ಕೆಲವರಲ್ಲಿ ಗಟ್ಟಿಯಾಗಿ ಓದಿಸುವುದು. ಅಧ್ಯಾಪಕರು ಮಕ್ಕಳ ಉತ್ಪನ್ನವನ್ನು ಎಡಿಟಿಂಗ್ ಮಾಡಲು ಸಹಾಯ ಮಾಡುವುದು.

## ಪತ್ರ ಬರವಣಿಗೆ

ಮಕ್ಕಳು ವಿವಿಧ ಮಾದರಿಯ ಪತ್ರಗಳ ಕುರಿತು ಈಗಾಗಲೇ ತಿಳಿದಿದ್ದಾರೆ. ವೈಯಕ್ತಿಕ ಪತ್ರ ಮತ್ತು ವ್ಯಾವಹಾರಿಕ ಪತ್ರಗಳ ನಡುವಣ ವ್ಯತ್ಯಾಸಗಳನ್ನು ಮಕ್ಕಳು ಬಾಯ್ದೆರೆಯಾಗಿ ಹೇಳಲಿ, ಆ ಮೂಲಕ ವೈಯಕ್ತಿಕ ಪತ್ರದಲ್ಲಿ ಇರಬೇಕಾದ ಅಂಶಗಳ ಬಗ್ಗೆ ಮತ್ತೊಮ್ಮೆ ನೆನಪಿಸಿಕೊಳ್ಳಲಿ.

**ವೈಯಕ್ತಿಕ ಪತ್ರದ ಸ್ವರೂಪವನ್ನು ಚರ್ಚಿಸಿ ನೆನಪಿಸಿಕೊಳ್ಳುವುದು**

- ಸ್ಥಳ, ತಾರೀಕು
- ಸಂಬೋಧನೆ
- ಕ್ಷೇಮಸಮಾಚಾರ
- ವಿಷಯ ಮಂಡನೆ
- ಮುಕ್ತಾಯ
- ಸಹಿ
- ವಿಳಾಸಗಳು

ಈ ವಿಚಾರಗಳನ್ನು ಗಮನದಲ್ಲಿರಿಸಿ ಮಕ್ಕಳು 'ಶಶಿಕಲಾ ತನ್ನ ಬದುಕಿನಲ್ಲಿ ಇದಿರಾದ ಕಷ್ಟಗಳ ಬಗ್ಗೆ ತನ್ನ ಹೆತ್ತವರಲ್ಲಿ

ವಿವರಿಸುವ' ಪತ್ರವನ್ನು ಊಹಿಸಿ ಬರೆದು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರ ಸಲಹೆಗಳೊಂದಿಗೆ ಪರಿಷ್ಕರಿಸಿ ಬರೆದುಕೊಳ್ಳಲಿ. ಅಧ್ಯಾಪಕರು ಮಾದರಿಯನ್ನು ಪ್ರದರ್ಶಿಸುವುದು.

## ಸಂದರ್ಶನ ಪ್ರಶ್ನಾವಳಿ

ಸಂದರ್ಶಿಸಬೇಕಾದ ಸ್ಥಳೀಯ ಪ್ರಗತಿಪರ ಕೃಷಿಕರೊಬ್ಬರನ್ನು ವಿದ್ಯಾರ್ಥಿಗಳು ಗುರುತಿಸಲಿ. ಅವರನ್ನು ಸಂದರ್ಶಿಸಲು ಬೇಕಾದ ಪ್ರಶ್ನಾವಳಿಯನ್ನು ಸಿದ್ಧಪಡಿಸಲಿ. ಅನಂತರ ವಿದ್ಯಾರ್ಥಿಗಳು ಅವುಗಳನ್ನು ಓದಿ ಹೇಳಲಿ. ಉತ್ತಮವಾದವುಗಳನ್ನು ಅಧ್ಯಾಪಕರು ಕರೆಹಲಗೆಯಲ್ಲಿ ಬರೆಯುವುದು. ಪೂರಕ ಪ್ರಶ್ನೆಗಳನ್ನು ಅಧ್ಯಾಪಕರು ನೀಡುವುದು. ಪೂರ್ಣಗೊಂಡ ಪ್ರಶ್ನಾವಳಿಯನ್ನು ಪ್ರತಿಯೊಬ್ಬರೂ ಬರೆದುಕೊಳ್ಳಲಿ. ಇದರ ಮುಂದುವರಿಕೆಯಾಗಿ ಅಧ್ಯಾಪಕರ ಮಾರ್ಗದರ್ಶನದಲ್ಲಿ ನಿಗದಿತ ದಿನದಂದು ಕೃಷಿಕರ ಸಂದರ್ಶನ ನಡೆಸಲಿ. ಕೃಷಿಕರು ಹೇಳಿದ ವಿಚಾರಗಳನ್ನು ಟಿಪ್ಪಣಿ ರೂಪದಲ್ಲಿಯೂ ಧ್ವನಿ ಮುದ್ರಣದ ಮೂಲಕವೂ ದಾಖಲಿಸಲಿ. ವಿದ್ಯಾರ್ಥಿಗಳು ವೈಯಕ್ತಿಕವಾಗಿ ಸಂದರ್ಶನದ ವರದಿಯನ್ನು ತಯಾರಿಸಲಿ. ಕೆಲವರಲ್ಲಿ ಸಂದರ್ಶನದ ವರದಿಯನ್ನು ಮಂಡಿಸಲು ತಿಳಿಸುವುದು. ಉತ್ತಮವಾದವುಗಳನ್ನು ಶಾಲಾ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸಲಿ. ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುವುದು.

### ಸಂದರ್ಶನದಲ್ಲಿ ಕೇಳಬಹುದಾದ ಪ್ರಶ್ನೆಗಳು

- ನಿಮ್ಮ ಪೂರ್ಣ ಹೆಸರೇನು?
- ನಿಮಗೆ ಕೃಷಿಯಲ್ಲಿ ಹೆಚ್ಚಿನ ಆಸಕ್ತಿ ಉಂಟಾಗಲು ಕಾರಣವೇನು?
- ನಿಮಗೆ ಎಷ್ಟು ಎಕರೆ ಜಮೀನಿದೆ?
- ಕೃಷಿ ಕೆಲಸಗಳಲ್ಲಿ ನೀವು ಎಷ್ಟು ಸಮಯದಿಂದ ತೊಡಗಿಕೊಂಡಿದ್ದೀರಿ?
- ನೀವು ಯಾವೆಲ್ಲಾ ಬೆಳೆಗಳನ್ನು ಬೆಳೆಯುತ್ತಿದ್ದೀರಿ?
- ಅವುಗಳನ್ನೇ ಬೆಳೆಸಲು ಕಾರಣವೇನು?
- ಬೆಳೆಗಳಿಗೆ ಯಾವ ಯಾವ ಗೊಬ್ಬರಗಳನ್ನು ಬಳಸುತ್ತೀರಿ?
- ಆ ಗೊಬ್ಬರಗಳನ್ನೇ ಬಳಸಲು ಕಾರಣವೇನು?
- ನೀರಾವರಿಗಾಗಿ ಏನನ್ನು ಅವಲಂಬಿಸಿದ್ದೀರಿ?
- ಇಳುವರಿ ಹೇಗಿದೆ?
- ನಿಮ್ಮ ಉತ್ಪನ್ನಗಳಿಗೆ ಸರಿಯಾಗಿ ಮಾರುಕಟ್ಟೆ ಇದೆಯೇ?
- ಪಂಚಾಯತ್ ನಿಂದ ಯಾವ ರೀತಿಯ ಪ್ರೋತ್ಸಾಹ ಪಡೆದಿದ್ದೀರಿ?
- ನೀವು ಯಾವ ಯಾವ ಯೋಜನೆಗಳ ಫಲಾನುಭವಿಗಳು?
- ಕ್ರಿಮಿ ಕೀಟಗಳಿಂದ , ಪ್ರಾಣಿ ಪಕ್ಷಿಗಳಿಂದ ಬೆಳೆಗಳನ್ನು ರಕ್ಷಿಸಲು ಏನು ಕ್ರಮ ಕೈಗೊಂಡಿದ್ದೀರಿ?
- ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವು ಯಾವ ರೀತಿಯಲ್ಲಿ ಪ್ರಭಾವ ಬೀರಿದೆ?

- ಕೃಷಿಯನ್ನು ಜೀವನಾಧಾರವಾಗಿ ಆಯ್ಕೆ ಮಾಡುವುದರ ಕುರಿತು ಮುಂದಿನ ಪೀಳಿಗೆಯವರಿಗೆ ನೀವು ನೀಡುವ ಸಂದೇಶವೇನು?

## ಪ್ರಬಂಧ ರಚನೆ

ಮಕ್ಕಳು ಪ್ರಬಂಧ ಬರೆಯುವ ರೀತಿಯನ್ನು ಈಗಾಗಲೇ ಕಲಿತಿರುವರು. “ಆಧುನಿಕ ಕೃಷಿ ರಂಗ” ಎಂಬ ವಿಚಾರದ ಕುರಿತು ತರಗತಿಯಲ್ಲಿ ಚರ್ಚೆ ನಡೆಸುವುದು. ಅದಕ್ಕೆ ಸಹಾಯಕವಾಗುವಂತೆ ಅಧ್ಯಾಪಕರು ಕೆಲವೊಂದು ಸೂಚನೆಗಳನ್ನು ಮಕ್ಕಳ ಮುಂದಿಡುವುದು. ಪ್ರಬಂಧದಲ್ಲಿ ಒಳಗೊಳ್ಳಬೇಕಾದ ವಿಚಾರಗಳನ್ನು ಸಂಗ್ರಹಿಸಿ ವೈಯಕ್ತಿಕವಾಗಿ ಪ್ರಬಂಧವನ್ನು ರಚಿಸುವುದು, ಬಳಿಕ ಗುಂಪಿನಲ್ಲಿ ಕುಳಿತು ಉತ್ತಮ ಪಡಿಸಿ ಮಂಡಿಸುವುದು.

## ಅನ್ಯ ದೇಶೀಯ ಪದ

ಅನ್ಯ ದೇಶೀಯ ಪದಗಳ ಬಗ್ಗೆ ಚರ್ಚೆ ನಡೆಸುವುದು. ಕೆಲವೊಂದು ಉದಾಹರಣೆಗಳನ್ನು ಕೊಟ್ಟು ‘ಬಾಳು ಬೆಳಗಿಸಿದ ಕೃಷಿ’ ಪಾಠ ಭಾಗದಲ್ಲಿ ಬಂದಿರುವ ಅಂತಹ ಪದಗಳನ್ನು ಪಟ್ಟಿ ಮಾಡಲು ತಿಳಿಸುವುದು.

ಚಿಟ್ ಫಂಡ್, ಕಂಪನಿ, ಬಿಸಿನೆಸ್, ಜನರೇಟರ್, ಸ್ಟಾರ್ಟ್, ಟನ್, ಬ್ಯಾಂಕ್, ಲಾಸ್, ಸಾಫ್ಟವೇರ್, ಎಂಜಿನಿಯರ್

## ಕನ್ನಡ ಅಂಕೆಗಳ ಪರಿಚಯ

ಕನ್ನಡ ಅಂಕೆ ಮತ್ತು ಇಂಗ್ಲೀಷ್ ಅಂಕೆಗಳ ಪಟ್ಟಿಯನ್ನು ಸೂಕ್ಷ್ಮವಾಗಿ ಗಮನಿಸಲು ತಿಳಿಸುವುದು. ಬಳಿಕ ಚರಿತ್ರೆಯ ಕೆಲವು ಪ್ರಧಾನ ಘಟನೆಗಳು ನಡೆದ ವರ್ಷವನ್ನು ಇಂಗ್ಲಿಷ್ ಅಂಕೆಗಳಲ್ಲಿ ಬರೆಯುವುದು. ಮಕ್ಕಳು ಅದನ್ನು ಕನ್ನಡ ಅಂಕೆಯಲ್ಲಿ ನೋಡದೆ ಸರಿಯಾಗಿ ಬರೆಯಲು ಪ್ರಯತ್ನಿಸುವುದು.

- ಸ್ವಾತಂತ್ರ್ಯ ದೊರೆತ ವರ್ಷ - 1947
- ಪ್ರಥಮ ಸ್ವಾತಂತ್ರ್ಯ ಸಂಗ್ರಾಮ -1857
- ಗಾಂಧೀಜಿ ಜನಿಸಿದ ವರ್ಷ - 1869
- ನಮ್ಮ ಪಿನ್ ಕೋಡ್ - 671323
- ನೀವು ಹುಟ್ಟಿದ ವರ್ಷ - .........
- ನಿಮ್ಮ ಮನೆಯ ಮೊಬೈಲ್ ಸಂಖ್ಯೆ - ..........

**ಪೂರಕ ಓದಿಗೆ**

## ಜನಪದ ಗೀತೆ

ಬೆಳಗಾಗಿ ನಾನೆದ್ದು ಯಾರ್ ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳಿಯೋ ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನು

ಮಣ್ಣಲ್ಲಿ ಹುಟ್ಟೋಳೆ ಮಣ್ಣಾಲಿ ಬೆಳೆವೋಳೆ
ಎಣ್ಣೇಲಿ ಕಣ್ಣಾ ಬಿಡುವೋಳೆ ಜಗಜ್ಯೋತಿ
ಸತ್ಯಾದಿಂದುರಿಯೆ ನಮಗಾಗಿ

ಕಲ್ಲು ಕೊಟ್ಟವ್ವಾಗೆ ಎಲ್ಲಾ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ ಆ ಮನೆಗೆ
ಮಲ್ಲಿಗೆ ಮುಡಿಯೊ ಸೊಸೆ ಬರಲಿ

ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ರಾಗೀಯ
ಜಲ್ಲ ಜಲ್ಲನೆ ಉದುರಮ್ಮ ನಾನಿನಗೆ
ಬೆಲ್ಲದಾರತಿಯಾ ಬೆಳಗೇನಾ

ಬೆಳಗಾಗಿ ನಾನೆದ್ದು ಯಾರ್ ಯಾರ ನೆನೆಯಾಲಿ
ಕಲ್ಲು ಕಾವೇರಿ ಕಪನೀಯಾ ನೆನೆದರೆ
ಹೊತ್ತಿದ್ದ ಪಾಪ ಪರಿಹಾರ

ಹೊಸ ಬಂಡಿ ಮೇಲೆ ಹಸುವಿನ ಗೊಬ್ಬರತಂದೆ
ಹಸಿರ ಭೂದೇವಿ ಹಾಕ್ತೇನೆ | ನನ ತಾಯವ್ವ

ಹಸಿದ ಕಂದಯ್ನ ಕಾಯವ್ವ ॥೧॥

ಹೂಡೋದು ಹೊಸ ಎತ್ತು ಹೂಡ್ಯಾನು ಹೊಸ ಮಗ
ಕೂಗು ಕೇಳಮ್ಮ ಭೂದೇವಿ | ನಿನಮಗ
ಸೆರಗು ಕಟ್ಟೆವನೆ ದುಡಿಯೋಕೆ |೨|
ಭೂದೇವಿ ನೀಡವ್ವ ಭಾರಿ ಪೈರಾಗಲವ್ವ
ಬಡವನ ಹರಕೆ ಕೇಳವ್ವ | ಭೂಮಿತಾಯಿ
ನಿನ್ಗೆ ಜೋಡಿ ಹಣ್ಕಾಯಿ ಒಡಿಸೇನು ॥೩॥

ಮಾರುದ್ದ ಪೈರಾಗಲಿ ಮೊಳುದುದ್ದ ತೆನೆಯಾಗಲಿ
ಬಡವನ ಮನೆಗೆ ಸಿರಿಬರಲಿ | ಭೂಮಿತಾಯಿ
ಕಂದಯ್ನ ಹಸಿವು ಇಂಗೋಗ್ಲಿ ॥೪॥

ಹನ್ನೆರಡು ಎತ್ತಿನ ಬಾರಿ ಹೊನ್ನೆಗಂಬ ಮೇಟಿ
ಚಿನ್ನದ ಕೊಂಬೀನ ಬಸವಣ್ಣ | ತುಳಿದ್ಯಾವೊ
ಚೆನ್ನಿಗನಣ್ಣಯ್ಯ ಕಳದಲ್ಲಿ ||೬||

## ನಾಡೋಜ ಡಾ. ಎಲ್. ನಾರಾಯಣ ರೆಡ್ಡಿ (1935-2019)

ಕೃಷಿ ಬ್ರಹ್ಮ, ಕೃಷಿ ಸಂತ, ಕೃಷಿ ತಜ್ಞ ಕೃಷಿ ದಿಗ್ಗಜ ಹೀಗೆ ಹಲವಾರು ಹೆಸರಿನಲ್ಲಿ ಹೆಮ್ಮೆಯಿಂದ ಕರೆಯಲ್ಪಡುತ್ತಿದ್ದ ನಾರಾಯಣ ರೆಡ್ಡಿಯವರು ಬೆಂಗಳೂರು ಸಮೀಪದ ವರ್ತೂರಿನ ಸೋರ ಹುಣಸೆ ಗ್ರಾಮದವರು. ರೈತ ಕುಟುಂಬದ ಶ್ರೀ ಲಕ್ಷ್ಮಯ್ಯ ರೆಡ್ಡಿ ಮತ್ತು ಶ್ರೀಮತಿ ಯಲ್ಲಮ್ಮ ದಂಪತಿಗಳ ಸುಪುತ್ರರಾಗಿ 18 ಸೆಪ್ಟೆಂಬರ್ 1935 ರಲ್ಲಿ ಜನನ. ಎಸ್ .ಎಸ್ ಎಲ್.ಸಿ ಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ.

ಸಾವಯವ ಕೃಷಿ ಮಾಡುವ ಮುನ್ನ ರೆಡ್ಡಿಯವರು ರಾಸಾಯನಿಕ ಕೃಷಿಯಲ್ಲೂ ಉತ್ತಮ ಸಾಧನೆ ಮಾಡಿದವರು

ಹಾಗೂ ರಾಗಿಯಲ್ಲಿ ದಾಖಲೆ ಪ್ರಮಾಣದ ಇಳುವರಿ ಪಡೆದ ಹೆಗ್ಗಳಿಕೆ ಇದೆ. ಜಪಾನಿನ ನೈಸರ್ಗಿಕ ಕೃಷಿ ಪಿತಾಮಹ ಮಸನೊಬು ಫುಕುವೊಕ ಅವರ 'One Straw Revolution' ಪುಸ್ತಕದಿಂದ ಪ್ರೇರಿತರಾಗಿ ಪ್ರಕೃತಿ ಸ್ನೇಹಿ ಕೃಷಿ ಮಾಡಲು ಪ್ರಾರಂಭ ಮಾಡುತ್ತಾರೆ. 1988ರಲ್ಲಿ ಫುಕುವೊಕ ವರ್ತೂರಿನ ಇವರ ಜಮೀನಿಗೆ ಭೇಟಿ ನೀಡಿದರು. 'ಅವರನ್ನು ಭೇಟಿ ಮಾಡಿದ್ದು ನನ್ನ ಜೀವನದ ಅತ್ಯಂತ ಸಂತೋಷದ ಕ್ಷಣ' ಎಂದು ರೆಡ್ಡಿಯವರು ಹೇಳಿಕೊಂಡಿದ್ದಾರೆ.

1994ರಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು ಮರಳೇನ ಹಳ್ಳಿಯಲ್ಲಿ ತೋಟ ಮಾಡಿ ಅಲ್ಲಿಯೇ 2001ರಲ್ಲಿ ಕೃಷಿ ತರಬೇತಿಗೆ ಬರುವವರ ಊಟ, ವಸತಿ ಅನುಕೂಲಕ್ಕೆ ಸಾಲ ಮಾಡಿ ಕೃಷಿ ಕೇಂದ್ರದ ಕಟ್ಟಡ ಕಟ್ಟುತ್ತಾರೆ. ರೆಡ್ಡಿಯವರ ತೋಟ ನೋಡಲು ಮತ್ತು ತರಬೇತಿ ಪಡೆಯಲು ಸಾವಿರಾರು ಸಂಖ್ಯೆಯ ರೈತರು, ವಿದ್ಯಾರ್ಥಿಗಳು ಭೇಟಿ ನೀಡಿದ್ದಾರೆ. ವಿಶೇಷ ಬುದ್ಧಿವಂತಿಕೆ, ಶ್ರೇಷ್ಠ ಜ್ಞಾನ, ಅಪಾರ ಅನುಭವ ಹೊಂದಿದ ರೆಡ್ಡಿಯವರ ಕೃಷಿ ಪಾಠ ಕೇಳಲು ಸದಾ ಜನರ ಗುಂಪು ಸೇರುತ್ತಿತ್ತು.

ರೆಡ್ಡಿಯವರು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಕೃಷಿ ಸಮ್ಮೇಳನಗಳಲ್ಲಿ ಭಾಗವಹಿಸಿ ಉಪನ್ಯಾಸ ನೀಡಿದ್ದಾರೆ. ವಿದೇಶಿ ಸಂಘ-ಸಂಸ್ಥೆಗಳು ಕೃಷಿ ವಿಚಾರಗೋಷ್ಠಿಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಇವರನ್ನು ವಿಶೇಷ ಆಹ್ವಾನಿತರಾಗಿ ಅಹ್ವಾನಿಸಿ ಸುಸ್ಥಿರ ಕೃಷಿ ಮಹತ್ವದ ಬಗ್ಗೆ ಅರಿತುಕೊಂಡಿದ್ದಾರೆ. ವಿದೇಶಗಳಲ್ಲೂ ತಮ್ಮ ನಿರ್ಗಳ ಮಾತುಗಾರಿಕೆಯಿಂದ ಪರಿಸರ ಸ್ನೇಹಿ ಕೃಷಿಯ ಮಹತ್ವ ಸಾರಿ ಬಂದಿದ್ದಾರೆ.

ಪ್ರತಿಷ್ಠಿತ ಕನ್ನಡ ದಿನಪತ್ರಿಕೆ 'ಪ್ರಜಾವಾಣಿ' ಕೃಷಿ ಮಂಥನದಲ್ಲಿ ರೈತರ ಪ್ರಶ್ನೆಗಳಿಗೆ ಸರಳವಾಗಿ ಉತ್ತರ wood. LEISA INDIA' ಆಂಗ್ಲ ಪತ್ರಿಕೆಗೆ 10 ವರ್ಷಗಳಿಗೂ ಹೆಚ್ಚು ಕಾಲ ಅಂಕಣಕಾರರಾಗಿದ್ದರು. ಸುಸ್ಥಿರ ಕೃಷಿ ಕ್ರಮಗಳ ಬಗ್ಗೆ ಬರೆದಿರುವ ಇವರ ಅಂಕಣಗಳು ತುಂಬಾ ಜನಪ್ರಿಯತೆ ಗಳಿಸಿದೆ.

ರೆಡ್ಡಿಯವರ ಕೃಷಿ ಸಾಧನೆ ಗೌರವಿಸಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಪ್ರತಿಷ್ಠಿತ 'ನಾಡೋಜ' ಪ್ರಶಸ್ತಿ, ಕರ್ನಾಟಕ ಸರ್ಕಾರದ 'ರಾಜ್ಯೋತ್ಸವ' ಪ್ರಶಸ್ತಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ 'ಪರಿಸರವಾದಿ' ಪ್ರಶಸ್ತಿ, ಆಂಧ್ರಪ್ರದೇಶದ ರೈತರಿಗೆ ಕಡಿಮೆ ನೀರಿನಲ್ಲಿ 'ಶ್ರೀ' ಪದ್ಧತಿಯಲ್ಲಿ ಭತ್ತ ಬೆಳೆಯುವ ತಾಂತ್ರಿಕತೆ ಕಲಿಸಿಕೊಟ್ಟ ರೆಡ್ಡಿಯವರಿಗೆ ಆಂಧ್ರಪ್ರದೇಶದ ಸರ್ಕಾರ ನೀಡಿದ 'ಕೃಷಿಕ ಮಿತ್ರಡು' ಪ್ರಶಸ್ತಿ, ತಮಿಳುನಾಡು ರಾಜ್ಯದ ಸಾವಯವ ಕೃಷಿ ಒಕ್ಕೂಟದ 'ಸಾಧನೈಯಲ' ಪ್ರಶಸ್ತಿ ಹೀಗೆ ಹಲವಾರು ಸಂಘ- ಸಂಸ್ಥೆಗಳು,ಸರ್ಕಾರಗಳು ಪ್ರಶಸ್ತಿ ನೀಡಿವೆ.

ಕಠಿಣ ಪರಿಶ್ರಮ, ಸರಳ ಜೀವನಶೈಲಿ ಇವು ರೆಡ್ಡಿಯವರ ಮೂಲ ಮಂತ್ರ, ನುಡಿದಂತೆ ಜೀವನ ನೆಡಸಿ ತೋರಿಸಿದವರು. ರೆಡ್ಡಿಯವರಿಗೆ ಸದಾ ತಮ್ಮ ಬೆನ್ನ ಹಿಂದೆ ನಿಂತು ಯಶಸ್ಸಿಗೆ, ಶ್ರೇಯಸ್ಸಿಗೆ ಕಾರಣೀಭೂತರಾದ ಧರ್ಮಪತ್ನಿ ಶ್ರೀಮತಿ ಸರೋಜಮ್ಮನವರ ಬಗ್ಗೆ ಅಪಾರವಾದ ಗೌರವ, ರೆಡ್ಡಿಯವರಿಗೆ ೩ ಗಂಡು ಮಕ್ಕಳು, ಬದುಕಿನ ಕೊನೆ ದಿನದವರೆಗೂ ರೈತರಿಗೆ ಸ್ವಾವಲಂಬಿ ಕೃಷಿ ಮಾರ್ಗದರ್ಶಕರಾಗಿದ್ದ ರೆಡ್ಡಿಯವರು 14 ಜನವರಿ 2019ರ ಬೆಳಗಿನ ಜಾವ ನಿಧನರಾದರು. ಅಂತ್ಯಸಂಸ್ಕಾರವನ್ನು ಅವರ ಸ್ವಗ್ರಾಮ ಸೋರಹುಣಸೆಯಲ್ಲಿ ನಡೆಸಲಾಯಿತು.

* * *

ಘಟಕ 2

# ಹೆಣ್ಣು - ಕಣ್ಣು

## ಮುನ್ನುಡಿ

ಹೆಣ್ಣು ಸಮಾಜದ ಕಣ್ಣು. ಗಂಡು ಹೆಣ್ಣು ಎಂಬ ಭೇದವಿಲ್ಲದೆ ಸಮಾಜದಲ್ಲಿ ಸಾಮರಸ್ಯದ ಬದುಕನ್ನು ಮುನ್ನಡೆಸಬೇಕು. ಹಿಂದೆ ಸಮಾಜವು ಹೆಣ್ಣನ್ನು ಒಂದು ಅಂತರದಲ್ಲಿಟ್ಟು ಆಕೆಯ ಮೇಲೆ ಪುರುಷನ ಆಧಿಪತ್ಯವನ್ನು ಹೇರುತ್ತಿತ್ತು. ಪುರುಷ ಪ್ರಧಾನ ಸಮಾಜದ ನಿರ್ಧಾರಗಳನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾದ ಅವಸ್ಥೆ ಹೆಣ್ಣಿಗಿತ್ತು. ಅಂತಹ ಕಾಲಘಟ್ಟದಲ್ಲಿ ಹೆಣ್ಣಾದವಳು ತನ್ನ ಸಾಮರ್ಥ್ಯವನ್ನು ಪ್ರಕಟ ಪಡಿಸಿದ್ದನ್ನು ಚರಿತ್ರೆಯ ಪುಟಗಳು ದಾಖಲಿಸಿವೆ. ಈ ಘಟಕವು ಒಳಗೊಂಡ 'ರಾಣಿ ಅಬ್ಬಕ್ಕ' ನಾಟಕ ಭಾಗದಲ್ಲಿ ಉಳ್ಳಾಲದ ರಾಣಿಯಾಗಿ ಪರಾಕ್ರಮದಿಂದ ತನ್ನ ನಾಡನ್ನು ವಿದೇಶಿಯರಾದ ಪೋರ್ಚುಗೀಸರಿಂದ ಹೇಗೆ ರಕ್ಷಿಸದಳೆಂಬುದನ್ನು ತಿಳಿಯಬಹುದು. ಪುರುಷನನ್ನು ಮೀರಿಸುವಷ್ಟು ಸಮರ್ಥಳಾಗಿದ್ದಳು.

ಸಂಚಿಯ ಹೊನ್ನಮ್ಮಳು ಬರೆದ 'ಹದಿಬದೆಯ ಧರ್ಮ' ಕಾವ್ಯವು ಒಳಗೊಂಡ "ಬಣ್ಣವೇರಿತು ಪಾಲ್ಗಡಲು" ಪದ್ಯ ಭಾಗವು ಸಮಾಜದಲ್ಲಿ ಹೆಣ್ಣು ಗಂಡು ಸಮಾನರು. ಹೆಣ್ಣು ಕುಲವನ್ನು ಬೆಳಗುವವಳು. ಹೆಣ್ಣು ಸಮಾಜದ ಕಣ್ಣು ಎಂಬ ಆಶಯವನ್ನು ತಿಳಿಯಪಡಿಸುವುದು.

"ಸಾವಿತ್ರಿಬಾಯಿ ಫುಲೆ" ಪಾಠ ಭಾಗವು ಸಮಾಜದಲ್ಲಿ ಹೆಣ್ಣು ಅನುಭವಿಸುವ ಪ್ರತಿಯೊಂದು ಕಷ್ಟಗಳಿಗೂ ಹೆಚ್ಚಿನ ಶಿಕ್ಷಣ ದೊರೆಯದಿರುವುದೇ ಕಾರಣವೆಂದು ತಿಳಿಸುತ್ತದೆ. ಒಂದು ಕಾಲದಲ್ಲಿ ಸಮಾಜದಲ್ಲಿ ಸ್ತ್ರೀಯರು ಶಿಕ್ಷಣ ವಂಚಿತರಾಗಿದ್ದು, ಅವರು ಹೇಗೆಲ್ಲಾ ಶೋಷಣೆಗೆ ಒಳಗಾಗುತ್ತಿದ್ದರು ಎಂಬುದು ಎಲ್ಲರಿಗೂ ತಿಳಿದ ವಿಚಾರವಾಗಿದೆ. ಮಹಿಳೆಯರ ಬಗ್ಗೆ ಅಪಾರ ಕಾಳಜಿಯಿದ್ದ ಸಾವಿತ್ರಿಬಾಯಿ ಫುಲೆಯವರು ಶಿಕ್ಷಣದ ಅಗತ್ಯವನ್ನು ಮನಗಂಡು ಕಾರ್ಯಪ್ರವೃತ್ತರಾಗಿ ಅದರಲ್ಲಿ ಹೇಗೆ ಯಶಸ್ವಿಯಾದರು ಎಂಬುದನ್ನು ಈ ಪಾಠ ಭಾಗವು ನಮಗೆ ತಿಳಿಸುತ್ತದೆ. ಹೆಣ್ಣಿನ ಹಿರಿಮೆಯನ್ನು ಅರಿತುಕೊಂಡು ಅವಳನ್ನು ಹೆತ್ತವರು ಮತ್ತು ಸಮಾಜ ಹೇಗೆ ನಡೆಸಿಕೊಳ್ಳಬೇಕೆಂಬುದನ್ನು ಸೂಚಿಸುವುದು.

## ಕಲಿಕಾ ಉದ್ದೇಶಗಳು:

- ಹೆಣ್ಣು ಬಾಳಿನ ಕಣ್ಣು ಎಂದು ಅರಿಯುವುದು.
- ಆಡಳಿತಾತ್ಮಕವಾಗಿಯೂ, ರಾಜಕೀಯವಾಗಿಯೂ ಮಹಿಳೆಯರು ಸಮರ್ಥರು ಎಂಬುದನ್ನು ತಿಳಿದುಕೊಳ್ಳುವುದು.
- ಸಮಾಜದಲ್ಲಿ ಮಹಿಳೆಯರು ಶೋಷಣೆಗೆ ಒಳಗಾಗುತ್ತಿ ರುವುದನ್ನು ಅರಿತುಕೊಂಡು ಅವರ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದು.
- ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಶೋಷಿತ ಮಹಿಳೆಯರ ಉನ್ನತಿಗಾಗಿ ಶ್ರಮಿಸಿದ ಮಹಿಳಾ ಸಾಧಕಿಯರ ಜೀವನದ ಅನುಭವಗಳು ಮತ್ತು ಹೋರಾಟಗಳ ಯಶೋಗಾಥೆಗಳನ್ನು ಓದಿ ತಿಳಿದುಕೊಳ್ಳುವುದು.
- ತ್ರಿಪದಿ,ಸಾಂಗತ್ಯ,ನಾಟಕ, ಜೀವನಚರಿತ್ರೆಮೊದಲಾದ ಸಾಹಿತ್ಯಪ್ರಕಾರಗಳ ರಚನಾ ಶೈಲಿ, ವೈವಿಧ್ಯತೆ,ವಿಶೇಷತೆಗಳನ್ನು ತಿಳಿಯುವುದು.
- ನೀಡಿದ ವಿಷಯ ಮತ್ತು ಸಂದರ್ಭಕ್ಕೆ ತಕ್ಕಂತೆ ಭಾಷಾ ಸಾಮರ್ಥ್ಯಗಳು, ಮತ್ತು ಆಶಯಪರವಾದ ವ್ಯವಹಾರ ರೂಪಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ಓದಿದ ಸೃಜನಾತ್ಮಕ ರಚನೆಗಳನ್ನು ವಿಭಿನ್ನ ಮತ್ತು ಸೂಕ್ತ ರೀತಿಯಲ್ಲಿ ಪುನರಾವಿಷ್ಕರಿಸುವುದು.
- ಭಾಷಾ ಅಂಶಗಳನ್ನು ತಿಳಿದುಕೊಂಡು ಪದಪ್ರಯೋಗಗಳು,ವಾಕ್ಯ ರಚನೆಗಳಲ್ಲಿ ಇವುಗಳನ್ನು ಕಂಡುಕೊಂಡು ಬರವಣಿಗೆಯಲ್ಲಿ ಅಳವಡಿಸುವುದು.

# ಯುನಿಟ್ ಗ್ರಿಡ್ ಘಟಕ - 2 ಹೆಣ್ಣು - ಕಣ್ಣು

**ಆಶಯ : ಲಿಂಗ ಸಮಾನತೆ**

**ತರಗತಿ : 7 ಮುಂದುವರಿದ ಪಠ್ಯ**

**ಸಮಯ :**

| ಉಪ ಆಶಯಗಳು | ತಿಳುವಳಿಕೆಗಳು | ಸಾಹಿತ್ಯ ಪ್ರಕಾರ | ಭಾಷಾ ಸಾಮರ್ಥ್ಯಗಳು | ಮೌಲ್ಯ ಮನೋಭಾವಗಳು | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕಾ ಉಪಕರಣಗಳು | ಮೌಲ್ಯ ಮಾಪನ |
|---|---|---|---|---|---|---|---|---|
| ಸಾಮಾಜಿಕ ಚಳುವಳಿಗಳು ಆಂದೋಲನಗಳು | ಧೈರ್ಯ ಮತ್ತು ಸಾಹಸಗಳಲ್ಲಿ ಹೆಣ್ಣು ಕಡಿಮೆಯಲ್ಲ ಎಂದು ತಿಳಿಯುವುದು.<br><br>ಮಹಿಳೆಯರು ಸಂದರ್ಭಕ್ಕನುಗುಣವಾಗಿ ವಿವಿಧ ಹೋರಾಟಗಳಲ್ಲಿ ತಮ್ಮನ್ನು ತಾವೇ ತೊಡಗಿಸಿ ಕೊಂಡಿದ್ದಾರೆ ಎಂದು ತಿಳಿದುಕೊಳ್ಳುವುದು | ನಾಟಕ (ರಾಣಿ ಅಬ್ಬಕ್ಕ) | ಅಭಿನಯ ಮತ್ತು ಮಾತುಗಾರಿಕೆಯ ಮೂಲಕ ತನ್ನ ಸಾಮರ್ಥ್ಯವನ್ನು ಅಭಿವ್ಯಕ್ತ ಪಡಿಸುವುದು. | ದೇಶ ಪ್ರೇಮವನ್ನು ಬೆಳೆಸುವುದು<br><br>ಸಂದರ್ಭಕ್ಕನುಗುಣವಾಗಿ ಹೋರಾಟದ ಮನೋಭಾವಗಳನ್ನು ಬೆಳೆಸಿಕೊಳ್ಳುವುದು.<br><br>ಮಹಿಳೆಯರನ್ನು ಗೌರವಿಸುವ ಮನೋಭಾವವನ್ನು ಬೆಳೆಸುವುದು. | ಲೇಖನ ಚಿಹ್ನೆ<br><br>ವಾಕ್ಯ ರಚನೆ | ಪತ್ರಿಕಾ ವಾರ್ತೆ<br><br>ಭಿತ್ತಿ ಪತ್ರ<br><br>ನಾಟಕ ರಚನೆ<br><br>ವ್ಯಕ್ತಿ ಪರಿಚಯ | ಐ. ಸಿ. ಟಿ ಮೂಲಕ ದೃಶ್ಯ ಪ್ರದರ್ಶನ<br><br>ನಾಟಕ ಪುಸ್ತಕ<br><br>ಯುದ್ಧದ ತುಣುಕುಗಳ ಪ್ರದರ್ಶನ<br><br>ನಾಟಕ ಆಲ್ಬಂ | ನಾಟಕಾಭಿನಯದ ಮೌಲ್ಯ ಮಾಪನ<br><br>ನಾಟಕದಲ್ಲಿ ಬಂದ ಪಾತ್ರಗಳ ಗುಣ ವಿಶೇಷತೆಗಳನ್ನು ಅಭಿವ್ಯಕ್ತ ಗೊಳಿಸುವ ರೀತಿಯನ್ನು ಕಂಡುಕೊಳ್ಳುವುದು. |
| | ಗಂಡು ಮತ್ತು ಹೆಣ್ಣು ಸಮಾನರು ಎಂದು ತಿಳಿದು ಕೊಳ್ಳುವುದು | ಸಾಂಗತ್ಯ (ಬಣ್ಣವೇರಿತು ಪಾಲ್ಗಡಲು ) | ರಾಗ ತಾಳ ಲಯ ಬದ್ಧವಾಗಿ ಹಾಡುವುದನ್ನು ಅಭ್ಯಾಸ | ಲಿಂಗ ಸಮಾನತೆಯ ಮನೋಭಾವವನ್ನು ಬೆಳೆಸಿಕೊಳ್ಳುವುದು. | ಪ್ರಾಸಪದಗಳು | ಆಶಯ<br><br>ಸ್ವಾರಸ್ಯ | ಹದಿಬದೆಯ ಧರ್ಮ - ಕೃತಿ<br><br>ಇತರ ಸಾಂಗತ್ಯ | ಗುಂಪಿನಲ್ಲಿ ಹಾಡುವಿಕೆಯ ಪರಸ್ಪರ ಮೌಲ್ಯ ಮಾಪನ |

| | | | | | | | | |
|---|---|---|---|---|---|---|---|---|
| ಮೌಢ್ಯಗಳು | ಸಮಾಜದಲ್ಲಿ ಹೆಣ್ಣು ಗೌರವಕ್ಕೆ ಅರ್ಹಳು ಎಂದು ತಿಳಿದುಕೊಳ್ಳುವುದು. | | ಮಾಡುವುದು. | | ಪದ ವಿಂಗಡಣೆ | ಹೋಲಿಕಾ ಟಿಪ್ಪಣಿ<br>ಲಿಖಿತ ಭಾಷಣ | ಪುಸ್ತಕಗಳು ಅಕ್ಕ ಮಹಾದೇವಿ ವಚನಗಳು | |
| ವಿವಿಧ ಕ್ಷೇತ್ರಗಳಲ್ಲಿ ಮಹಿಳೆ | ವಿದ್ಯಾವಂತ ಮಹಿಳೆ ಉತ್ತಮ ಸಮಾಜವನ್ನು ರೂಪಿಸಬಲ್ಲಳು ಎಂದು ತಿಳಿಯುವುದು.<br>ಸಮಾಜದ ಪುರೋಗತಿಗೆ ಶಿಕ್ಷಣವು ಪ್ರಧಾನ ಕಾರಣವೆಂದು ತಿಳಿಯುವುದು. | ಜೀವನ ಚರಿತ್ರೆ (ಸಾವಿತ್ರಿ ಬಾಯಿ ಫುಲೆ) | ಸಂದರ್ಶನದ ಮೂಲಕ ಮಾಹಿತಿಗಳನ್ನು ಸಂಗ್ರಹಿಸಿ ವರದಿ ತಯಾರಿಸುವ ಸಾಮರ್ಥ್ಯ ಬೆಳೆಸುವುದು.<br>ವಿವಿಧ ಪತ್ರಗಳನ್ನು ಬರೆಯುವ ಕೌಶಲಗಳನ್ನು ಗಳಿಸುವುದು. | ಶಿಕ್ಷಣದ ಮೂಲಕ ಸಂಘಟನಾ ಮನೋಭಾವವನ್ನು ಬೆಳೆಸುವುದು .<br>ಶಿಕ್ಷಣದ ಮೂಲಕ ಸಾಮಾಜಿಕ ತಾರತಮ್ಯವನ್ನು ಹೋಗಲಾಡಿಸುವ ಮನೋಭಾವವನ್ನು ಬೆಳೆಸಿಕೊಳ್ಳುವುದು. | ಕರ್ತೃ,ಕರ್ಮ ಕ್ರಿಯಾಪದಗಳನ್ನು ಗುರುತಿಸುವುದು<br>ಕಾಲ ಸೂಚಕ ಕ್ರಿಯಾ ರೂಪಗಳನ್ನು ಕಂಡುಕೊಳ್ಳುವುದು | ಅಭಿಪ್ರಾಯ ಟಿಪ್ಪಣಿ<br>ಸಂದರ್ಶನ ವರದಿ<br>ಅಭಿನಂದನಾ ಪತ್ರ<br>ವಿಚಾರ ಗೋಷ್ಠಿ ಪ್ರಬಂಧ<br>ಆತ್ಮಕಥೆ | ಸಮಾಜ ಸುದಾರಕಿಯರ ಚಿತ್ರಗಳು<br>ಸಾವಿತ್ರಿ ಬಾಯಿ ಫುಲೆ ಪುಸ್ತಕ | ಸಂದರ್ಶನ ವರದಿ ವಿಚಾರಗೋಷ್ಠಿ ಅಭಿಪ್ರಾಯ ಟಿಪ್ಪಣಿ ಮೊದಲಾದವುಗಳನ್ನು ಚರ್ಚೆಯ ಮೂಲಕ ಉತ್ತಮ ಪಡಿಸುವುದು. |

## ಘಟಕ ಪ್ರವೇಶ

ಪಾಠಭಾಗದಲ್ಲಿ ನೀಡಿರುವ ಪತ್ರಿಕಾ ತುಣುಕುಗಳನ್ನು ಮಕ್ಕಳು ಓದುವುದು. ಕಂಡುಕೊಂಡ ವಿಚಾರಗಳನ್ನು ಗುಂಪಿನಲ್ಲಿ ಪರಸ್ಪರ ಚರ್ಚಿಸುವುದು. ಅಧ್ಯಾಪಕರು ಕೆಲವರಲ್ಲಿ ಮಂಡಿಸಲು ಸೂಚಿಸುವುದು. ಗುಂಪಿನಲ್ಲಿ ಮಂಡಿಸಿದ ವಿಚಾರಗಳನ್ನು ಕ್ರೋಡೀಕರಿಸಲು ಅಧ್ಯಾಪಕರು ಸೂಕ್ತ ಮಾರ್ಗದರ್ಶನವನ್ನು ನೀಡುವುದು.

**ಈ ರೀತಿಯಲ್ಲಿ ಕ್ರೋಡೀಕರಿಸಬಹುದು**

ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಧನೆಗೈಯುತ್ತಿದ್ದಾರೆ. ಕಲೆ,ಕ್ರೀಡೆ, ಸಾಹಿತ್ಯ , ವಿಜ್ಞಾನ ತಂತ್ರಜ್ಞಾನ ಬಾಹ್ಯಾಕಾಶ ಮೊದಲಾದ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿ ಸಮಾನರಾಗಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದಾರೆ. ಇಂದು ಜಗತ್ತು ಶೈಕ್ಷಣಿಕವಾಗಿ ಬಹಳ ಮುಂದುವರಿದಿದ್ದು ಮಹಿಳೆಯರಿಗೆ ಮುಕ್ತವಾದ ಅವಕಾಶಗಳು ದೊರೆಯುತ್ತಿದೆ. ತಮಗೆ ದೊರಕಿರುವ ಸುಸಂದರ್ಭವನ್ನು ಯೋಗ್ಯವಾಗಿ ಬಳಸುತ್ತಿದ್ದಾರೆ. ಸಮಾಜವು ಕೂಡಾ ಮಹಿಳೆಯರ ಪ್ರಗತಿಗೆ ಪ್ರೋತ್ಸಾಹವನ್ನು ನೀಡುತ್ತಿದೆ.

## ಪಾಠ ಓದು

ರಾಣಿ ಅಬ್ಬಕ್ಕ ನಾಟಕದ ಪಾಠ ಭಾಗವನ್ನು ಮೊದಲು ಮಕ್ಕಳು ಮೌನವಾಗಿ ಓದಲಿ. ನಂತರ ಅಧ್ಯಾಪಕರು ನಾಟಕದ ಹಿನ್ನೆಲೆಯನ್ನು ಧ್ವನಿ ಮುದ್ರಿಸಿ ಕೇಳಿಸಲಿ. ಮಕ್ಕಳಲ್ಲಿ ಕೆಲವರಿಂದ ನಾಟಕ ಭಾಗವನ್ನು ಓದಿಸುವುದು. ಅಧ್ಯಾಪಕರು ಏರಿಳಿತದೊಂದಿಗೆ ನಾಟಕದ ಸಂಭಾಷಣೆಯನ್ನು ಓದುವುದು. ಒಂದು ದೃಶ್ಯ ಪೂರ್ತಿಯಾದ ನಂತರ ಮಕ್ಕಳಿಂದ ನಾಟಕ ಭಾಗವನ್ನು ಓದಿಸುವುದು. ಇದೆ ರೀತಿಯಲ್ಲಿ ನಾಲ್ಕು ದೃಶ್ಯಗಳು ಮುಂದುವರಿಯಬೇಕು.

## ಉತ್ತರಿಸಿರಿ

ಮಕ್ಕಳು ಪಾಠಭಾಗದಲ್ಲಿ ಕೊಟ್ಟ ಆಶಯ ಪೂರ್ಣ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಪಾಠ ಭಾಗದಿಂದ ಕಂಡುಕೊಂಡು ಉತ್ತರಿಸಲಿ.

## ಪಾತ್ರ ಚಿತ್ರಣ

ರಾಣಿ ಅಬ್ಬಕ್ಕ ನಾಟಕ ಭಾಗದಲ್ಲಿ ಬಂದಿರುವ ಅಬ್ಬಕ್ಕನ ಪಾತ್ರದಲ್ಲಿ ಮಕ್ಕಳು ಕಂಡುಕೊಂಡ ಗುಣ ಸ್ವಭಾವಗಳ ವಿಶೇಷತೆಗಳನ್ನು ಬಾಯ್ದೆರೆಯಾಗಿ ಹೇಳಲಿ. ತಾವು ಕಂಡುಕೊಂಡ ಮಾಹಿತಿಯ ಆಧಾರದಲ್ಲಿ ಮಂಡಿಸಲಿ.

- ಪ್ರಜೆಗಳ ಬಗೆಗೆ ಅವಳಿಗಿರುವ ಅಪಾರವಾದ ಗೌರವ.
- ನಾಡಿನ ಬಗ್ಗೆ ಅವಳಿಗಿರುವ ಸ್ವಾತಂತ್ರ್ಯ ಪ್ರೇಮ.
- ಪರಕೀಯರಿಗೆ ಕಪ್ಪಾ ಕೊಟ್ಟು ತಲೆಬಾಗಬಾರದೆಂಬ ಸ್ವಾಭಿಮಾನ.
- ಹೆಣ್ಣಾದವಳು ರಣರಂಗದಲ್ಲಿ ಹೇಗೆ ಹೋರಾಡಬಹುದೆಂಬ ಸಾಹಸ.
- ಯುವ ಜನರನ್ನೆಲ್ಲ ಒಗ್ಗೂಡಿಸುವ ರಣ ತಂತ್ರ.

### ಪಾತ್ರ ಚಿತ್ರಣ ಹೀಗೂ ಇರಬಹುದಲ್ಲವೇ

## ರಾಣಿ ಅಬ್ಬಕ್ಕ

ರಾಣಿ ಅಬ್ಬಕ್ಕ ತುಳುನಾಡಿನ ವೀರ ಮಹಿಳೆ. ಬಾಲ್ಯದಲ್ಲಿಯೇ ಮಾವನಿಂದ ಕತ್ತಿವರಸೆ, ಕುದುರೆ ಸವಾರಿ,ತುಫಾಕಿ ಹಾರಿಸುವುದು ಮೊದಲಾದ ಯುದ್ಧ ವಿದ್ಯೆಗಳನ್ನು ಕಲಿತು ಪರಿಣತೆಯಾದಳು. ಪೋರ್ಚುಗೀಸರಿಗೆ ಕಪ್ಪ ಕೊಡುವ ತೀರ್ಮಾನವನ್ನು ಅಬ್ಬಕ್ಕಳು ತೀವ್ರವಾಗಿ ವಿರೋಧಿಸಿದಳು.ತನ್ನ ಸ್ವಾಭಿಮಾನವನ್ನು ವಿದೇಶಿಯರಿಗೆ ಅಡವಿಡಲು ಒಪ್ಪದ ಅವಳು ಗಂಡನಮನೆಯನ್ನು ತೊರೆದು ತವರು ಮನೆ ಸೇರಿಕೊಂಡಳು. ಇಲ್ಲಿ ಅವಳಿಗೆ ಇದ್ದ ಸ್ವಾತಂತ್ರ್ಯದ ಹಂಬಲ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ತವಕ, ಅವಳಲ್ಲಿದ್ದ ಛಲ, ವ್ಯಕ್ತವಾಗುತ್ತದೆ. ಉಳ್ಳಾಲದ ತರುಣರನ್ನೆಲ್ಲ ಒಗ್ಗೂಡಿಸಿ ಅವರಿಗೆ ಯುದ್ಧ ವಿದ್ಯೆಗಳನ್ನು ಕಲಿಸಿದಳು. ವ್ಯಾಪಾರವನ್ನು ಹೆಚ್ಚಿಸಲು ದೊಡ್ಡದೊಡ್ಡ ಹಡಗುಗಳನ್ನು ಕಟ್ಟಿಸಿದಳು. ರಾಣಿಯ ಧೈರ್ಯ, ಉತ್ಸಾಹ, ಸ್ವಾತಂತ್ರ್ಯ ಪ್ರೇಮವು ಉಳ್ಳಾಲದ ಪ್ರಜಾ ಜನರಲ್ಲಿ ನವ ಚೈತನ್ಯವನ್ನುಂಟುಮಾಡಿತು. ಹೀಗಿರಲು ಒಂದು ದಿನ ಪೋರ್ಚುಗೀಸರು ಉಳ್ಳಾಲದ ಮೇಲೆ ಆಕ್ರಮಣವನ್ನು ಮಾಡಲು ಸಂಚು ಹೂಡಿದರು. ಇದನ್ನು ತಿಳಿದ ಅಬ್ಬಕ್ಕ ತನ್ನ ಯುವ ಸೇನೆಯನ್ನು ಕೂಡಿಕೊಂಡು ಪ್ರತಿ ದಾಳಿ ಮಾಡಿದಳು. ಪೋರ್ಚುಗೀಸರು ಯುದ್ಧದಲ್ಲಿ ಸೋತು ಹೋದರು. ಅಬ್ಬಕ್ಕಳು ಸ್ವಾತಂತ್ರ್ಯ ಪ್ರಿಯಳಾಗಿದ್ದಳು. ತನ್ನ ನಾಡನ್ನು ಪರಕೀಯರ ದಾಸ್ಯಕ್ಕೆ ಒಳಪಡಿಸಬಾರದೆಂದು ಧೃಡ ನಿರ್ಧಾರವನ್ನು ಮಾಡಿದ್ದಳು. ಅವಳ ಪರಾಕ್ರಮ , ದೇಶ ಪ್ರೇಮ, ನಾಯಕತ್ವದ ಗುಣಗಳು ನಮಗೆಲ್ಲರಿಗೂ ಆದರ್ಶಪ್ರಾಯವಾಗಿದೆ.

### ಭಿತ್ತಿ ಪತ್ರ

ನಾಟಕದ ಪ್ರದರ್ಶನಕ್ಕಾಗಿ ಮಕ್ಕಳು ಭಿತ್ತಿಪತ್ರವನ್ನು ತಯಾರಿಸುವ ಮೊದಲು ಅಧ್ಯಾಪಕರು ನೀಡಿರುವ ಮಾದರಿ ಭಿತ್ತಿಪತ್ರಗಳನ್ನು ಓದಲಿ ನಂತರ ಭಿತ್ತಿ ಪತ್ರದಲ್ಲಿರುವ ವಿಚಾರಗಳ ಬಗ್ಗೆ ಚರ್ಚಿಸಲಿ.

**ಭಿತ್ತಿಪತ್ರದಲ್ಲಿ ಏನಿರಬೇಕು?**

- ಸ್ಥಳ
- ಸಮಯ
- ದಿನಾಂಕ
- ಶೀರ್ಷಿಕೆ
- ಚೌಕಟ್ಟು
- ಆಕರ್ಷಕ ರಚನೆ

**ಭಿತ್ತಿಪತ್ರ ಹೀಗೂ ಇರಬಹುದಲ್ಲವೇ**

ಪ್ರಿಯರೇ ,

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡಿನಲ್ಲಿ ಇದೇ ಬರುವ ತಾರೀಕು 22-10-2024 ಮಂಗಳವಾರ ಮಧ್ಯಾಹ್ನ 3.00 ಗಂಟೆಗೆ 7ನೇ ತರಗತಿಯ ವಿದ್ಯಾರ್ಥಿಗಳಿಂದ **'ರಾಣಿ ಅಬ್ಬಕ್ಕ'** ಎಂಬ ಚಾರಿತ್ರಿಕ ನಾಟಕ ಪ್ರದರ್ಶನಗೊಳ್ಳಲಿದೆ. ವಿದ್ಯಾಭಿಮಾನಿಗಳಾದ ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ.

**ಶಾಲಾ ವಿದ್ಯಾರ್ಥಿಗಳು**

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೋಡು.**

**ನಾಟಕ ಅಭಿನಯ**

ನಾಟಕವನ್ನು ಶಾಲಾ ಸಾಹಿತ್ಯಸಭೆಯಲ್ಲಿ ಅಭಿನಯಿಸಿರಿ. ಅಧ್ಯಾಪಕರು ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಅವರಿಗೆ ಪಾತ್ರಗಳನ್ನು ಹಂಚಿಕೊಟ್ಟು ತರಗತಿಯಲ್ಲಿ ನಾಟಕವನ್ನು ಅಭಿನಯಿಸುವಂತೆ ಸೂಚಿಸುವುದು. ಬಳಿಕ ಉತ್ತಮವಾಗಿ ಅಭಿನಯಿಸುವವರ ಆಯ್ಕೆ ನಡೆಯಲಿ. ವೇದಿಕೆಯಲ್ಲಿ ನಾಟಕದ ಪ್ರದರ್ಶನಕ್ಕೆ ಅಗತ್ಯವಿರುವ ಸೂಚನೆಗಳನ್ನು ಅಧ್ಯಾಪಕರು ನೀಡಬೇಕು.

**ನಾಟಕದಲ್ಲಿ ಯಾವೆಲ್ಲಾ ಅಂಶಗಳು ಒಳಗೊಂಡಿರಬೇಕು?**

- ವಿಷಯ (ಕಥಾವಸ್ತು)

- ಸಂಭಾಷಣೆ
- ವೇದಿಕೆ
- ಹಿಮ್ಮೇಳ
- ರಂಗ ಸಜ್ಜಿಕೆ
- ದೃಶ್ಯ
- ಧ್ವನಿ ಮತ್ತು ಬೆಳಕು
- ಪಾತ್ರವರ್ಗಗಳು
- ವೇಷಭೂಷಣ

## ಪತ್ರಿಕಾ ವಾರ್ತೆ

ಮಕ್ಕಳು ಪತ್ರಿಕೆಗಳಲ್ಲಿ ಬರುವ ವಾರ್ತೆಗಳನ್ನು ಓದಿರಬಹುದು. ಇಂತಹ ವಾರ್ತೆಗಳನ್ನು ಬರೆಯುವ ರೀತಿಯನ್ನು ಮಕ್ಕಳಲ್ಲಿ ಬೆಳೆಸಬೇಕಾಗಿದೆ. ಪತ್ರಿಕಾ ವಾರ್ತೆಯು ಒಂದು ಪ್ರಧಾನವಾದ ವ್ಯವಹಾರ ರೂಪವಾಗಿದೆ. ಪತ್ರಿಕಾ ವಾರ್ತೆಗಳನ್ನು ಸಂಗ್ರಹಿಸಿ ಓದುವುದರ ಮೂಲಕ ಪತ್ರಿಕಾ ವಾರ್ತೆಯ ಸ್ವರೂಪವನ್ನು ತಿಳಿಯುವ ಅವಕಾಶ ಮಾಡಿಕೊಡುವುದು. ಬಳಿಕ 'ರಾಣಿ ಅಬ್ಬಕ್ಕ' ನಾಟಕವು ನಿಮ್ಮ ಶಾಲೆಯಲ್ಲಿ ನಡೆಯಲಿದೆ ಎಂಬ ವಾರ್ತೆಯನ್ನು ಪತ್ರಿಕೆಯಲ್ಲಿ ಪ್ರಕಟ ಪಡಿಸಬೇಕಾಗಿದೆ. ಪತ್ರಿಕಾ ವಾರ್ತೆಯಲ್ಲಿ ಏನೆಲ್ಲಾ ಒಳಗೊಂಡಿರಬೇಕು ಎಂಬ ಚರ್ಚೆ ನಡೆಯಲಿ.

**ವಾರ್ತೆಯು ಹೇಗಿರಬೇಕು?**

- ವಾರ್ತೆಗೆ ಸೂಕ್ತವಾದ ಶೀರ್ಷಿಕೆ ಇರಬೇಕು.
- ವಸ್ತುನಿಷ್ಠವಾಗಿರಬೇಕು.
- ಸ್ಥಳ ದಿನಾಂಕ ಇರಬೇಕು.
- ಮಾಹಿತಿಯು ಸರಳವಾಗಿಯೂ ಸಂಕ್ಷಿಪ್ತವಾಗಿಯೂ ಇರಬೇಕು.
- ಆಕರ್ಷಕವಾದ ಶೈಲಿ ಇರಬೇಕು.

ಸಂಗ್ರಹಿಸಿದ ವಾರ್ತಾ ತುಣುಕುಗಳ ಆಧಾರದಲ್ಲಿ ನಡೆಯಲಿರುವ ಕಾರ್ಯಕ್ರಮದ ಪತ್ರಿಕಾ ವಾರ್ತೆಯನ್ನು ಮಕ್ಕಳು ವೈಯಕ್ತಿಕವಾಗಿ ರಚಿಸಲಿ. ಕೆಲವರ ಮಂಡನೆಯ ಬಳಿಕ ಗುಂಪಿನಲ್ಲಿ ಉತ್ತಮ ಪಡಿಸುವುದು. ಅಧ್ಯಾಪಕರು ವಾರ್ತೆಯನ್ನು ಬರೆದು ಪ್ರದರ್ಶಿಸುವುದು.

**ಪತ್ರಿಕಾ ವಾರ್ತೆ ಹೀಗೂ ಇರಬಹುದಲ್ಲವೇ**

## ಶಾಲಾ ಸಾಹಿತ್ಯ ಸಭೆ -ನಾಟಕ ಪ್ರದರ್ಶನ

ಕಾಸರಗೋಡು: ಅಗೋಸ್ತು 20 ಸರಕಾರಿ ಯು.ಪಿ ಶಾಲೆ ಕಾಸರಗೋಡಿನಲ್ಲಿ ಶಾಲಾ ಸಾಹಿತ್ಯ ಸಭೆಯ ಅಂಗವಾಗಿ ಏಳನೇ ತರಗತಿಯ ವಿದ್ಯಾರ್ಥಿಗಳಿಂದ ಅಗೋಸ್ತು 30 ರಂದು ಅಪರಾಹ್ನ 3.00 ಗಂಟೆಗೆ "ರಾಣಿ ಅಬ್ಬಕ್ಕ" ಎಂಬ ನಾಟಕವು ಪ್ರದರ್ಶನಗೊಳ್ಳಲಿದೆ. ಜಿಲ್ಲಾ ಪಂಚಾಯತ್ ಅಧ್ಯಕ್ಷರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿರುವರು. ಈ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಶಾಲಾ ಮುಖ್ಯೋಪಾಧ್ಯಾಯರು ತಿಳಿಸಿದ್ದಾರೆ.

**ವ್ಯಕ್ತಿ ಪರಿಚಯ ಬರೆಯಿರಿ**

ಮಕ್ಕಳು ತನ್ನ ನಾಡಿಗಾಗಿ ಹೋರಾಡಿದ ವೀರ ಮಹಿಳೆ 'ಕಿತ್ತೂರ ರಾಣಿ ಚೆನ್ನಮ್ಮ' ನ ಕುರಿತು ವಿಷಯಗಳನ್ನು ಸಂಗ್ರಹಿಸಲಿ. ನಂತರ ತರಗತಿಯಲ್ಲಿ ಚರ್ಚಿಸಲಿ. ಅಧ್ಯಾಪಕರು ಅವರಿಗೆ ಪೂರಕವಾದ ಪುಸ್ತಕಗಳನ್ನು ಒದಗಿಸಬೇಕು. ಪುಸ್ತಕದ ಆಧಾರದಲ್ಲಿ ಮಕ್ಕಳು ವ್ಯಕ್ತಿ ಪರಿಚಯವನ್ನು ಬರೆಯುವುದು.

## "ವೀರರಾಣಿ ಕಿತ್ತೂರು ಚೆನ್ನಮ್ಮ"

ಭಾರತದ ಇತಿಹಾಸದಲ್ಲಿ ನಾಡಿನ ಸ್ವಾತಂತ್ರ್ಯಕ್ಕಾಗಿ ಕೆಚ್ಚೆದೆಯಿಂದ ಹೋರಾಡಿದ ವೀರ ಮಹಿಳೆಯರಲ್ಲಿ ವೀರರಾಣಿ ಕಿತ್ತೂರ ಚೆನ್ನಮ್ಮ ಒಬ್ಬಳು. ಚೆನ್ನಮ್ಮಳು 23 ಅಕ್ಟೋಬರ್ 1778 ರಲ್ಲಿ ಬೆಳಗಾವಿ ಜಿಲ್ಲೆಯ ಕಾಕತಿ ಎಂಬಲ್ಲಿ ಜನಿಸಿದಳು. ಚೆನ್ನಮ್ಮನ ತಂದೆ ದೇಸಾಯಿ ಧೂಳಪ್ಪ ಗೌಡ ಮತ್ತು ತಾಯಿ ಪದ್ಮಾವತಿ. ಚೆನ್ನಮ್ಮ ಎಳೆಯ ವಯಸ್ಸಿನಲ್ಲಿಯೇ ಕುದುರೆ ಸವಾರಿ,ಕತ್ತಿ ವರಸೆ, ಬಿಲ್ಲು ವಿದ್ಯೆಗಳನ್ನು ಕರಗತ ಮಾಡಿಕೊಂಡಿದ್ದಳು. ತನ್ನ 15ನೇ ವಯಸ್ಸಿನಲ್ಲಿ ಕಿತ್ತೂರಿನ ದೇಸಾಯಿಗಳಲ್ಲಿ ಪ್ರಸಿದ್ಧನಾದ ಮಲ್ಲಸರ್ಜನನ್ನು ಮದುವೆಯಾದಳು. 1816 ರಲ್ಲಿ ಪತಿ ಮಲ್ಲಸರ್ಜನು ಮರಣ ಹೊಂದಿದನು. 1824 ರಲ್ಲಿ ಅವಳ ಒಬ್ಬನೇ ಮಗನನ್ನೂ ಕಳೆದುಕೊಂಡಳು. ಮಗನ ಮರಣದ ನಂತರ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡು ಸಿಂಹಾಸನದ ಉತ್ತರಾಧಿಕಾರಿಯಾಗಿ ಮಾಡಿದಳು. ಆದರೆ ಅಂದಿನ ಬ್ರಿಟಿಷ್ ಸರಕಾರವು ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನಿಯಮವನ್ನು ಜಾರಿಗೊಳಿಸಿತ್ತು. 1824 ರಲ್ಲಿ ಬ್ರಿಟಿಷ್ ಸರ್ಕಾರವು ಕಿತ್ತೂರನ್ನು ವಶಪಡಿಸಿಕೊಳ್ಳಲು ಮುಂದಾಗಿತ್ತು. ಚೆನ್ನಮ್ಮ ಅದನ್ನು ವಿರೋಧಿಸಿದಳು. 1824 ಅಕ್ಟೋಬರ್ 23 ರಂದು ಬ್ರಿಟಿಷ್ ಅಧಿಕಾರಿ ಥ್ಯಾಕರೆ ತನ್ನ ಸೈನ್ಯದೊಂದಿಗೆ ಕಿತ್ತೂರಿನ ಮೇಲೆ ಯುದ್ಧಕ್ಕೆ ಬರುತ್ತಾನೆ. ಆ ಯುದ್ಧದಲ್ಲಿ ಚೆನ್ನಮ್ಮ ಆಂಗ್ಲರ ಸೈನ್ಯವನ್ನು ಸೋಲಿಸುತ್ತಾಳೆ. ಮಾತ್ರವಲ್ಲ ಥ್ಯಾಕರೆ ರಣರಂಗದಲ್ಲಿ ಮರಣ ಹೊಂದುತ್ತಾನೆ .1824 ಡಿಸೆಂಬರ್ 23 ರಂದು ಆಂಗ್ಲರು ಪುನಃ ಕಿತ್ತೂರಿನ

ಮೇಲೆ ದಾಳಿ ಮಾಡಿ ಕೋಟೆಗಳನ್ನು ವಶಪಡಿಸುತ್ತಾರೆ. ಚೆನ್ನಮ್ಮನನ್ನು ಆಂಗ್ಲರು ಬಂಧಿಸುತ್ತಾರೆ. ಆಂಗ್ಲರು ಚೆನ್ನಮ್ಮನನ್ನು ಬೈಲ ಹೊಂಗಲದ ಸೆರೆಮನೆಗೆ ತಳ್ಳುತ್ತಾರೆ. ಜೈಲಿನಲ್ಲಿ ಚೆನ್ನಮ್ಮ 1829 ಫೆಬ್ರವರಿ 21 ರಂದು ಕೊನೆಯುಸಿರೆಳೆಯುತ್ತಾಳೆ.

### ಲೇಖನ ಚಿಹ್ನೆ

ಪಾಠಭಾಗದಲ್ಲಿ ಕೊಟ್ಟಿರುವ ಸಾಲುಗಳನ್ನು ಗಮನಿಸಿ ಸರಿಪಡಿಸುವುದು.

### ವಾಕ್ಯ ರಚನೆ

ವಾಕ್ಯ ರಚನೆಗೆ ಕೊಟ್ಟ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯಗಳನ್ನು ರಚಿಸಿರಿ.

- ಉತ್ಸಾಹ - ಶಾಲಾ ಆಟೋಟ ಸ್ಪರ್ಧೆಗಳಲ್ಲಿ ಮಕ್ಕಳು ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ.
- ಪಶ್ಚಾತ್ತಾಪ - ತಪ್ಪು ಮಾಡಿದವನಿಗೆ ತನ್ನ ತಪ್ಪಿನ ಅರಿವಾದಾಗ ಪಶ್ಚಾತ್ತಾಪ ವಾಗುತ್ತದೆ.
- ನವಚೈತನ್ಯ - ಮಹಾತ್ಮರ ಮಾತುಗಳು ಯುವಕರಲ್ಲಿ ನವಚೈತನ್ಯವನ್ನು ಮೂಡಿಸಿತು.
- ನುಚ್ಚು ನೂರು - ಬಿರುಗಾಳಿಗೆ ಸಿಕ್ಕಿದ ಹಡಗು ಬಂಡೆಗೆ ಬಡಿದು ನುಚ್ಚು ನೂರಾಯಿತು.

### ನಾಣ್ಣುಡಿಗಳು

ಒಂದು ನಾಡಿನಲ್ಲಿ ಇರುವ ಹಿರಿಯರ ಪ್ರಸಿದ್ಧವಾದ ನುಡಿ ಅಥವಾ ಅನುಭವದ ಮಾತುಗಳನ್ನು ನಾಣ್ಣುಡಿಗಳು ಎನ್ನುತ್ತಾರೆ.

- ನಾಯಿ ಬಾಲ ಡೊಂಕು
- ಕಾಯಕವೇ ಕೈಲಾಸ
- ಒಗ್ಗಟ್ಟಿನಲ್ಲಿ ಬಲವಿದೆ.

## ಬಣ್ಣವೇರಿತು ಪಾಲ್ಗಡಲು

ಅಕ್ಕಮಹಾದೇವಿಯ ಕೆಲವು ವಚನಗಳನ್ನು ಅಧ್ಯಾಪಕರು ತರಗತಿಯಲ್ಲಿ ಹಾಡುವುದು. ನಂತರ ಸಾಹಿತ್ಯ ಪ್ರಕಾರವಾದ ಸಾಂಗತ್ಯವನ್ನು ಪರಿಚಯಿಸುವುದು. ಅಧ್ಯಾಪಕರು ಬಣ್ಣವೇರಿತು ಪಾಲ್ಗಡಲು ಪದ್ಯಭಾಗವನ್ನು ರಾಗವಾಗಿ ಹಾಡುವುದು.

## ಪದ್ಯ ಭಾಗದ ಸಂಕ್ಷಿಪ್ತ ಆಶಯ

1. ಹೆಣ್ಣು ಹೆತ್ತವರ ಬಳಗ ಬೇಗ ಬೇಗ ಬೆಳೆಯುತ್ತದೆ. ಹೆಣ್ಣು ಹೆತ್ತವರು ಗೌರವವನ್ನು ಪಡೆಯುವರು. ಹೆಣ್ಣು ಹೆತ್ತದ್ದರಿಂದ ಹೆಸರು ಬರುತ್ತದೆ. ಆದುದರಿಂದಲೇ ಕ್ಷೀರ ಸಮುದ್ರದ ಕೀರ್ತಿ ಹೆಚ್ಚಿತು.
2. ಹಿಮವಂತ ಹೆಣ್ಣಿನಿಂದ ಹೆಮ್ಮೆ ಪಡೆದನು. ಹೆಣ್ಣಿನಿಂದ ಭೃಗುವಿನ ಕೀರ್ತಿ ಹೆಚ್ಚಿತು. ಹೆಣ್ಣಿನಿಂದ ಜನಕನು ಖ್ಯಾತಿ ಪಡೆದನು. ಆದುದರಿಂದ ಹೆಣ್ಣನ್ನು ಏಕೆ ನಿಂದಿಸಬೇಕು?
3. ಕುಮಾರನಾದರೆ ಬಂದ ಹೆಚ್ಚಿನ ಗುಣವೇನು? ಕುಮಾರಿಯಾದರೆ ಕುಂದೇನು? ಇಬ್ಬರಲ್ಲಿಯಾರಿಂದ ಅಭಿವೃದ್ಧಿ ಹೊಂದುತ್ತಾರೆಯೋ ಅವರಿಂದ ಇಹಪರ ಸುಖಗಳು ಲಭಿಸುತ್ತವೆ.
4. ಕುಲಪುತ್ರನು ವಿದ್ಯಾಭ್ಯಾಸ ಮಾಡಿ ಅದನ್ನು ಅರ್ಥ ಮಾಡಿಕೊಂಡು ನಡೆದುಕೊಂಡ ಹೊರತು ಕುಲವನ್ನು ಉದ್ಧರಿಸಲಾರನು. ಕುಲಪುತ್ರಿಯನ್ನು ಒಳ್ಳೆಯ ಗಂಡನಿಗೆ ಕೊಟ್ಟು ಮದುವೆ ಮಾಡಿದ ಮಾತ್ರಕೆ ಅವಳು ಕುಲಕೋಟಿಗಳನ್ನು ಉದ್ಧರಿಸುವಳು.
5. ಹುಟ್ಟಿದ ಮನೆಯೊಳಗೆ ಕಲಹ ಮಾಡಿ, ದ್ರವ್ಯವನ್ನು ಪಡೆಯುವ ಗಂಡು ಮಕ್ಕಳು ಹಾಗಿರಲಿ, ತಮಗೆ ವಿಶ್ವಾಸದಿಂದ ಕೊಟ್ಟಷ್ಟರಿಂದ ತೃಪ್ತಿಹೊಂದುವ ಹೆಣ್ಣು ಮಕ್ಕಳಿಗೆ ನ್ಯಾಯವಾಗಿ ಮನ ತುಂಬಿ ಬಲ್ಲವರು ಕೊಡಬೇಕು.
6. ನನ್ನ ಹೆತ್ತವರು ಇವರು. ಈ ಮನೆಯ ಒಡವೆ ಆಸ್ತಿಗಳು ನನ್ನವು ಎಂದು ಹೆಣ್ಣು ಮಕ್ಕಳು ಆಸೆಪಡುವುದಿಲ್ಲ. ಅಂಥ ಹೆಣ್ಣು ಮಕ್ಕಳನ್ನು ಇತರರಿಗೆ ಕೊಡುವವರೆಗಾದರೂ ಮಮತೆಯಿಂದ ಚೆನ್ನಾಗಿ ಕಾಣಬೇಕು.

## ಹಾಡಿರಿ

ತರಗತಿಯಲ್ಲಿ ಮಕ್ಕಳು ಗುಂಪುಗಳಾಗಿ ಪದ್ಯವನ್ನು ಹಾಡುವುದು. ಬೇರೆ ಬೇರೆ ರಾಗಗಳನ್ನು ಸಂಯೋಜಿಸುವುದು. ಉತ್ತಮವಾಗಿ ಹಾಡಿದ ತಂಡವನ್ನು ಅಭಿನಂದಿಸುವುದು.

## ಉತ್ತರಿಸಿರಿ

ಕೊಟ್ಟಿರುವ ಪ್ರಶ್ನೆಗಳನ್ನು ಸರಿಯಾಗಿ ಅರ್ಥೈಸಿ, ಅದರ ಆಶಯವನ್ನು ತಿಳಿದು ಉತ್ತರಿಸುವುದು.

## ಪದ ವಿಂಗಡಿಸಿ ಬರೆಯಿರಿ

ಇವರಿರ್ವರೊಳೇಳ್ಗೆ - ಇವರು+ಇರ್ವರೊಳು+ಏಳ್ಗೆ

ಪೆಣ್ಣೆಂದೇತಕೆ - ಪೆಣ್ಣು+ಎಂದು+ಏತಕೆ

ಕುವರಿಯಾದೊಡೆ- ಕುವರಿ+ಆದೊಡೆ

ಪೆಸರೆನಿಸಿತು - ಪೆಸರು + ಎನಿಸಿತು

ಬಣ್ಣವೇರಿತು - ಬಣ್ಣ + ಏರಿತು

ಗುಣವೇನದರಿಂದ - ಗುಣವು + ಏನು + ಅದರಿಂದ

ಎನ್ನಪೆತ್ತವರಿವರೀಮನೆಯೊಡವೆಗಳೆನ್ನವೆಂದೆರವಿಲ್ಲದಿರ್ಪ - ಎನ್ನ ಪೆತ್ತವರು+ ಇವರು + ಈ + ಮನೆಯ + ಒಡವೆಗಳು+ ಎನ್ನವು+ ಎಂದು + ಎರವಿಲ್ಲದೆ + ಇರ್ಪ

ಕನ್ಯೆಯನನ್ಯರಿಗೀವನ್ನೆವರಮುರೆಮನ್ನಿಸುವುದು - ಕನ್ಯೆಯನು + ಅನ್ಯರಿಗೆ+ ಈವ + ಅನ್ನೆವರಂ + ಉರೆ+ ಮನ್ನಿಸುವುದು

ಕುಲವನುದ್ಧರಿಸಲರಿಯನು - ಕುಲವನು+ಉದ್ಧರಿಸಲು+ಅರಿಯನು

## ಆಶಯ ಬರವಣಿಗೆ

ಮಕ್ಕಳು ಈಗಾಗಲೇ ಆಶಯ ಗ್ರಹಣ ಪ್ರಶ್ನೆಗಳಿಗೆ ಉತ್ತರಿಸಿರುವರು. ಇದರ ಆಧಾರದಲ್ಲಿ ಅವರು ಪದ್ಯದ ಆಶಯವನ್ನು ವೈಯಕ್ತಿಕವಾಗಿ ಬರೆಯಲಿ.

**ಸೂಚಕಗಳು**

- ಪದ್ಯದ ಸಮಗ್ರ ಆಶಯವನ್ನು ಸ್ಪಷ್ಟವಾಗಿ ಬರೆಯಲಾಗಿದೆ.
- ಆಶಯವನ್ನು ಅನುಕ್ರಮವಾಗಿ ಬರೆಯಲಾಗಿದೆ.
- ಉತ್ತಮ ಭಾಷಾ ಶೈಲಿಯನ್ನು ಬಳಸಲಾಗಿದೆ.

ಸೂಚಕಗಳ ಆಧಾರದಿಂದ ಉತ್ತಮವಾದ ಆಶಯವನ್ನು ಮಕ್ಕಳು ಬರೆಯಲಿ. ಕೊನೆಗೆ ಅಧ್ಯಾಪಕರು ಬರೆದ ಆಶಯವನ್ನು ತರಗತಿಯಲ್ಲಿ ಮಂಡಿಸುವುದು. ಅದನ್ನು ನೋಡಿ ಮಕ್ಕಳು ತಾವು ಬರೆದುದನ್ನು ಉತ್ತಮಪಡಿಸಲಿ.

## ಪದ್ಯದ ಆಶಯ ಹೀಗೂ ಇರಬಹುದಲ್ಲವೇ

ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮ ಸಾಂಗತ್ಯ ಕೃತಿಯಿಂದ ಆಯ್ದ ಪದ್ಯಭಾಗವಾದ ಬಣ್ಣವೇರಿತು ಪಾಲ್ಗಡಲು ಕಾವ್ಯದಲ್ಲಿ ಕಾವ್ಯಭಾಗದಲ್ಲಿ ಕವಯತ್ರಿ ಹೆಣ್ಣಿನ ಹಿರಿಮೆಯನ್ನು ಪ್ರತಿಪಾದಿಸುತ್ತಾಳೆ .ಹೆಣ್ಣು ಹೆತ್ತವರ ಬಳಗ ಬೆಳೆಯುತ್ತದೆ .ಅವರ ಗೌರವ ಹೆಚ್ಚುತ್ತದೆ ಮತ್ತು ಪಾಲ್ಗಡಲಿನಂತೆ ಶುಭ್ರವಾಗಿ ಪಸರಿಸುತ್ತದೆ ಎಂಬ ಆಶಯವನ್ನು ಮೊದಲ ಭಾಗದಲ್ಲಿ ಕವಯತ್ರಿ ಪ್ರತಿಪಾದಿಸುತ್ತಾಳೆ. ಹೆಣ್ಣು ಹೆತ್ತದ ರಿಂದ ಹಿಮವಂತ ಹಿರಿಮೆಯನ್ನು ಪಡೆದನು. ಭೃಗು ಹಿಗ್ಗಿದನು ಜನಕನು ಖ್ಯಾತಿಯನ್ನು ಪಡೆದನು.ಆದು ರಿಂದ ಹೆಣ್ಣನ್ನು ನಿಂದಿಸಬಾರದು . ಕುಮಾರ ನಾದೊಡೆ ಬಂದ ಹೆಚ್ಚಿನ ಗುಣವೇನೂ ಇಲ್ಲ. ಕುವರಿಯಾ ದೊಡೆ ಕುಂದೂ ಇಲ್ಲ. ಇವರಲ್ಲಿ ಯಾರಿಂದ ಅಭಿವೃದ್ಧಿ ಉಂಟಾಗುತ್ತದೆಯೋ ಅದರಿಂದಲೇ ಇಹಪರ ಸುಖಗಳು ಪ್ರಾಪ್ತವಾಗುತ್ತವೆ .ಪುತ್ರನು ವಿದ್ಯಾರ್ಜನೆ ಮಾಡದಿದ್ದರೆ ಕುಲವನ್ನು ಉದ್ದರಿಸಲರಿಯನು. ಕುಲಪುತ್ರಿ ಯನ್ನು ಯೋಗ್ಯ ವರನಿಗಿತ್ತು ಮದುವೆ ಮಾಡಿದರೆ ಅವಳು ಕುಲವನ್ನು ಉದ್ದರಿಸುವಳು. ಗಂಡು ಮಕ್ಕಳು ತಂದೆ ತಾಯಿಯ ಆಸ್ತಿಗಾಗಿ ಜಗಳ ಮಾಡಿದರೆ ಹೆಣ್ಣು ಮಕ್ಕಳು ತಮ್ಮ ಹೆತ್ತವರು ಕೊಟ್ಟದ್ದರಲ್ಲಿ ತೃಪ್ತಿ ಹೊಂದುತ್ತಾರೆ .ಆದ್ದರಿಂದ ಹೆಣ್ಣು ಮಕ್ಕಳಿಗೆ ಬಲ್ಲವರು ಮನತುಂಬಿ ಕೊಡಬೇಕು .ಹೆಣ್ಣು ಮಕ್ಕಳು ತಮ್ಮ ಮನೆಯ ಸಂಪತ್ತಿಗೆ ಆಸೆ ಪಡುವುದಿಲ್ಲ .ತವರಿಂದ ಹೊರಗೆ ಕಳುಹಿಸುವ ಕಳುಹಿಸುವವರೆಗಾದರೂ ಅವಳನ್ನು ಅಕ್ಕರೆಯಿಂದ ಕಾಣಬೇಕೆಂದು ಸಂಚಿಹೊನ್ನಮ್ಮ ತನ್ನ ಕಾವ್ಯ ಭಾಗದಲ್ಲಿ ನಿರೂಪಿಸಿದ್ದಾಳೆ.

## ಸ್ವಾರಸ್ಯ ಬರೆಯಿರಿ

ಕೆಳಗಿನ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.ಮಕ್ಕಳು ಪದ್ಯದ ಸಾಲುಗಳ ಸ್ವಾರಸ್ಯವನ್ನು ಬರೆಯುವ ಮೊದಲು ಪದ್ಯ ಭಾಗದಿಂದ ಒಂದು ಸಾಲನ್ನು ಆಯ್ದು ಅದರ ಸ್ವಾರಸ್ಯವನ್ನು ಬರೆದು ಚರ್ಚಿಸಲಿ.

**ಪೆಣ್ಣಿಂದ ಪೆರ್ಮೆಗೊಂಡನು ಹಿಮವಂತನು**

**ಪೆಣ್ಣಿಂದ ಭೃಗು ಪೆರ್ಚಿದನು**

ಕವಯತ್ರಿ ಸಂಚಿಯ ಹೊನ್ನಮ್ಮ ಈ ಪದ್ಯದ ಸಾಲುಗಳಲ್ಲಿ ಪರ್ವತ ರಾಜನಾದ ಹಿಮವಂತನು ಪಾರ್ವತಿಯೆಂಬ ಮಗಳಿಂದ ಲೋಕದಲ್ಲಿ ಗೌರವವನ್ನು ಗಳಿಸಿದನು. ಅದೇ ರೀತಿಯಲ್ಲಿ ಭೃಗು ಮಹರ್ಷಿಯು ಮಹಾಲಕ್ಷ್ಮಿಯೆಂಬ ಪುತ್ರಿಯಿಂದಾಗಿ ಕೀರ್ತಿಯನ್ನು ಪಡೆದನು. ಹೆಣ್ಣು ಮಕ್ಕಳನ್ನು ಯೋಗ್ಯರಿಗೆ ವಿವಾಹ ಮಾಡಿ ಕೊಟ್ಟಿದ್ದರಿಂದ ಯಾವ ರೀತಿ ಅವರ ತಂದೆ ತಾಯಂದಿರು ಯಶಸ್ಸನ್ನು ಪಡೆಯುತ್ತಾರೆ ಎಂಬ ಅಂಶವನ್ನು ಈ ಉದಾಹರಣೆಗಳ ಮೂಲಕ ಕವಯತ್ರಿ ಸ್ವಾರಸ್ಯಕರವಾಗಿ ನಿರೂಪಿಸಿದ್ದಾಳೆ.

## ಹೋಲಿಕಾ ಟಿಪ್ಪಣಿ

ಮಕ್ಕಳು ಬಣ್ಣವೇರಿತು ಪಾಲ್ಗಡಲು ಪದ್ಯದ ಸಾಲುಗಳನ್ನು ಸರ್ವಜ್ಞನ ವಚನದೊಂದಿಗೆ ಹೋಲಿಸಲಿ.

**ಪದ್ಯವನ್ನು ಹೋಲಿಸುವಾಗ ಗಮನಿಸಬೇಕಾದ ಅಂಶಗಳು**

- ಕವಿಗಳ ಬಗ್ಗೆ ಬರೆದಿರಬೇಕು.
- ಎರಡು ಪದ್ಯಗಳಲ್ಲಿರುವ ಸಾಮಾನ್ಯ ವಿಷಯಗಳು ಬಗ್ಗೆ ತಿಳಿಸಿರಬೇಕು.
- ಪದ್ಯಗಳಲ್ಲಿ ಇರುವ ಆಶಯದ ಸಾಮ್ಯ ವ್ಯತ್ಯಾಸಗಳನ್ನು ಬರೆದಿರಬೇಕು.
- ಎರಡು ಪದ್ಯಗಳ ಶೈಲಿ, ಪದ ಬಳಕೆ, ವರ್ಣನೆ, ಉಪಮೆ ಚಮತ್ಕಾರಗಳನ್ನು ಗಮನಿಸಿಕೊಂಡು ಬರೆದಿರಬೇಕು.
- ರಾಗ-ತಾಳ-ಲಯಗಳಿಗೆ ಒಗ್ಗಿಕೊಳ್ಳುವುದರ ಬಗ್ಗೆ ಬರೆದಿರಬೇಕು.

## ಹೋಲಿಕಾ ಟಿಪ್ಪಣಿ ಹೀಗೂ ಇರಬಹುದಲ್ಲವೇ

ಸಂಚಿಯ ಹೊನ್ನಮ್ಮ ಬರೆದ ಪದ್ಯ ಭಾಗ ಹಾಗೂ ಸರ್ವಜ್ಞನ ವಚನಗಳು ಹೆಣ್ಣಿನ ಹಿರಿಮೆಯನ್ನು ಸಾರುತ್ತದೆ. ಸಂಚಿಯ ಹೊನ್ನಮ್ಮ ತನ್ನ ಪದ್ಯ ಭಾಗದಲ್ಲಿ ಹೆಣ್ಣು ಮತ್ತು ಗಂಡು ಸಮಾನರು, ಅವರಲ್ಲಿ ಮೇಲು ಕೀಳು ಎಂಬುದಿಲ್ಲ. ಹೆಣ್ಣು ಗಂಡುಗಳಿಬ್ಬರು ಪರಸ್ಪರ ಹೊಂದಾಣಿಕೆಯಿಂದಿದ್ದರೆ ಬದುಕಿನಲ್ಲಿ ಸಂತೋಷವನ್ನು ಪಡೆಯಬಹುದು ಎಂದು ತಿಳಿಸಿದ್ದಾಳೆ. ಸರ್ವಜ್ಞನು ತನ್ನ ವಚನದಲ್ಲಿ ಹೆಣ್ಣಿನಿಂದಲೇ ಇಹಪರ ಸುಖವು ದೊರೆಯುವುದು. ಸಕಲ ಸಂಪತ್ತುಗಳು ದೊರೆಯುವುದು ಹೆಣ್ಣಿನಿಂದಲೇ. ಲೋಕದಲ್ಲಿ ಹೆಣ್ಣನ್ನು ಬಯಸದವರು ಯಾರಿದ್ದಾರೆ ಎಂದು ಪ್ರಶ್ನಿಸುತ್ತಾನೆ. . ಲೌಖಿಕ ಮತ್ತು ಅಲೌಖಿಕ ಸುಖಕ್ಕೆ ಹೆಣ್ಣೇ ಕಾರಣಳು ಎಂಬುದನ್ನು ಇಬ್ಬರೂ ಎತ್ತಿ ಹೇಳುತ್ತಾರೆ.

## ಲಿಖಿತ ಭಾಷಣ ತಯಾರಿಸಿರಿ

ಹೋಲಿಕಾ ಟಿಪ್ಪಣಿಯ ಆಧಾರದಲ್ಲಿ ಸ್ತ್ರೀ ಪುರುಷ ಸಮಾನರು, ಇವರ ನಡುವೆ ಯಾವುದೇ ರೀತಿಯ ತಾರತಮ್ಯ ಸಲ್ಲದು ಎನ್ನುವ ವಿಷಯವನ್ನು ವಿಶ್ಲೇಷಿಸುತ್ತಾ ಶಾಲಾ ಕಲೋತ್ಸವದಲ್ಲಿ ಭಾಷಣ ಮಾಡಲು ಲಿಖಿತ ಭಾಷಣವನ್ನು ಮಕ್ಕಳು ತಯಾರಿಸಲಿ.

**ಸೂಚಕಗಳು**

- ಆಶಯ ಕ್ರಮೀಕರಣ
- ಭಾಷಾ ಶೈಲಿ
- ಉತ್ತಮವಾದ ಆರಂಭ

- ವಿಷಯ ವಿಶ್ಲೇಷಣೆ
- ಯೋಗ್ಯವಾದ ಮುಕ್ತಾಯ

ಮಕ್ಕಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ಅವರಿಗೆ ವಿಷಯವನ್ನು ನೀಡಬೇಕು. ಅವರು ಗುಂಪಿನಲ್ಲಿ ಚರ್ಚಿಸಿ ಭಾಷಣವನ್ನು ಲಿಖಿತವಾಗಿ ಬರೆಯುವರು. ನಂತರ ಮಕ್ಕಳು ಗುಂಪಿನಲ್ಲಿ ಮಂಡಿಸುವರು. ಉಳಿದ ಮಕ್ಕಳು ಗಮನಿಸಲಿ. ಅಧ್ಯಾಪಕರು ಒಂದು ಮಾದರಿ ಲಿಖಿತ ಭಾಷಣವನ್ನು ನೀಡಬೇಕು.

## ಲಿಖಿತ ಭಾಷಣ ಹೀಗೂ ಇರಬಹುದಲ್ಲವೇ?

ನಾಗರೀಕತೆಯ ಪೂರ್ವದಲ್ಲೇ ಸಮಾಜದಲ್ಲಿ ಮಹಿಳೆ ಶೋಷಣೆಯನ್ನು ಅನುಭವಿಸುತ್ತಿದ್ದಳು. ಆದರೂ ಅದನ್ನು ಮೌನವಾಗಿ ಸಹಿಸಿಕೊಂಡು ಸಮಾಜದಲ್ಲಿ ಹೊಂದಾಣಿಕೆಯಿಂದ ಬದುಕುತ್ತಿದ್ದಳು. ಕುಟುಂಬ ವ್ಯವಸ್ಥೆಯ ಪ್ರಧಾನ ಸೂತ್ರಧಾರಿಯೇ ಹೆಣ್ಣು. ಹೆಣ್ಣಿನ ಸಹಾಯವಿಲ್ಲದೆ ಒಂದು ಕುಟುಂಬದಲ್ಲಿ ಸಮೃದ್ಧಿ, ಸಂತೃಪ್ತಿ ದೊರೆಯಲು ಸಾಧ್ಯವಿಲ್ಲ. ಹೆಣ್ಣು ಮತ್ತು ಗಂಡು ಸಮಾಜದ ಎರಡು ಕಣ್ಣುಗಳಿದ್ದಂತೆ. ಯಾರು ಮೇಲು ಅಲ್ಲ, ಕೀಳೂ ಅಲ್ಲ. ಇಬ್ಬರೂ ಸಮಾನರು. ಮಹಿಳಾ ಸಬಲೀಕರಣಕ್ಕಾಗಿ ಇಂದು ಸರಕಾರವು ಎಲ್ಲಾ ರೀತಿಯ ಸವಲತ್ತುಗಳನ್ನು ನೀಡುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಧಾರಾಳವಾಗಿ ಅವಕಾಶಗಳನ್ನು ನೀಡುತ್ತಿದೆ. ಬಾಲ್ಯದಿಂದ ಮುಪ್ಪಿನವರೆಗೆ ಕುಟುಂಬದ ಆರೈಕೆಯಲ್ಲಿ ಜೀವನ ನಡೆಸುವ ಮಹಿಳೆಯು ದೇಶದ ಆರ್ಥಿಕ ಬೆಳವಣಿಗೆಯ ಪಾಲುದಾರಳಾಗಿದ್ದರೂ ಆಕೆಯ ಮೇಲಿನ ದಬ್ಬಾಳಿಕೆ ಇನ್ನೂ ಪೂರ್ತಿಯಾಗಿ ನಿಂತಿಲ್ಲ. ಆಧುನಿಕ ಕಾಲಘಟ್ಟದಲ್ಲಿ ಶೈಕ್ಷಣಿಕವಾಗಿ ಪ್ರಭುದ್ಧರಾದ ಈ ಸಮಾಜದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆ ತನ್ನನ್ನು ಗುರುತಿಸಿಕೊಂಡಿರುವುದು ನಮಗೆಲ್ಲರಿಗೂ ಅಭಿಮಾನ ಸಂಗತಿಯಾಗಿದೆ. ಆದ್ದರಿಂದ ವಿದ್ಯಾವಂತರಾದ ನಾವೆಲ್ಲರೂ ಸ್ತ್ರೀ-ಪುರುಷರ ಹಾಗೂ ತೃತೀಯ ಲಿಂಗಿಗಳ ನಡುವಿನ ಭೇದವನ್ನು ಸಂಪೂರ್ಣವಾಗಿ ಅಳಿಸಿ ಸಮಾನತೆಯ ಆಶಯವನ್ನು ಬೆಳೆಸಬೇಕಾಗಿದೆ.

## ಪ್ರಾಸಪದಗಳು

ಪದ್ಯಭಾಗದಲ್ಲಿ ಬಂದಿರುವ ಪ್ರಾಸಪದಗಳನ್ನು ಕಂಡು ಹಿಡಿದು ಬರೆಯಲು  ಮಕ್ಕಳಲ್ಲಿ ಸೂಚಿಸುವುದು. ಬಳಿಕ ಕೆಲವು ಮಕ್ಕಳು  ಮಂಡಿಸುವುದು. ಪದ್ಯದಲ್ಲಿ ಬಂದಿರುವ ಆದಿಪ್ರಾಸಗಳ ಕುರಿತು ಚರ್ಚಿಸುವುದು. ಅಧ್ಯಾಪಕರು ಕರಿ ಹಲಗೆಯಲ್ಲಿ ಬರೆಯುವುದು .

- ಕುವರ - ಕುವರಿ
- ಪುಟ್ಟಿದ - ದಿಟ್ಟ
- ಎನ್ನ - ಳೆನ್ನ

## ಹೆಚ್ಚಿನ ಓದಿಗಾಗಿ

ಪೆಣ್ಣಲ್ಲವೆ ನಮ್ಮನ್ನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು
ಸಿರಿರಾಣಿಯ ಸೀತೆಯ ರುಕ್ಮಿಣಿಯ ಶ್ರೀ
ಹರಿಯೊಡನೊಂದೆ ಹಂತಿಯೊಳು
ಇರಿಸಿ ಪೂಜೆಯನೊಡರಿಸುವರು ಪಿರಿಯರು
ಪರಕಿಪೊಡುವರು ಪೆಣ್ಣೈಸೆ
ತನ್ನ ಮನೆಯೊಳುಂಡು ತವರುಮನೆಯ ಸಂ
ಪನ್ನ ವಕ್ಕೆಂಬ ಪೆಣ್ಗಳಿಗೆ
ಪೊನ್ನ ತೊಡಿಗೆ ಪೊಸದುಗುಲಂಗಳನಿತ್ತು
ಮನ್ನಿಸುವುದು ಮನವರಿತು
ಬಡವರಾವೆಮಗೆಲ್ಲಿ ಬರ್ಪುದೊಡವೆಯೆಂದು
ಕಡುದೈನ್ಯವಾಡಿ ಕಳೆಯದೆ
ಉಡದೆ ತೊಡದೆ ತಾವುಳಿದು ತನುಜೆಯರಿ
ಗುಡುತೊಡುವೊಡವೆ ಕೊಡುವುದು
ತನ್ನ ತವರುಮನೆಯವರಿತ್ತ ಪಿತ್ತಳೆ
ಪೊನ್ನೆಂದು ಬಗೆದು ಪೂಜಿಸುವ
ಕನ್ನೆಯರೊಳು ಕಡುಗೂರ್ಮೆಯನೊಡರಿಸಿ
ಪೊನ್ನು ರನ್ನದೊಳು ಪೂಜುವುದು

# ಸಾವಿತ್ರಿಬಾಯಿ ಫುಲೆ

ಪಾಠ ಭಾಗವನ್ನು ಪ್ರವೇಶಿಸುವ ಮೊದಲು ಸಾಮಾಜಿಕವಾಗಿ ಗುರುತಿಸಲ್ಪಟ್ಟ ಮಹಿಳೆಯರ ಚಿತ್ರಗಳನ್ನು ತೋರಿಸುವುದು. ಅದಕ್ಕೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಮಕ್ಕಳಲ್ಲಿ ಕೇಳಬೇಕು. ಮಕ್ಕಳು ಸರಿಯಾದ ಉತ್ತರವನ್ನು ನೀಡುವರು. ನಂತರ ಅಧ್ಯಾಪಕರು ಒಬ್ಬರು ಅಂತಹ ಮಹಿಳೆಯರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಹೇಳಬೇಕು. ನಂತರ ಸಾವಿತ್ರಿಬಾಯಿ ಫುಲೆ ಪಾಠವನ್ನು ಮಕ್ಕಳಲ್ಲಿ ಓದಲು ಹೇಳುವುದು ಮಕ್ಕಳು ಓದಿದ ನಂತರ ಅಧ್ಯಾಪಕರು ಬಾಯ್ದಿರೆಯಾಗಿ ಓದುವುದು.

## ಉತ್ತರಿಸಿರಿ

ಪಾಠ ಭಾಗದಲ್ಲಿ ಕೊಟ್ಟಿರುವ ಪ್ರಶ್ನೆಗಳನ್ನು ಓದುವುದು. ಮಕ್ಕಳು ಪ್ರಶ್ನೆಗಳಿಗೆ ಸೂಕ್ತವಾದ ಉತ್ತರವನ್ನು ಪಾಠ ಭಾಗದಿಂದ ಆರಿಸಿ ಬರೆಯುವರು.

## ಅಭಿಪ್ರಾಯ ಟಿಪ್ಪಣಿ

ಟಿಪ್ಪಣಿ ತಯಾರಿಸುವ ಮೊದಲು ಅಧ್ಯಾಪಕರು ಈ ವಿಚಾರಕ್ಕೆ ಪೂರಕವಾದ ಕೆಲವೊಂದು ವಿಷಯಗಳನ್ನು ಪಾಠ ಭಾಗದ ಆಧಾರದಲ್ಲಿ ವಿದ್ಯಾರ್ಥಿಗಳೊಂದಿಗೆ ಚರ್ಚಿಸಬೇಕು. ಚರ್ಚಿಸುವಾಗ ಈ ರೀತಿಯ ಕೆಲವು ಪ್ರಶ್ನೆಗಳನ್ನು ಕೇಳಬಹುದು.

- ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂದರೇನು ?
- ಸಮ ಬಾಳು ಸಮಪಾಲುಗಳಿಂದ ವಂಚಿತರಾದವರು ಯಾರು?
- ಸಮಾನ ಅವಕಾಶಗಳನ್ನು ಪಡೆಯುವಲ್ಲಿ ಶಿಕ್ಷಣದ ಪಾತ್ರವೇನು?
- ಎಲ್ಲರಿಗೂ ಸಿಗಬೇಕಾದ ಮೂಲಭೂತ ಅವಶ್ಯಕತೆಗಳು ಯಾವುವು?

ಮಕ್ಕಳು ವೈಯಕ್ತಿಕವಾಗಿ ಟಿಪ್ಪಣಿ ತಯಾರಿಸಿದ ನಂತರ ಕೆಲವರು ಮಂಡಿಸಲಿ. ಬಳಿಕ ಅಧ್ಯಾಪಕರು ರಚಿಸಿದ ಟಿಪ್ಪಣಿಯನ್ನು ಮಂಡಿಸುವುದು. ಇದನ್ನು ಆಧಾರವಾಗಿಟ್ಟುಕೊಂಡು ಮಕ್ಕಳು ತಮ್ಮ ಟಿಪ್ಪಣಿಯನ್ನು ಗುಂಪಿನಲ್ಲಿ ಕುಳಿತು ಉತ್ತಮ ಪಡಿಸಲಿ. ಅಭಿಪ್ರಾಯ ಟಿಪ್ಪಣಿ ಹೀಗೂ ಇರಬಹುದಲ್ಲವೇ

ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ಮಾತು ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯದ ಕಲ್ಪನೆಯನ್ನು ಪ್ರತಿನಿಧಿಸುತ್ತದೆ. ಪ್ರತಿಯೊಬ್ಬರನ್ನು ಗೌರವಿಸುವ ಮತ್ತು ಮೌಲ್ಯಯುತವಾದ ಯಶಸ್ವಿಯಾದ ಜೀವನವನ್ನು ಸಾಗಿಸಲು ಸಮಾನ ಅವಕಾಶವನ್ನು ನೀಡುವ ಸಮಾಜದ ಕಲ್ಪನೆಯನ್ನು ಒತ್ತಿ ಹೇಳುತ್ತದೆ. ಎಲ್ಲಾ ಪ್ರಶ್ನೆಗಳಿಗೆ ಅವರ ಸಾಮಾಜಿಕ ಸ್ಥಾನಮಾನ, ಲಿಂಗ, ಜನಾಂಗ ಅಥವಾ ಯಾವುದೇ ಇತರ ವ್ಯತ್ಯಾಸಗಳನ್ನು ಲೆಕ್ಕಿಸದೆ ಸಮಾನ ಅವಕಾಶಗಳ ಅಗತ್ಯವನ್ನು ಇದು ಸಾರಿ ಹೇಳುತ್ತದೆ. ಪ್ರಸ್ತುತ

ಪಾಠದಲ್ಲಿ ನಾವು ತಿಳಿದುಕೊಂಡಂತೆ ಸಾವಿತ್ರಿಬಾಯಿ ಪುಲೆಯವರು ಸಮಾಜದ ಹಲವು ವರ್ಗದ ಜನರಿಗೆ ಅವರ ಸಮಾನ ಅವಕಾಶದ ಹಕ್ಕನ್ನು ಒದಗಿಸಿಕೊಟ್ಟಿದ್ದಾರೆ. ವಿಶೇಷವಾಗಿ ಕೆಳವರ್ಗದ ಹೆಣ್ಣು ಮಕ್ಕಳು ತಮ್ಮ ಮೂಲಭೂತ ಅವಶ್ಯಕತೆಗಳಾದ ಆಹಾರ, ಆರೋಗ್ಯ ಶಿಕ್ಷಣದಿಂದ ವಂಚಿತರಾಗಿದ್ದರು. ಜಾತಿ ವ್ಯವಸ್ಥೆ,ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಶಿಕ್ಷಣದಿಂದ ದೂರ ಉಳಿದಿದ್ದಳು. ಆದರೆ ಸಾವಿತ್ರಿಬಾಯಿ ಪುಲೆಯವರು ಇಂತಹ ಪರಿಸ್ಥಿತಿಯಲ್ಲಿ ಸ್ವತಹ ಶಿಕ್ಷಿತರಾಗಿ, ಶಿಕ್ಷಕಿಯಾಗಿ ಹಲವಾರು ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಕೊಡಿಸಿದರು. ಶಿಕ್ಷಣವೆನ್ನುವ ದೀಪದಿಂದ ಆ ಹೆಣ್ಣುಮಕ್ಕಳ ಜೀವನವನ್ನು ಬೆಳಗುವಂತೆ ಮಾಡಿದರು. ಈ ಮೂಲಕ ತಮಗಿರುವ ಸಮಾನ ಅವಕಾಶವನ್ನು ಪಡೆಯುವತ್ತ ವೈಚಾರಿಕವಾಗಿ ಬಲ ಪಡಿಸಿದರು. ಶಿಕ್ಷಣವೆನ್ನುವುದು ಎಲ್ಲರಿಗೂ ದೊರಕಬೇಕಾದ ಮೂಲಭೂತ ಅವಶ್ಯಕತೆ ಎಂದು ತೋರಿಸಿಕೊಟ್ಟರು.

## ಸಂದರ್ಶನ ವರದಿ

ಸಂದರ್ಶನ ಮಾಡಲು ಸೂಕ್ತವಾದ ವ್ಯಕ್ತಿಯನ್ನು ಆರಿಸಿಕೊಳ್ಳಬೇಕು. ವಿಶೇಷವಾಗಿ ಶೋಷಣೆಗೆ ಒಳಗಾದ ಮಹಿಳೆಯರು, ಯಾವುದಾದರೂ ಸಾಮಾಜಿಕ ಸಮಸ್ಯೆಯಿಂದಾಗಿ ಅನೇಕ ಕಷ್ಟಗಳನ್ನು ಎದುರಿಸಿ ಛಲದಿಂದ ಬದುಕು ಕಟ್ಟಿಕೊಂಡವರು ಅಥವಾ ಶೋಷಿತ ಮಹಿಳೆಯರ ಸಬಲೀಕರಣಕ್ಕಾಗಿ ಶ್ರಮಿಸಿದ ಶ್ರೇಷ್ಠ ಮಹಿಳೆಯರು ಆಗಬಹುದು.

ವ್ಯಕ್ತಿಯೊಬ್ಬರನ್ನು ಸಂದರ್ಶನ ನಡೆಸಿ ಮಾಹಿತಿಯನ್ನು ಸಂಗ್ರಹಿಸಲು ಪೂರಕವಾದ ಸಂದರ್ಶನ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಸಂದರ್ಶನ ಸಮಯದಲ್ಲಿ ಈ ಪ್ರಶ್ನೆಗಳನ್ನು ಕೇಳಬೇಕು. ಮುಖ್ಯವಾಗಿ ಅವರು ಎದುರಿಸಿರುವ ಸವಾಲುಗಳು, ಅನುಭವಿಸಿದ ಕಷ್ಟಗಳು, ಜೀವನ ಯಶಸ್ಸಿನ ಗಾಥೆಗಳು,ಆವಶ್ಯವಾದಲ್ಲಿ ವೈಯಕ್ತಿಕ ವಿಚಾರಗಳ ಬಗ್ಗೆ ಪ್ರಶ್ನೆಗಳನ್ನು ಕೇಳಬೇಕು.

**ಪ್ರಶ್ನೆಗಳು ಈ ರೀತಿಯಲ್ಲೂ ಇರಬಹುದು**

- ನೀವು ಅನುಭವಿಸಿದ ಕಷ್ಟಗಳ ಬಗ್ಗೆ ಒಂದಿಷ್ಟು ಮಾಹಿತಿ ನೀಡುವಿರಾ?
- ಬದುಕಿನಲ್ಲಿ ಸಾಧಿಸಬೇಕು ಎಂಬ ಛಲ ಮೂಡಿದ್ದು ಹೇಗೆ ?
- ನಿಮ್ಮ ಬೆಂಬಲಕ್ಕಾಗಿ ನಿಂತವರು ಯಾರು?
- ಯಾರಿಂದ ನಿಮಗೆ ಸಹಾಯ , ಪ್ರೋತ್ಸಾಹ ಲಭಿಸಿತು.?
- ಸ್ವಾವಲಂಬಿಯಾಗಿ ಬದುಕಲು ನಿಮಗೆ ಪ್ರೇರಣೆ ನೀಡಿದ್ದು ಯಾರು?

ಈ ರೀತಿಯಲ್ಲಿ ಪ್ರಶ್ನೆಗಳನ್ನು ಕೇಳಿ ವಿವರಗಳನ್ನು ಪಡೆಯಬಹುದು. ವಿವರಗಳನ್ನು ಹಂತಹಂತವಾಗಿ ಕ್ರೋಡೀಕರಿಸಿ ಸಂದರ್ಶನ ವರದಿಯನ್ನು ಬರೆಯಬೇಕು. ಸಂದರ್ಶನ ವರದಿಯನ್ನು ಬರೆಯುವಾಗ ಈ ಕೆಳಗಿನ ಅಂಶಗಳನ್ನು ನೆನಪಿಟ್ಟುಕೊಳ್ಳಬೇಕು.

- ಯಾರನ್ನು ಸಂದರ್ಶನ ಮಾಡಿದ್ದೇವೆಯೋ ಅವರ ಕಿರು ಪರಿಚಯ.
- ಸಂದರ್ಶಕರ ಹೆಸರು
- ಮಾಹಿತಿಗಳ ಕ್ರಮೀಕರಣ
- ವರದಿ ತಯಾರಿ
- ಓದುಗರಿಗೆ ನೀಡುವ ಸಂದೇಶ

## ಸಂದರ್ಶನ ವರದಿಯ ಮಾದರಿ

ಭಾರತೀಯ ಶಿಕ್ಷಣ ತಜ್ಞೆ, ಲೇಖಕಿ,ಸಮಾಜ ಸೇವಕಿ ಸಮಾಜ ಸುಧಾರಕಿ ಇನ್ಫೋಸಿಸ್ ಫೌಂಡೇಶನ್ ನ ಮಾಜಿ ಅಧ್ಯಕ್ಷೆ, ಪದ್ಮಶ್ರೀ ಪುರಸ್ಕೃತ ಸುಧಾ ಮೂರ್ತಿ ಅವರೊಂದಿಗೆ ನಡೆಸಿದ ಸಂದರ್ಶನ.

ಸುಧಾಮೂರ್ತಿಯವರು ಆಗಸ್ಟ್ ೧೯ ೧೯೫೦ ರಂದು ಕರ್ನಾಟಕದ ಹಾವೇರಿಯ ಶಿಗ್ಗಾಂವ್ ನಲ್ಲಿ ಡಾ. ಆರ್ ಎಚ್ ಕುಲಕರ್ಣಿ ಮತ್ತು ವಿಮಲಾ ಕುಲಕರ್ಣಿ ದಂಪತಿಯ ಮಗಳಾಗಿ ಜನಿಸಿದರು. ಬಿ.ವಿ.ಬಿ. ಕಾಲೇಜು ಆಫ್ ಇಂಜಿನೀಯರಿಂಗ್ ಟೆಕ್ನಾಲಜಿಯಿಂದ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನೀಯರಿಂಗ್ ನಲ್ಲಿ ಪದವಿ ಪಡೆದಿದ್ದಾರೆ. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ನಿಂದ ಕಂಪ್ಯೂಟರ್ ನಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದರು.

ಶ್ರೇಷ್ಠ ವ್ಯಕ್ತಿತ್ವವನ್ನು ಹೊಂದಿದವರ ದಿನನಿತ್ಯದ ಚಟುವಟಿಕೆ ಎಲ್ಲರಿಗೂ ಅನುಕರಣೀಯ ವಾಗಿರುತ್ತದೆ. ಅದರಂತೆ ಸುಧಾಮೂರ್ತಿಯವರು ಪ್ರತಿದಿನ ಐದು ಗಂಟೆಗೆ ಎದ್ದು 40 ನಿಮಿಷಗಳವರೆಗೆ ಯೋಗ,ವ್ಯಾಯಾಮ ಮಾಡುತ್ತಾರೆ. ಲೇಖಕಿಯಾದ ಇವರು ಬರೆಯುವ ಕೆಲಸವಿದ್ದರೆ ಮುಂಜಾನೆ 4:00 ಗಂಟೆಗೆ ಏಳುತ್ತಾರೆ. ಅಜ್ಜ ಅಜ್ಜಿಯರೊಂದಿಗೆ ಕಳೆದ ತನ್ನ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುತ್ತಾ ಬದುಕಿಗೆ ಅವರೇ ಸ್ಫೂರ್ತಿ ಎನ್ನುತ್ತಾರೆ. ಮಾತನಾಡುತ್ತಿದ್ದಂತೆ ಸಂದರ್ಭೋಚಿತವಾಗಿ ಅದೆಷ್ಟೋ ವಚನಗಳು,ಶ್ಲೋಕಗಳು, ಕಾವ್ಯದ ಭಾಗಗಳು ತಮ್ಮ ಮಾತನ್ನು ಸಮರ್ಥಿಸುವುದಕ್ಕಾಗಿ ಇವರ ನಾಲಿಗೆಯಲ್ಲಿ ಹೊರಳಾಡುತ್ತಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯು ಒಂದೊಂದು ಪುಸ್ತಕ ಎಂಬ ಇವರ ಮಾತು ಇವರು ಸಮಾಜವನ್ನು ಹೇಗೆ ಅವಲೋಕಿಸುತ್ತಾರೆ ಎಂಬುದಕ್ಕೆ ಸಾಕ್ಷಿಯಾಗಿದೆ. ಹೆಣ್ಣು ಮಕ್ಕಳ ಬಗ್ಗೆ ಅತ್ಯಂತ ಗೌರವ ಹೆಮ್ಮೆಯಿಂದ ಮಾತನಾಡುವ ಸುಧಾಮೂರ್ತಿಯವರು ಹೆಣ್ಣುಮಗಳು ಭಾವನೆಗಳಿಂದಲೇ ಸಂಸಾರವನ್ನು ನಡೆಸಬಲ್ಲರು, ಭಾವನೆಗಳು ಇದ್ದಲ್ಲಿ ಸಂಸಾರ ಚೆನ್ನಾಗಿ ನಡೆಯುತ್ತದೆ ಎನ್ನುತ್ತಾರೆ. ಸಮಾಜ ಸುಧಾರಕಿಯಾಗಿ ಇವರ ಬದುಕಿನ ಸಾಧನೆಯ ಮೈಲಿಗಲ್ಲು ಎಂದರೆ 3000 ದೇವದಾಸಿಯರ ಜೀವನಕ್ಕೆ ಬೆಳಕಾದದ್ದು. ಇದರ ದಾಖಲೆಯೇ 3000 ಸ್ಟಿಚಸ್ (೩೦೦೦ ಹೊಲಿಗೆಗಳು) ಎಂಬ ಕೃತಿಯಾಗಿದೆ. (ದೇವದಾಸಿಯರ ಜೊತೆಗೆ ಇರುವಾಗ ಇದನ್ನು ಸಹಿಸದವರು ಚಪ್ಪಲಿ, ಟೊಮೆಟೋಗಳನ್ನು ಎಸೆದಿದ್ದರಂತೆ.) ಸುಧಾಮೂರ್ತಿಯವರು ಟಾಟಾ ಎಂಜಿನಿಯರಿಂಗ್ ಮತ್ತು ಲೋಕೋಮೋಟಿವ್

ಕಂಪನಿ ಅಧ್ಯಕ್ಷರಿಗೆ ಪತ್ರ ಬರೆದು ಲಿಂಗ ತಾರತಮ್ಯದ ಬಗ್ಗೆ ದೂರು ನೀಡಿದ ಪರಿಣಾಮ ಇಂದು ಹೆಚ್ಚಿನ ಕಂಪನಿಗಳು ಹೆಣ್ಣುಮಕ್ಕಳಿಗೆ ಉದ್ಯೋಗವ ನೀಡಿವೆ. ಅಗತ್ಯಕ್ಕಿಂತ ಹೆಚ್ಚಿನ ಸಂಪಾದನೆ ಸಮಾಜ ಸೇವೆಗೆ ಎಂದು ನಂಬಿರುವ ಇವರು ಇದುವರೆಗೂ ಕರ್ನಾಟಕದ 60000 ಶಾಲೆಗಳಿಗೆ ಗ್ರಂಥಾಲಯಗಳನ್ನು, 14000 ಶಾಲೆಗಳಿಗೆ ಶೌಚಾಲಯಗಳನ್ನು ಮತ್ತು ಪ್ರವಾಹ ಪೀಡಿತರಿಗೆ ೨೩೦೦ ಮನೆಗಳನ್ನು ನಿರ್ಮಿಸಿ ಕೊಟ್ಟಿದ್ದಾರೆ. ಯಾವ ವಾಹನದಲ್ಲಿ ಪ್ರಯಾಣಿಸುತ್ತಿದ್ದೇವೆ ಎಂಬುದಕ್ಕಿಂತ ನಾವು ಮಾಡುವ ಪ್ರಯಾಣ ಮುಖ್ಯ ಎಂದು ಮಾರ್ಮಿಕವಾಗಿ ನುಡಿದ ಸುಧಾ ಮೂರ್ತಿಯವರದು ಅತ್ಯಂತ ಸರಳವಾದ ವ್ಯಕ್ತಿತ್ವ. ಅವರ ಮುಖದ ಮಂದಹಾಸ, ಲವಲೇಶವೂ ಅಹಮಿಕೆ ಇಲ್ಲದ ಸ್ವಭಾವ, ಸ್ಪಷ್ಟ ನಿಲುವು, ಪರೋಪಕಾರ ಗುಣ ನಮಗೆಲ್ಲರಿಗೂ ಆದರ್ಶವಾದದ್ದು. ಇವರಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ಸೇವೆ ಲಭಿಸಲಿ ಎಂಬ ಸದಾಶಯ ನಮ್ಮದು.

## ಅಭಿನಂದನಾ ಪತ್ರ ಬರೆಯಿರಿ

ಸಮಾಜದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಗುರುತಿಸಿಕೊಂಡು ತಮ್ಮನ್ನು ಸಮಾಜಕ್ಕೆ ಅರ್ಪಿಸಿಕೊಂಡವರು ಹಲವು ಮಂದಿ ಅಂತವರು ಸಮಾಜದ ಗೌರವಕ್ಕೆ ಅರ್ಹರಾಗುತ್ತಾರೆ. ಹಲವಾರು ಪ್ರಶಸ್ತಿಗಳು ಅವರನ್ನು ಅರಸಿಕೊಂಡು ಬರುತ್ತವೆ. ಭಾರತ ದೇಶದ ಶ್ರೇಷ್ಠ ಪ್ರಶಸ್ತಿಗಳಾದ ಪದ್ಮಶ್ರೀ,ಪದ್ಮಭೂಷಣ ,ಪದ್ಮವಿಭೂಷಣಗಳು ಅವರಿಗೆ ದೊರೆಯುತ್ತವೆ. ಅವರನ್ನು ಅಭಿನಂದಿಸಿ ಅವರಿಗೆ ಒಂದು ಅಭಿನಂದನಾ ಪತ್ರವನ್ನು ತಯಾರಿಸುವ. ಮೊದಲಿಗೆ ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಅವರಿಗೆ ಬೇಕಾದ ಮಾಹಿತಿಗಳನ್ನು ನೀಡಬೇಕು. ಮಕ್ಕಳು ಗುಂಪಿನಲ್ಲಿ ಅಭಿನಂದನಾ ಪತ್ರವನ್ನು ಬರೆದು ಮಂಡಿಸಲಿ. ನಂತರ ಅಧ್ಯಾಪಕರು ಒಂದು ಮಾದರಿ ಅಭಿನಂದನಾ ಪತ್ರವನ್ನು ನೀಡಬೇಕು.

## ಅಭಿನಂದನಾ ಪತ್ರ

ಪದ್ಮಸುಬ್ರಹ್ಮಣ್ಯಂ ಒಬ್ಬ ಭಾರತೀಯ ಶಾಸ್ತ್ರೀಯ ಭರತನಾಟ್ಯಂ ನೃತ್ಯಗಾರ್ತಿ. ಇವರು ಸಂಶೋಧನಾ ವಿದ್ವಾಂಸರು, ನೃತ್ಯ ಸಂಯೋಜಕಿ, ಶಿಕ್ಷಕಿ ಮತ್ತು ಲೇಖಕಿಯು ಹೌದು. ಭರತನಾಟ್ಯಂ ನೃತ್ಯ ಪ್ರಕಾರದ ಸಂಸ್ಥಾಪಕಿ ಎಂದು ಪ್ರಸಿದ್ಧರಾಗಿದ್ದಾರೆ. 1981 ರಲ್ಲಿ ಪದ್ಮಶ್ರೀ, ೨೦೦೩ ರಲ್ಲಿ ಪದ್ಮಭೂಷಣ,2024ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ಪಡೆದಿದ್ದಾರೆ. ಚಲನಚಿತ್ರ ನಿರ್ದೇಶಕ ಕೃಷ್ಣಸ್ವಾಮಿ ಸುಬ್ರಮಣ್ಯಂ ಮತ್ತು ಮೀನಾಕ್ಷಿ ದಂಪತಿಗಳಿಗೆ ಫೆಬ್ರವರಿ ೪,೧೯೪೩ ರಂದು ಪದ್ಮ ಸುಬ್ರಮಣ್ಯಂ ಮಗಳಾಗಿ ಜನಿಸಿದರು. ಕೇವಲ 14ನೇ ವಯಸ್ಸಿನಲ್ಲಿ ನೃತ್ಯವನ್ನು ಕಲಿಸಲು ಪ್ರಾರಂಭಿಸಿದರು. ಸಂಗೀತ ಅಕಾಡೆಮಿ, ಕಾಳಿದಾಸ ಸಮ್ಮಾನ್, ಕೇರಳ ಸರಕಾರದ ನಿಶಾಗಂದಿ, ಸೋವಿಯತ್ ಒಕ್ಕೂಟ ನೆಹರು ಪ್ರಶಸ್ತಿ ,ಜಪಾನಿನಿಂದ ಪುಕುವೊಕಾ ಏಷ್ಯನ್ ಸಂಸ್ಕೃತಿ ಪ್ರಶಸ್ತಿಯನ್ನು ಪಡೆದಿದ್ದಾರೆ.

ಪದ್ಮ ಸುಬ್ರಮಣ್ಯಂ ಅವರಿಗೆ ಅಭಿನಂದನಾ ಪತ್ರ ಬರೆಯಲು ಈ ರೀತಿಯ ಮಾಹಿತಿಯನ್ನು ಮಕ್ಕಳಿಗೆ ನೀಡಬಹುದು. ಈ ರೀತಿಯಲ್ಲಿ ಸಂಗ್ರಹಿಸಿದ ಮಾಹಿತಿಗಳ ಬಗ್ಗೆ ಮಕ್ಕಳು ತರಗತಿಯಲ್ಲಿ ಚರ್ಚಿಸಲಿ.

- ಪದ್ಮ ಸುಬ್ರಹ್ಮಣ್ಯಂ ಅವರ ಸಾಧನೆಗಳು.
- ಇವರಲ್ಲಿ ಕಂಡುಕೊಂಡ ಉತ್ತಮ ಗುಣಗಳು
- ಇವರು ಬದುಕು ವಿದ್ಯಾರ್ಥಿಗಳಿಗೆ ಹೇಗೆ ಪ್ರೇರಣೆ

**ಅಭಿನಂದನಾ ಪತ್ರ ಹೇಗಿರಬೇಕು?**

- ಪತ್ರದ ಚೌಕಟ್ಟು, ಸ್ಥಳ, ದಿನಾಂಕ, ಸಂಯೋಜನೆ, ವಿಷಯ , ವಿವರಣೆ, ಸಹಿ
- ಆಕರ್ಷಕವಾದ ಯೋಗ್ಯ ಪದಗಳು, ವಿಶೇಷಣ, ನುಡಿಗಟ್ಟುಗಳು
- ಆಶಯ ಸ್ಪಷ್ಟವಾಗಿಯೂ ಕ್ರಮಬದ್ಧವಾಗಿ ಇರಬೇಕು.

ಗೌರವಾನ್ವಿತ ಪದ್ಮಾ ಸುಬ್ರಹ್ಮಣ್ಯಂ,

ವಂದನೆಗಳು, ತಾವು ಈ ಬಾರಿಯ ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿರುವ ವಿಷಯ ತಿಳಿದು ಬಹಳ ಸಂತೋಷಗೊಂಡಿರುವೆನು. ನಿಮಗೆ ಅಭಿನಂದನೆಗಳು. ನೃತ್ಯ ಕ್ಷೇತ್ರದಲ್ಲಿನ ತಮ್ಮ ಸಾಧನೆಗಾಗಿ ನೀವು ಪದ್ಮಶ್ರೀ ಪದ್ಮಭೂಷಣ, ಕಾಳಿದಾಸ ಸಮ್ಮಾನ್, ನಿಶಾಗಂದಿ,ಸೋವಿಯತ್ ಒಕ್ಕೂಟ ನೆಹರು ಪ್ರಶಸ್ತಿಗಳನ್ನುಮುಡಿಗೇರಿಸಿಕೊಂಡಿರುವಿರಿ.ಭರತನಾಟ್ಯದಲ್ಲಿಕೇವಲನೃತ್ಯಗಾರ್ತಿಆಗಿರದೆಸಂಶೋಧನಾ ವಿದ್ವಾಂಸರಾಗಿ, ಶಿಕ್ಷಕಿಯಾಗಿ ,ಸಂಶೋಧನ ಲೇಖಕಿಯಾಗಿ, ದೇಶ ವಿದೇಶದ ಕಲಾವಿದೆಯಾಗಿ ಭಾರತದ ಸಂಸ್ಕೃತಿ ಇತಿಹಾಸದ ಅಧ್ಯಯನಕ್ಕೆ ತಮ್ಮನ್ನು ತಾವು ಸಮರ್ಪಣೆ ಮಾಡಿಕೊಂಡಿರುವಿರಿ. ಕೇವಲ 14ನೇ ವಯಸ್ಸಿನಲ್ಲಿ ನೃತ್ಯ ಗುರುವಾಗಿ ತಮ್ಮ ಪಯಣವನ್ನು ಆರಂಭಿಸಿದ್ದು, ಭರತನಾಟ್ಯದ ಕ್ಷೇತ್ರದಲ್ಲಿರುವ ನಿಮ್ಮ ಅಪಾರ ಪಾಂಡಿತ್ಯ, ಅಭಿರುಚಿ, ಅನುಭವಗಳನ್ನು ದರ್ಶನ ಮಾಡಿಸುತ್ತದೆ.ಭರತ ನೃತ್ಯಂ ,ನೃತ್ಯ ಪ್ರಕಾರದ ಸಂಸ್ಥಾಪಕಿಯಾಗಿ ನಿಮ್ಮನ್ನು ಗುರುತಿಸಿಕೊಂಡಿದ್ದೀರಿ. “ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ” ಎಂಬಂತೆ ನೀವು ತೋರಿಸಿಕೊಟ್ಟಿದ್ದೀರಿ ನಿಮ್ಮ ಈ ರೀತಿಯ ಸಾಧನೆಗೆ ಪ್ರೋತ್ಸಾಹಿಸಿದ ಮಾರ್ಗದರ್ಶಕರಿಗೆ, ಮಾರ್ಗದರ್ಶನ ನೀಡಿದ ಹೆತ್ತವರಿಗೆ, ಗುರುಗಳಿಗೆ, ನೀವು ಗೌರವ ಕಿರೀಟವನ್ನು

ತೊಡಿಸಿದ್ದೀರಿ .ಇನ್ನು ಮುಂದೆಯೂ ನಿಮ್ಮ ನೃತ್ಯ ಪಯಣ ಮುಂದುವರಿಯಲಿ. ಕಲಾಮಾತೆ ನಿಮ್ಮನ್ನು ಹರಸಲಿ, ನಿಮ್ಮ ಸಾಧನೆಗಳು ಇತರ ಸಾಧಕರಿಗೂ ಪ್ರೇರಣೆಯಾಗಲಿ ಎಂಬ ಆಶಯ ನನ್ನದು.

l ವಂದನೆಗಳೊಂದಿಗೆ

ಇತಿ

ಅಕ್ಷತಾ

7ನೇ ತರಗತಿ

## ವಿಚಾರಗೋಷ್ಠಿ ಪ್ರಬಂಧ ಬರೆಯಿರಿ

ವಿದ್ಯಾರ್ಥಿಗಳಲ್ಲಿ ಗಟ್ಟಿಗೊಳ್ಳಬೇಕಾದ ಪ್ರಧಾನ ವ್ಯವಹಾರ ರೂಪಗಳಲ್ಲಿ ಪ್ರಬಂಧವು ಒಂದು. ಈ ಚಟುವಟಿಕೆಯನ್ನು ಮಾಡಲು ಮುಂದುವರಿದ ಪಠ್ಯದ ಎರಡನೇ ಘಟಕದ ಸಾವಿತ್ರಿಬಾಯಿ ಪುಲೆ ಪಾಠದಲ್ಲಿ ವಿಚಾರಗೋಷ್ಠಿ ಪ್ರಬಂಧದ ಬಗ್ಗೆ ಉಲ್ಲೇಖಿಸಿರುವ ವಿಚಾರಗಳನ್ನು ಬಳಸಿಕೊಳ್ಳುವುದು. ವಿದ್ಯಾರ್ಥಿಗಳಿಗೆ ವಿಷಯ ಸಂಗ್ರಹಕ್ಕೆ ಸಹಾಯಕವಾಗುವ ಪತ್ರಿಕೆಗಳನ್ನು ಪುಸ್ತಕಗಳನ್ನು ಒದಗಿಸುವುದು. ಅನಂತರ ಓದಿದ ವಿಚಾರಗಳ ಬಗ್ಗೆ ಚರ್ಚೆ ನಡೆಯಲಿ.

**ಚರ್ಚೆ ನಡೆಸಲು ಸಹಾಯಕವಾಗುವ ಪ್ರಶ್ನೆಗಳು**

- ಸಮಾಜದಲ್ಲಿ ಮಹಿಳೆಯರು ಎದುರಿಸುವ ಸಮಸ್ಯೆಗಳೇನು?
- ಸಮಾಜದಲ್ಲಿ ಮಹಿಳೆಯರು ಮಾಡಿದ ಸಾಧನೆಗಳೇನು?
- ಸಾಧನೆ ಮಾಡಿದ ಮಹಿಳೆಯರು ಯಾರೆಲ್ಲಾ ?
- ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಚಟುವಟಿಕೆಗಳನ್ನು ಮಾಡಿದ ಮಹಿಳೆಯರು ಮತ್ತು ಅವರ ಹೋರಾಟಗಳು ಯಾವುವು?

ಚರ್ಚೆಯಲ್ಲಿ ದೊರೆತ ಮಾಹಿತಿಗಳನ್ನು ಬಳಸಿಕೊಂಡು ಮಕ್ಕಳು ಗುಂಪಿನಲ್ಲಿ ಚರ್ಚಿಸಿ ಉತ್ತಮಪಡಿಸ. ಅಧ್ಯಾಪಕರು ಮಾದರಿ ಪ್ರಬಂಧ ಒಂದನ್ನು ನೀಡುವುದು.

# ಶಿಕ್ಷಣ ಸಂಘಟನೆ ಹೋರಾಟ

ದೇಶದಲ್ಲಿ ಬೇರೂರಿರುವ ಅಸ್ಪೃಶ್ಯತೆ,ಅಸಮಾನತೆ,ಮೌಢ್ಯಗಳ ವಿರುದ್ಧ ಹೋರಾಡಬೇಕಾದರೆ ಮೊದಲು ನಾವು ಶಿಕ್ಷಿತರಾಗಬೇಕು. ನಂತರ ಸಂಘಟಿತರಾಗಿ ಹೋರಾಟ ನಡೆಸಬೇಕು ಎಂಬುದು ಡಾಕ್ಟರ್ ಬಿ.ಆರ್ ಅಂಬೇಡ್ಕರ್ ರವರ ವಿಚಾರಧಾರೆಯಾಗಿದೆ. ಶಿಕ್ಷಣವು ಜಗತ್ತನ್ನು ಬದಲಾಯಿಸುವ ಸಾಧನವಾಗಿದೆ. ನಮ್ಮ ಮೂಲಭೂತ ಅಗತ್ಯಗಳಲ್ಲಿ ಶಿಕ್ಷಣವು ಒಂದು.

ಇನ್ನೂ ಸ್ವಾತಂತ್ರ್ಯ ಚಳುವಳಿ ರೂಪುಗೊಳ್ಳದಿದ್ದ ಕಾಲದಲ್ಲಿ ಭಾರತೀಯ ಸಮಾಜ ಜಾತಿ ವ್ಯವಸ್ಥೆಯ ತಳಹದಿಯಲ್ಲಿ ನಿಂತಿದ್ದ ಕಾಲ. ಹೆಣ್ಣು ಮಕ್ಕಳು ಶಿಕ್ಷಣದಿಂದ ಪೂರ್ಣವಾಗಿ ವಂಚಿತರಾದ ಸಂದರ್ಭ ಅದಾಗಿತ್ತು. ಇಂತಹ ಸನ್ನಿವೇಶದಲ್ಲಿ ಜನಿಸಿದ ಸಾವಿತ್ರಿಬಾಯಿಯವರು ಶಿಕ್ಷಣವನ್ನೇ ತಮ್ಮ ಆಯುಧವನ್ನಾಗಿಸಿಕೊಂಡರು. ಪತಿಯಾದ ಜ್ಯೋತಿಬಾ ಫುಲೆಯವರ ಪೂರ್ಣ ಸಹಕಾರದಿಂದ ಶಿಕ್ಷಣವನ್ನು ಪಡೆದ ಸಾವಿತ್ರಿಬಾಯಿಯವರು ಸ್ವತಹ ಶಿಕ್ಷಕಿಯಾಗಿ ನೂರಾರು ಹೆಣ್ಣು ಮಕ್ಕಳ ಮನೆ-ಮನದಲ್ಲಿ ಅಕ್ಷರ ದೀಪವನ್ನು ಬೆಳಗಿದರು. ಈ ಮೂಲಕ ಅವರಲ್ಲಿ ವೈಚಾರಿಕತೆಯನ್ನು ಮೂಡಿಸಿದರು. ಶೋಷಣೆಯನ್ನು ಎದುರಿಸಿ ನಿಂತು ಸ್ವಾವಲಂಬಿಗಳಾಗುವ ಮನೋಭಾವವನ್ನು ತುಂಬಿಸಿದರು. ಹೀಗೆ ಸಾವಿತ್ರಿಬಾಯಿ ಪುಲೆಯವರು ಶಿಕ್ಷಣ ಸಂಘಟನೆ ಹೋರಾಟದ ಮೂಲಕ ವಿಮೋಚನೆಯ ದಾರಿಯನ್ನು ಕಂಡುಕೊಂಡರು. ಸಂಘಟಿತ ಹೋರಾಟದ ಮೂಲಕ ಸಮಾಜದಲ್ಲಿ ಸಾಮರಸ್ಯವನ್ನು ಉಂಟುಮಾಡಲು ಶಿಕ್ಷಣದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಬೇಕು. ಹೆಣ್ಣುಮಕ್ಕಳು ಶಿಕ್ಷಿತರಾದರೆ ಮಾತ್ರ ಸಮಾಜದಲ್ಲಿ ಮೂಲಭೂತ ಬದಲಾವಣೆಯನ್ನು ತರಬಹುದು ಎನ್ನುವುದಕ್ಕೆ ಸಾವಿತ್ರಿಬಾಯಿ ಪುಲೆಯವರ ಬದುಕು ಸಾಕ್ಷಿಯಾಗಿದೆ.

## ಆತ್ಮಕಥೆಯಾಗಿ ಬರೆಯಿರಿ

ಮಕ್ಕಳು ಪಾಠ ಭಾಗದಲ್ಲಿ ನೀಡಿರುವ ಕಮಲಾ ದೇವಿ ಚಟ್ಟೋಪಾಧ್ಯಾಯ ರ ಜೀವನ ಚರಿತ್ರೆಯ ಭಾಗವನ್ನು ಓದಲಿ. ಹಿಂದಿನ ತರಗತಿಗಳಲ್ಲಿ ಗಳಿಸಿದ ಅನುಭವದ ಆಧಾರದಲ್ಲಿ ಈ ಭಾಗವನ್ನು ಆತ್ಮಕತೆಯ ರೂಪದಲ್ಲಿ ವೈಯಕ್ತಿಕವಾಗಿ ಬರೆಯಲಿ. ಗುಂಪಿನಲ್ಲಿ ಚರ್ಚಿಸಿ ಉತ್ತಮ ಪಡಿಸಲಿ. ಅಗತ್ಯವಿರುವಲ್ಲಿ ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುವುದು.

# ಕಮಲಾದೇವಿ ಚಟ್ಟೋಪಾಧ್ಯಾಯ

ನಾನು 1903ರಲ್ಲಿ ಮಂಗಳೂರಿನಲ್ಲಿ ಜನಿಸಿದೆನು. ನನ್ನ ತಂದೆ ಅನಂತಯ್ಯ ಧಾರೇಶ್ವರ. ತಾಯಿ ಗಿರಿಜಾಬಾಯಿ. 14ನೇ ವಯಸ್ಸಿನಲ್ಲಿ ನನಗೆ ನನ್ನ ಹೆತ್ತವರು ವಿವಾಹವನ್ನು ಮಾಡಿದರು. ಮದುವೆಯಾದ ಒಂದೇ ವರುಷಕ್ಕೆ ಪತಿಯನ್ನು ಕಳೆದುಕೊಂಡೆನು. ಮುಂದೆ ತಾಯಿಯ ಸಹಕಾರದಿಂದ ಮದ್ರಾಸಿನಲ್ಲಿ ಶಿಕ್ಷಣ ಮುಂದುವರಿಸಿ ಸರೋಜಿನಿ ನಾಯ್ಡು ಅವರ ಸಮೀಪದ ಸಂಬಂಧಿ ಹರೇಂದ್ರನಾಥ್ ಚಟ್ಟೋಪಾಧ್ಯಾಯ ಅವರನ್ನು ವಿವಾಹವಾಗಿ ಕಮಲಾದೇವಿ ಚಟ್ಟೋಪಾಧ್ಯಾಯಳಾದೆನು. ಮಹಾತ್ಮ ಗಾಂಧೀಜಿಯವರ ಜೊತೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ನಾಲ್ಕು ಬಾರಿ ಜೈಲುವಾಸವನ್ನು ಅನುಭವಿಸಿದೆನು. ಸಮಾಜ ಸೇವಕಿಯಾಗಿಯೂ ದುಡಿದು ಜನರ ಸಂಕಷ್ಟಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಅವಿಶ್ರಾಂತವಾಗಿ ದುಡಿದೆನು. ನಾನು ದೇಶದ ಅತ್ಯುನ್ನತ ಪ್ರಶಸ್ತಿಗಳಾದ ಪದ್ಮವಿಭೂಷಣ, ಪದ್ಮಭೂಷಣ ,ಮ್ಯಾಗ್ಸೆಸೆ ಮೊದಲಾದ ಪ್ರಶಸ್ತಿಗಳನ್ನು ಪಡೆದಿದ್ದೇನೆ.

## ಘಟಕ – 3

# ಪ್ರಕೃತಿ ಪರಿಸರ

ನಮ್ಮ ಪ್ರಕೃತಿಯು ಹಲವು ಜೀವಿಗಳ ವಾಸ ಕೇಂದ್ರವಾಗಿದೆ. ಇಲ್ಲಿ ಜೈವಿಕ ಮತ್ತು ಅಜೈವಿಕ ಘಟಕ ಎರಡೂ ಸೇರಿಕೊಂಡಿವೆ. ಆಹಾರ ಶೃಂಖಲೆ ಎಂಬ ನೈಸರ್ಗಿಕ ವ್ಯವಸ್ಥೆಯ ಅಡಿಯಲ್ಲಿ ಜೀವ ಜಾಲಗಳು ಇಲ್ಲಿ ನೆಲೆಗೊಂಡಿವೆ. ಈ ನೈಸರ್ಗಿಕ ವ್ಯವಸ್ಥೆಯು ಜೀವ ಜಾಲಗಳ ವಿತರಣೆಯ ಪ್ರಮಾಣದಲ್ಲಿ ಏರುಪೇರಾಗದಂತೆ ಪರಿಸರವನ್ನು ಒಂದು ರೀತಿಯ ಸಮತೋಲನದಲ್ಲಿ ಇರಿಸಿಕೊಂಡಿದೆ. ಆದರೆ ಪರಿಸರದ ಮೇಲೆ ಮಾನವನ ಅತಿಕ್ರಮಣ ಇದೆಲ್ಲವನ್ನು ಹಾಳುಗೆಡಹಿತು. ಗೊತ್ತು ಗುರಿ ಇಲ್ಲದ ಮಾನವನ ಅವಿವೇಕದ ವರ್ತನೆ ಸಕಲ ಜೀವ ಜಾಲಗಳಿಗೂ ಇಂದು ಕಂಟಕವನ್ನು ಉಂಟು ಮಾಡಿದೆ ಎಂದರೆ ತಪ್ಪಾಗಲಾರದು.

ಜೀವನವನ್ನು ಸರಳಗೊಳಿಸುವ ಸಲಕರಣೆಗಳ ಅನ್ವೇಷಣೆಯತ್ತ ಸಾಗಿದ ಮಾನವನ ಆವಿಷ್ಕಾರಗಳು ಅವನ ಬದುಕನ್ನು ಸುಗಮಗೊಳಿಸಿತು. ಆದರೆ ಈ ಆವಿಷ್ಕಾರಗಳು ಪರಿಸರದ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡಿತು. ನಗರೀಕರಣ ಕೈಗಾರಿಕರಣ ಯಂತ್ರ ತಂತ್ರಗಳ ಅನುಸರಣೆ ಪರಿಸರದ ಸಮತೋಲನವನ್ನು ಕೆಡಿಸಿಬಿಟ್ಟಿತು. ಮಾನವನು ತನ್ನ ವಾಸಸ್ಥಳಕ್ಕಾಗಿ ಕಾಡನ್ನು ಬಳಸಿಕೊಂಡಾಗ ಜೀವಿಗಳ ಆವಾಸ ಕೇಂದ್ರವು ನಾಶವಾಗಿ ಅವುಗಳ ಸಂತತಿ ಕಣ್ಮರೆಯಾಗತೊಡಗಿತು. ಕಾಡು ಇಲ್ಲದೆ ಮಳೆ ಕಡಿಮೆಯಾಗಿ ತೀವ್ರವಾದ ಬರಗಾಲ ಆವರಿಸಿ ಬಿಟ್ಟಿತು. ಕುಡಿಯುವ ನೀರಿಗಾಗಿ ಪರದಾಡಬೇಕಾಗಿ ಬಂತು. ಇದೆಲ್ಲದರ ಹೊರತಾಗಿ ಪ್ಲಾಸ್ಟಿಕ್, ಕೀಟನಾಶಗಳಂತಹ ವಿಷಕಾರಿ ವಸ್ತುಗಳು ಪರಿಸರದಲ್ಲಿ ದೀರ್ಘಕಾಲ ಉಳಿದು ವಾತಾವರಣವನ್ನು ವಿಷಯುಕ್ತವಾಗುವಂತೆ ಮಾಡಿತು. ಇಂತಹ ವಿನಾಶಕಾರಿ ಬೆಳವಣಿಗೆಗಳ ಕುರಿತು ಅರಿವನ್ನು ಮೂಡಿಸಿ ಮಕ್ಕಳಲ್ಲಿ ಪ್ರಕೃತಿಯನ್ನು ಸಂರಕ್ಷಿಸುವ ಮನೋಭಾವವನ್ನು ಬೆಳೆಸುವಲ್ಲಿ ಶಿಕ್ಷಣದ ಆದ್ಯತೆ ಇರಬೇಕು.

ಪ್ರಕೃತಿಯ ಮೇಲೆ ಆಗುವ ಮಾನವನ ದೌರ್ಜನ್ಯಗಳ ಕುರಿತು ಅರಿವನ್ನು ಮೂಡಿಸಿ ಮಕ್ಕಳನ್ನು ಪರಿಸರ ಸಂರಕ್ಷಣೆಯ ಕಾಳಜಿಯತ್ತ ಕೊಂಡೊಯ್ಯುವಲ್ಲಿ ಸಹಾಯಕವಾಗುವಂತೆ ಈ ಘಟಕವನ್ನು ರೂಪಿಸಲಾಗಿದೆ. ಪ್ರಕೃತಿಯ ಮಹತ್ವವನ್ನು ಅರಿತು ಅದರ ಸಂರಕ್ಷಣೆಗೆ ಬದ್ಧವಾಗಿಸುವಂತೆ ಮಕ್ಕಳ ಮನೋಭಾವವನ್ನು ಸಿದ್ಧಗೊಳಿಸುವ ಉದ್ದೇಶದೊಂದಿಗೆ ಇಲ್ಲಿ ಪಾಠಗಳನ್ನು ಜೋಡಿಸಲಾಗಿದೆ.

'ಊರು ಬರಿದಾಯಿತು'ಎಂಬ ಪಾಠ ಭಾಗವು ಪ್ಲಾಸ್ಟಿಕ್ ಚೀಲಗಳ ಪ್ರಭಾವದಿಂದ ಪರಂಪರಾಗತ ಕಸಬು ಮೂಲೆಗುಂಪಾಗಿ ತಮ್ಮ ಹೊಟ್ಟೆಪಾಡಿಗಾಗಿ ಊರನ್ನೇ ಬಿಟ್ಟ ಜನರ ಕಥೆಯನ್ನು ಹೇಳುತ್ತದೆ. ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮವನ್ನು ಈ ಪಾಠ ತಿಳಿಸುತ್ತದೆ.

ಈ ಘಟಕದ ಎರಡನೇ ಪಾಠವಾಗಿ 'ಕಾರ್ಗಾಲ ವೈಭವ' ಎಂಬ ಪದ್ಯವನ್ನು ಕೊಡಲಾಗಿದೆ. ಕನ್ನಡ ನಾಡಿನ ಕರಾವಳಿ ಭಾಗದಲ್ಲಿ ಸುರಿವ ಮಳೆಯ ಅಬ್ಬರದ ವರ್ಣನೆ ಈ ಕವಿತೆಯಲ್ಲಿದೆ. ಮಳೆ ಪ್ರಕೃತಿಯ ರಮಣೀಯ ಅಂಶಗಳಲ್ಲಿ ಒಂದು. ಅದನ್ನು ಆಸ್ವಾದಿಸುವ ಮನೋಭಾವ ನಮ್ಮಲ್ಲಿ ಮೂಡಿ ಬರಬೇಕು. ಅಂತಹ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

'ಕಾಡು ಕಡಿದರೆ...' ಎಂಬ ಪಾಠ ಭಾಗವು ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಗೂ ಮನುಷ್ಯರಂತೆ ಬದುಕಿ ಬಾಳುವ ಹಕ್ಕು ಇದೆ ಎಂಬುದನ್ನು ಸಾರುತ್ತದೆ. ಬದುಕಬೇಕು, ಬದುಕಲು ಬಿಡಬೇಕು ಎಂಬ ಸಂದೇಶವನ್ನು ಸಾರುವುದರ ಜೊತೆಗೆ ಪ್ರಕೃತಿ ಸಂರಕ್ಷಣೆಯ ಮನೋಭಾವವನ್ನು ಮೂಡಿಸುವಲ್ಲಿ ಈ ಪಾಠದಿಂದ ಸಫಲವಾಗಬೇಕು.

ಐಸಿಟಿಯ ಸಾನಿಧ್ಯದಲ್ಲಿ ಪಾಠ ಭಾಗದ ಆಶಯಗಳನ್ನು ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಮುಟ್ಟಿಸುವಲ್ಲಿ ಮತ್ತು ಕಲಿಕಾ ಉದ್ದೇಶಗಳನ್ನು ಈಡೇರಿಸುವಲ್ಲಿ ಅಧ್ಯಾಪಕರ ಪರಿಶ್ರಮ ಇಲ್ಲಿ ಅತ್ಯಗತ್ಯವಾಗಿದೆ.

## ಕಲಿಕಾ ಉದ್ದೇಶಗಳು

- ಆಧುನಿಕತೆಯ ಬೇಕುಗಳನ್ನು ಈಡೇರಿಸಿಕೊಳ್ಳಲು ಮಾನವನು ಪ್ರಕೃತಿಯ ಶೋಷನೆ ಮಾಡುತ್ತಿರುವನು ಎಂದು ತಿಳಿದುಕೊಳ್ಳುವುದು.
- ಪ್ಲಾಸ್ಟಿಕ್ ವಸ್ತುಗಳ ಬಳಕೆ ಹೆಚ್ಚಾದಾಗ ಪರಂಪರಾಗತ ಕಸಬುಗಳು ಮೂಲೆಗುಂಪಾದವು ಎಂಬ ಅರಿವನ್ನು ಪಡೆದುಕೊಳ್ಳುವುದು.
- ಮಳೆಗಾಲದಲ್ಲಿ ಧಾರಾಕಾರವಾಗಿ ಸುರಿಯುವ ವರ್ಷಧಾರೆ ಮತ್ತು ಆ ಸಮಯದ ಪ್ರಕೃತಿಯ ರಮಣೀಯ ದೃಶ್ಯ ಮನಸ್ಸಿಗೆ ಮುದವನ್ನು ನೀಡುತ್ತದೆ ಎಂಬುದನ್ನು ಅರಿತುಕೊಳ್ಳುವುದು.
- ಪ್ರಕೃತಿಯ ಸೌಂದರ್ಯ, ವರ್ಷಕಾಲದ ವೈಭವ ಮೊದಲಾದವುಗಳನ್ನು ವರ್ಣಿಸಿರುವ ಸಾಕಷ್ಟು ರಚನೆಗಳು ಕನ್ನಡ ಸಾಹಿತ್ಯದಲ್ಲಿವೆ ಎಂಬ ಅರಿವನ್ನು ಪಡೆಯುವುದು.
- ಪ್ರಕೃತಿಯಲ್ಲಿ ಎಲ್ಲಾ ಜೀವ ಜಾಲಗಳಿಗೂ ಬದುಕುವ ಹಕ್ಕು ಇದೆ ಎಂಬುದನ್ನು ತಿಳಿದುಕೊಳ್ಳುವುದು.
- ವಿವಿಧ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಸೃಜನಶೀಲ ರಚನೆಗಳಲ್ಲಿ ತೊಡಗಿಸಿಕೊಳ್ಳುವುದು.

# ಯುನಿಟ್ ಗ್ರಿಡ್ ಘಟಕ – ಪ್ರಕೃತಿ -ಪರಿಸರ

**ಆಶಯ : ಪರಿಸರ**

**ತರಗತಿ : 7 ಮುಂದುವರಿದ ಪಠ್ಯ**

**ಸಮಯ :**

| ಉಪ ಆಶಯಗಳು | ತಿಳುವಳಿಕೆಗಳು | ಸಾಹಿತ್ಯ ಪ್ರಕಾರ | ಭಾಷಾ ಸಾಮರ್ಥ್ಯಗಳು | ಮೌಲ್ಯ ಮನೋಭಾವಗಳು | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು | ಕಲಿಕಾ ಉಪಕರಣಗಳು | ಮೌಲ್ಯ ಮಾಪನ |
|---|---|---|---|---|---|---|---|---|
| ಪ್ಲಾಸ್ಟಿಕ್ ಬಳಕೆಯ ನಿಯಂತ್ರಣ | ಪರಿಸರ ವ್ಯವಸ್ಥೆಯ ಮೇಲೆ ಮಾನವನ ಹಸ್ತಕ್ಷೇಪ ಪರಿಸರ ಅಸಮತೋಲನಕ್ಕೆ ಕಾರಣವಾಗಿದೆ ಎಂದು ತಿಳಿದುಕೊಳ್ಳುವುದು.<br><br>ಪ್ಲಾಸ್ಟಿಕ್ ಗಳ ಅಪರಿಮಿತ ಬಳಕೆಯ ಪರಿಣಾಮವಾಗಿ ಪರಂಪರಾಗತ ಕಸಬುಗಳು ಮತ್ತು ಗುಡಿ ಕೈಗಾರಿಕೆಗಳು ಅವನತಿಯತ್ತ ಸಾಗಿದವು ಎಂಬುದನ್ನು ತಿಳಿದುಕೊಳ್ಳುವುದು. | ಕಾದಂಬರಿಯ ಭಾಗ (ಊರು ಬರಿದಾಯ್ತು) | ಪ್ಲಾಸ್ಟಿಕ್ ಗಳ ಬಳಕೆಯಿಂದ ಪರಂಪರಾಗತ ಸ್ಥಳೀಯ ಕಸಬುಗಳು ಹೇಗೆ ವಿನಾಶದ ಅಂಚಿಗೆ ತಲುಪಿದವು ಎಂಬುದನ್ನು ಓದಿ ತಿಳಿದು ತಮ್ಮ ಅನಿಸಿಕೆಗಳನ್ನು ಭಾಷಾವ್ಯವಹಾರ ರೂಪಗಳಲ್ಲಿ ಪ್ರಕಟಿಸುವುದು.<br>ಪ್ಲಾಸ್ಟಿಕ್ ವಸ್ತುಗಳ ಉಪಯೋಗದಿಂದ ಪರಿಸರ ಹಾಗೂ ಬದುಕಿನ ಮೇಲೆ ಬೀರುವ ದುಷ್ಪರಿಣಾಮಗಳ ಕುರಿತು ಜಾಗೃತಿಯನ್ನು ಮೂಡಿಸುವ ಸೃಜನಶೀಲ ರಚನೆಗಳಲ್ಲಿ ತೊಡಗಿಸಿಕೊಳ್ಳುವುದು. | ಪರಂಪರಾಗತ ಕಸುಬುಗಳನ್ನು ಉಳಿಸಿ ಬೆಳೆಸಿಕೊಂಡು ಬರುವ ಮನೋಭಾವವನ್ನು ರೂಪಿಸಿಕೊಳ್ಳುವರು.<br>ದೈನಂದಿನ ಜೀವನದಲ್ಲಿ ದೇಸೀಯು ಉತ್ಪನ್ನಗಳನ್ನು ಹೆಚ್ಚಾಗಿ ಬಳಸುವ ಮನೋಭಾವವನ್ನು ಹೊಂದುವರು.<br><br>ಪ್ಲಾಸ್ಟಿಕ್ ಬಳಕೆಯ ವಿರುದ್ಧವಾದ ಮನೋಭಾವವನ್ನು ಪ್ರಕಟಿಸುವರು. | ವಿರುದ್ಧಾರ್ಥಕ ಪದ<br><br>ಸಂಧಿಗಳು | ಟಿಪ್ಪಣಿ ಬರಹ<br><br>ಕರಪತ್ರ ತಯಾರಿ<br><br>ಲೇಖನ ತಯಾರಿ | ಐಸಿಟಿಯ ಬಳಕೆ<br><br>ಕಾದಂಬರಿಯ ಭಾಗ<br><br>ಪರಿಸರ ಸಂರಕ್ಷಣೆ ಕುರಿತಾದ ಲೇಖನಗಳು | ಪ್ಲಾಸ್ಟಿಕ್ ಬಳಕೆಯಿಂದ ಆಗುವ ದುಷ್ಪರಿಣಾಮಗಳ ಕುರಿತು ಬರೆದ ಲೇಖನ, ಟಿಪ್ಪಣಿ ಮೊದಲಾದ ಬರಹಗಳ ಮೌಲ್ಯಮಾಪನ.<br><br>ಸಂಧಿ ಪದ, ಪರ್ಯಾಯ ಪದ ಮೊದಲಾದವುಗಳ ಮೌಲ್ಯಮಾಪನ. |
| | ಪ್ರಕೃತಿಯ ರಮಣೀಯ ಅಂಶಗಳಲ್ಲಿ | ಕವಿತೆ | ಮಳೆಯ ಸೊಬಗನ್ನು ಆಸ್ವಾದಿಸುವ | ಮಳೆಯ ಸೊಬಗನ್ನು | | | ಐಸಿಟಿಯ | ಪದ್ಯದ ಆಶಯ |

| | | | | | | | | |
|---|---|---|---|---|---|---|---|---|
| ಪ್ರಕೃತಿ ಸೌಂದರ್ಯ | ಮಳೆಯೂ ಒಂದಾಗಿದೆ ಎಂದು ತಿಳಿಯುವುದು.<br><br>ವರ್ಷ ಕಾಲದ ವೈಭವವನ್ನು ಆ ಸಮಯದ ಪ್ರಕೃತಿ ಸೌಂದರ್ಯವನ್ನು ವರ್ಣಿಸಿರುವ ಹಲವಾರು ಸಾಹಿತ್ಯ ರಚನೆಗಳು ಕನ್ನಡ ಭಾಷೆಯಲ್ಲಿದೆ ಎಂಬ ಅರಿವನ್ನು ಪಡೆಯುವುದು. | (ಕಾರ್ಗಾಲದ ವೈಭವ ) | ಮನೋಭಾವ ಹಾಗೂ ಸೃಜನಶೀಲ ರಚನೆಗಳಲ್ಲಿ ಪ್ರಕಟಿಸುವ ಕೌಶಲವನ್ನು ರೂಢಿಸಿಕೊಳ್ಳುವುದು.<br>ವಿವಿಧ ಸಾಹಿತ್ಯ ಕೃತಿಗಳಲ್ಲಿ ಅಡಕವಾಗಿರುವ ಸೌಂದರ್ಯ ಅಂಶಗಳನ್ನು ಆಸ್ವಾದಿಸುವ ಸ್ವ ರಚನೆಯಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದುಕೊಳ್ಳುವುದು. | ಆಸ್ವಾದಿಸುವ ಮನೋಭಾವವನ್ನು ರೂಪಿಸಿಕೊಳ್ಳುವರು.<br><br>ವಿವಿಧ ಸಾಹಿತ್ಯ ಕೃತಿಗಳಲ್ಲಿ ಅಡಕವಾಗಿರುವ ಸೌಂದರ್ಯ ಅಂಶಗಳನ್ನು ತಿಳಿದುಕೊಳ್ಳುವ ಆಸಕ್ತಿಯನ್ನು ಹೊಂದುವರು | ವಾಕ್ಯ ರಚನೆ<br><br>ಪ್ರಾಸ ಪದಗಳು<br><br>ಅನುಕರಣ ಪದ | ಆಶಯ ಬರಹ<br><br>ಆಸ್ವಾದನ ಟಿಪ್ಪಣಿ<br><br>ಸ್ವಾರಸ್ಯ ನಿರೂಪಣೆ<br><br>ಅನುಭವ ಟಿಪ್ಪಣಿ | ಸಾಂದರ್ಭಿಕ ಬಳಕೆ<br><br>ಮಳೆಯ ವರ್ಣನೆ ಇರುವ ಸಾಹಿತ್ಯ ರಚನೆಗಳು<br><br>ಹರಟೆ ಲಘು ಪ್ರಬಂಧ ಇತ್ಯಾದಿಗಳು | ಬರಹ, ಕವಿತೆಯ ಸಾಲುಗಳ ಸ್ವಾರಸ್ಯ ನಿರೂಪಣೆ, ಪದ್ಯ ಸಾಲುಗಳ ಆಸ್ವಾದನ ಟಿಪ್ಪಣಿ ಮೊದಲಾದ ಉತ್ಪನ್ನಗಳ ಮೌಲ್ಯಮಾಪನ. |
| ಪರಿಸರ ಸಂರಕ್ಷಣೆ | ಪ್ರಕೃತಿಯಲ್ಲಿ ಎಲ್ಲಾ ಜೀವ ಜಾಲಗಳಿಗೂ ಬದುಕುವ ಸಮಾನ ಹಕ್ಕು ಇದೆ ಎಂದು ತಿಳಿದುಕೊಳ್ಳುವುದು.<br><br>ಎಲ್ಲಾ ಜೀವಿಗಳಿಗೂ ಭಾವನೆಗಳಿವೆ, ಪ್ರತಿಕ್ರಿಯೆಗಳಿವೆ ಪ್ರಾಕೃತಿಕ ಸಂಪನ್ಮೂಲಗಳ ರಕ್ಷಿಸಿಕೊಂಡು ಬರುವ ಹೊಣೆಗಾರಿಕೆ ಯುವ ಜನಾಂಗದ ಮೇಲಿದೆ ಎಂದು ತಿಳಿದು ಕೊಳ್ಳುವುದು. | ಸಣ್ಣ ಕಥೆ (ಕಾಡು ಕಡಿದರೆ) | ಪರಿಸರ ಸಕಲ ಚರಾಚರಗಳನ್ನು ಒಳಗೊಂಡ ಆವಾಸ ಕೇಂದ್ರ. ಒಂದು ರೀತಿಯ ನೈಸರ್ಗಿಕ ವ್ಯವಸ್ಥೆಯ ಅಡಿಯಲ್ಲಿ ಪ್ರಕೃತಿ ತನ್ನ ಸಮತೋಲನವನ್ನು ಕಾಪಾಡಿಕೊಂಡು ಬಂದಿದೆ ಮೊದಲಾದ ವಿಚಾರಗಳನ್ನು ವಿಶ್ಲೇಷಿಸಿ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವುದು.<br><br>ವಿವಿಧ ಪತ್ರಗಳನ್ನು ಬರೆಯುವ ಕೌಶಲಗಳನ್ನು ಗಳಿಸುವುದು. | ಭೂಮಿಯ ಮೇಲೆ ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದೆ ನಮ್ಮ ಜೀವಗಳಿಗೆ ಬೆಲೆ ಇರುವಂತೆ ಇತರ ಜೀವಗಳಿಗೂ ಇಲ್ಲಿ ಬೆಲೆ ಇದೆ ಎಂಬ ಪರಿಜ್ಞಾನ ವನ್ನು ಬೆಳೆಸಿಕೊಳ್ಳುವರು. | ಸಮನಾರ್ಥಕ ಪದ<br><br>ಊಹಿಸಿ ಬರೆಯುವುದು<br><br>ಪದಬಂಧ ತಯಾರಿ | ಘೋಷಣ ವಾಕ್ಯ<br><br>ಪಾತ್ರ ಚಿತ್ರಣ<br><br>ಓದುಗರ ಓಲೆ<br><br>ನಾಟಕ ರೂಪಕ್ಕೆ ಬದಲಾಯಿಸು ವುದು | ಓದುಗರ ಓಲೆಯ ತುಣುಕುಗಳು<br><br>ಕಥೆ ಕಾದಂಬರಿಯ ಭಾಗಗಳು | ಸಹಕಾರ ಸಹಬಾಳ್ವೆ, ಅರಣ್ಯ ಸಂರಕ್ಷಣೆ ವನ್ಯಜೀವಿಗಳ ಸಂರಕ್ಷಣೆ ಮೊದಲಾದವುಗಳ ಕುರಿತು ಬರೆದ ಬರಹಗಳ ಮೌಲ್ಯಮಾಪನ. |

## ಪ್ರವೇಶ ಚಟುವಟಿಕೆ

ಪ್ರವೇಶ ಚಟುವಟಿಕೆಯ ಪದ್ಯದಲ್ಲಿ ಕೊಟ್ಟಿರುವ ಚಿತ್ರಗಳನ್ನು ಮಕ್ಕಳಲ್ಲಿ ಗಮನಿಸುವಂತೆ ಹೇಳುವುದು. ಪದ್ಯವನ್ನು ಆಶಯ ಗ್ರಹಣದೊಂದಿಗೆ ಅವರು ಓದಿಕೊಳ್ಳಲಿ. ತಾವು ಕಂಡುಕೊಂಡ ವಿಚಾರಗಳನ್ನು ಅವರು ಬರೆದಿಟ್ಟುಕೊಳ್ಳಲಿ. ಬಳಿಕ ಪ್ರಶ್ನೋತ್ತರದ ವಿಧಾನದ ಮೂಲಕ ಪದ್ಯದ ಆಶಯವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುವುದು.

- ಇಲ್ಲಿ ಕೊಟ್ಟಿರುವ ಚಿತ್ರಗಳು ಏನನ್ನು ಹೇಳುತ್ತಿವೆ ?
- ಕಣ್ಣಿಗೆ ಕಾಣದಂತೆ ಮರೆಯಾಗಿ ಹೋದವುಗಳು ಯಾವುವು ?
- ಹಳ್ಳಿ ಜನರಿಗೆ ಬೆಳಗಿನ ಅಲಾರಾಂ ಗಡಿಯಾರ ಯಾವುದಾಗಿತ್ತು ?
- ಯಾವುದನ್ನು ನೋಡಲೆಂದು ರಜೆ ಹಾಕಿ ಹೋಗುತ್ತಿದ್ದರು?

ಇವೇ ಮೊದಲಾದ ಪ್ರಶ್ನೆಗಳನ್ನು ಕೇಳುವುದರ ಮೂಲಕ ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆಗಳನ್ನು ಪಡೆಯುವುದು. ಬಳಿಕ ಹಿಂದೆ ಇದ್ದ ಪರಿಸರಕ್ಕೂ ಈಗಿರುವ ಪರಿಸರಕ್ಕೂ ಇರುವ ವ್ಯತ್ಯಾಸ ಹಾಗೂ ಹಳೆಯ ಪರಿಸರ ವ್ಯವಸ್ಥೆ ಇಂದು ಬದಲಾಗಲು ಕಾರಣಗಳು ಏನೇನು ಎಂಬುದರ ಕುರಿತು ಚರ್ಚೆ ನಡೆಸುವುದು. ಚರ್ಚೆಯಲ್ಲಿ ಬಂದಿರುವ ಅಭಿಪ್ರಾಯಗಳನ್ನು ಕ್ರೋಡೀಕರಿಸುವುದು.

ಮಾನವನಅತಿಕ್ರಮಣದಿಂದಪರಿಸರಹೇಗೆಬದಲಾಯಿತುಮತ್ತುಪರಿಸರದಅಸಮತೋಲನಕ್ಕೆ ಮಾನವ ಹೇಗೆ ಕಾರಣನಾದ ಎಂಬುದನ್ನು ತಿಳಿಯಪಡಿಸುತ್ತಾ 'ಊರು ಬರಿದಾಯ್ತು'ಎಂಬ ಪಾಠ ಭಾಗಕ್ಕೆ ಬರುವುದು.

## ಊರು ಬರಿದಾಯ್ತು

ಪೂರ್ಣಚಂದ್ರ ತೇಜಸ್ವಿ ಅವರ "ಜುಗಾರಿ ಕ್ರಾಸ್"ಕಾದಂಬರಿಯಿಂದ ಆಯ್ದ ಭಾಗವನ್ನು ಇಲ್ಲಿ ಪಠ್ಯವಾಗಿ ಕೊಡಲಾಗಿದೆ. ಪ್ಲಾಸ್ಟಿಕ್ ಚೀಲಗಳ ಬಳಕೆ ಮೇದರಹಳ್ಳಿಯ ಜನರ ಪರಂಪರಾಗತ ಕಸುಬನ್ನು ಹೇಗೆ ಅಳಿಸಿ ಹಾಕಿತು ಎಂಬುದರ ವಿವರಣೆ ಇಲ್ಲಿದೆ. ತಮ್ಮ ಕಸುಬನ್ನು ಕಳೆದುಕೊಂಡ ಮಂದಿಗಳು ಹೊಟ್ಟೆಪಾಡಿಗಾಗಿ ಆ ಊರನ್ನೇ ಬಿಟ್ಟು ಹೋದ ಸನ್ನಿವೇಶದ ಚಿತ್ರಣವಿದೆ. ಪಾಠ ಭಾಗದ ಆಶಯದ ಅರಿವಿನ ಜೊತೆಗೆ ಮಕ್ಕಳ ನಿರರ್ಗಳ ಓದಿಗೂ ಇಲ್ಲಿ ಅವಕಾಶವನ್ನು ಅಧ್ಯಾಪಕರು ಒದಗಿಸಿಕೊಡಬೇಕಾಗಿದೆ.

ಮಕ್ಕಳು ಪಾಠ ಭಾಗವನ್ನು ವೈಯಕ್ತಿಕವಾಗಿ ಓದಲಿ. ಓದುವಾಗ ಕಂಡುಕೊಂಡ ನವೀನ ಪದಗಳನ್ನು ಗುರುತಿಸಿಕೊಳ್ಳಲಿ. ಪಠ್ಯಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಅರ್ಥಕೋಶದ ಸಹಾಯದಿಂದ

ಅರ್ಥವನ್ನು ತಿಳಿದುಕೊಳ್ಳಲಿ.

ಆಯ್ದ ಕೆಲವು ಮಂದಿ ವಿದ್ಯಾರ್ಥಿಗಳಿಂದ ನಿರ್ದಿಷ್ಟ ಭಾಗವನ್ನು ಓದಿಸುವುದು. ಓದುವಿಕೆಯಲ್ಲಿನ ತಪ್ಪುಗಳನ್ನು ಅಲ್ಲಲ್ಲಿ ಸರಿಪಡಿಸುವುದು. ಆಶಯನ್ನು ಕಂಡುಕೊಳ್ಳಲು ನೆರವಾಗುವಂತೆ ಅಧ್ಯಾಪಕರು ಪಾಠ ಭಾಗವನ್ನು ಸೂಕ್ತ ಸ್ವರಭಾರದೊಂದಿಗೆ ಓದುವುದು, ಆಶಯ ಕ್ರೋಡೀಕರಣ ಮಾಡುವುದು.

## ಗದ್ಯಸಾರ

ಮೇದರಹಳ್ಳಿ ಬಿದಿರ ತಡಿಕೆಗಳಿಂದ ಮಾಡಿದ ಕುಕ್ಕೆಗಳಿಗೆ ತುಂಬಾ ಹೆಸರುವಾಸಿಯಾಗಿತ್ತು. ಮೇದರರು ತಮ್ಮ ಜೀವನೋಪಾಯಕ್ಕಾಗಿ ಆ ಹಳ್ಳಿಯ ಆಸುಪಾಸಿನಲ್ಲಿ ಸಾವಿರಾರು ಚದರ ಮೈಲಿಯವರೆಗೆ ಅಕ್ಷಯವಾಗಿ ಬೆಳೆದಿರುವ ಹೆಬ್ಬಿದಿರು, ವಾಟೆ ಬಿದಿರು, ಕಿರುಬಿದಿರುಗಳನ್ನು ತಮ್ಮ ಕಸುಬಿಗಾಗಿ ಆಶ್ರಯಿಸಿದ್ದರು. ಮೇದರಹಳ್ಳಿಯಲ್ಲಿ ಮೇದರರು ಹೆಣೆದ ಬಿದಿರಬೆತ್ತದ ಬುಟ್ಟಿ. ಮೊರ ಹಾಗೂ ಕುಣಿಗಳಿಗೆ ಕರ್ನಾಟಕ ಮಾತ್ರವಲ್ಲದೆ ಬೇರೆ ಬೇರೆ ರಾಜ್ಯಗಳಿಂದಲೂ ತುಂಬಾ ಬೇಡಿಕೆ ಇತ್ತು. ಯುರೋಪಿಯನ್ನರು ಭಾರತದಲ್ಲಿದ್ದ ಸಂದರ್ಭದಲ್ಲಿ ಬೆತ್ತದ ಉತ್ಪನ್ನಗಳನ್ನು ಮುಂಗಡವಾಗಿ ಬೇಡಿಕೆ ಇರಿಸಿ ಕೊಂಡುಕೊಳ್ಳುತ್ತಿದ್ದರು. ಮೇದರರು ತಯಾರಿಸಿದ ಬಿದಿರ ತಡಿಕೆ ಉತ್ಪನ್ನಗಳನ್ನು ಅವರು ತುಂಬಾ ಮೆಚ್ಚಿಕೊಂಡಿದ್ದರು. ಇದರಿಂದಾಗಿ ಮೇದರರ ಜೀವನ ಮಟ್ಟ ಸುಧಾರಿಸಲ್ಪಟ್ಟಿತ್ತು. ಕಾಫಿ ತೋಟವು ವಿಸ್ತಾರಗೊಂಡಂತೆ ಅವರ ಬುಟ್ಟಿಗಳಿಗೂ ಬೇಡಿಕೆ ಹೆಚ್ಚುತಿತ್ತು. ಇದರಿಂದಾಗಿ ಮೇದರಹಳ್ಳಿ ಒಂದು ವ್ಯವಸಾಯ ಕೇಂದ್ರವಾಗಿ ಮಾರ್ಪಟ್ಟಿತ್ತು. ಬಿದಿರಬೆತ್ತದ ಉತ್ಪನ್ನಗಳ ವ್ಯವಹಾರಗಳು ವಿಸ್ತರಿಸುತ್ತ ಸಾಗಿತು.

ನಾಗರಿಕ ಬದುಕಿನಲ್ಲಿ ಪ್ಲಾಸ್ಟಿಕ್ ಕಾಲಿಟ್ಟ ಮೇಲೆ ಅನೇಕ ಹಳ್ಳಿ ಜನರ ಮತ್ತು ಬುಡಕಟ್ಟು ಜನರ ಕಸುಬಿಗೆ ಅದು ವಿಪತ್ತಾಗಿ ಪರಿಣಮಿಸಿತ್ತು. ಪ್ಲಾಸ್ಟಿಕ್ ಚೀಲಗಳ ಬಳಕೆ ಮೇದರರ ಬಿದಿರ ಉತ್ಪನ್ನಗಳಿಗೂ ಸಂಚಕಾರವನ್ನು ತಂದಿಟ್ಟಿತು. ಬಿದಿರಿನ ಕುಕ್ಕೆಗಳ ಜಾಗವನ್ನು ಕ್ರಮೇಣವಾಗಿ ಪ್ಲಾಸ್ಟಿಕ್ ಚೀಲಗಳು ಅಕ್ರಮಿಸಿದವು. ಇದರಿಂದಾಗಿ ಬಿದಿರು ಉತ್ಪನ್ನಗಳ ಬೇಡಿಕೆ ತಗ್ಗಿತು. ಪ್ಲಾಸ್ಟಿಕ್ ಗಳ ಅಪರಿಮಿತವಾದ ಬಳಕೆ ಮೇದರಹಳ್ಳಿಗೆ ದೊಡ್ಡ ಹೊಡೆತವನ್ನೇ ನೀಡಿತು. ಅವರು ಪ್ಲಾಸ್ಟಿಕ್ ಚೀಲಗಳೊಂದಿಗೆ ತಮ್ಮ ಉತ್ಪನ್ನಗಳನ್ನು ಸ್ಪರ್ಧೆಗೆ ಒಡ್ಡಬೇಕಾಗಿ ಬಂತು. ಕೆಲವು ಸಂಪ್ರದಾಯಸ್ಥರು ಪ್ಲಾಸ್ಟಿಕ್ ಚೀಲಗಳನ್ನು ಪಡೆಯದೆ ದೇಸಿ ಉತ್ಪನ್ನವಾದ ಕುಕ್ಕೆಗಳನ್ನೇ ಖರೀದಿಸುತ್ತಿದ್ದರು. ಇದರಿಂದ ಮೇದರರಿಗೆ ಸ್ವಲ್ಪಮಟ್ಟಿಗೆ ಸಾಂತ್ವನ ಸಿಗುತ್ತಿತ್ತು. ಆದರೆ ಗಾಳಿ, ಮಳೆ, ಬಿಸಿಲು ಇವು ಯಾವುದಕ್ಕೂ ಬಗ್ಗದ ತೆಳ್ಳಗಿನ ಕಾಗದಂತಹ ಪ್ಲಾಸ್ಟಿಕ್ ಚೀಲ ಕಾಫಿ ಪ್ಲಾಂಟರ್ ಗಳ ಮನಸ್ಸನ್ನು ಹೆಚ್ಚು ಆಕರ್ಷಿಸಿತು. ಕ್ರಮೇಣ ಬಿದಿರ ಕುಕ್ಕೆಗಳ ಮೇಲಿನ ಮುಂಗಡ ಬುಕ್ಕಿಂಗ್ ಕಡಿಮೆಯಾಯಿತು. ಬರುಬರುತ್ತಾ ಹಳ್ಳಿಯಲ್ಲಿ ಯಾರಿಗೂ ಈ ಬಿದಿರ ಕುಕ್ಕೆಗಳು ಬೇಡವಾದವು. ಮೇದರರು ತಾವು ಹೆಣೆದ ಬಿದಿರ ಉತ್ಪನ್ನಗಳನ್ನು ದೂರದ ಪೇಟೆಗಳಿಗೆ ಸಾಗಿಸಿ ಮಾರಾಟ ಮಾಡಬೇಕಾಗಿ ಬಂತು.

ಇದೇ ಸಂದರ್ಭದಲ್ಲಿ ಮೇದರರಿಗೆ ಇನ್ನೊಂದು ಸಂಕಷ್ಟವೂ ಎದುರಾಯಿತು. ಬಿದಿರುಗಳಿಗೆ ಅರುವತ್ತು ವರ್ಷಗಳಿಗೊಮ್ಮೆ ನೆರೆತ ಬರುವುದಿದೆ. ಆಗ ಅವುಗಳು ತೆನೆ ಬಿಟ್ಟು ಬಿದಿರಕ್ಕಿಯನ್ನು ಉದುರಿಸುತ್ತವೆ. ನಂತರ ಅವುಗಳು ಹಳದಿಯಾಗಿ ಬಾಲಿಶವಾಗುತ್ತವೆ. ಪ್ಲಾಸ್ಟಿಕ್ ಚೀಲಗಳ ಜನಪ್ರಿಯತೆಯ ಸಂದರ್ಭದಲ್ಲಿಯೇ ಈ ಒಂದು ಸಂಕಷ್ಟವೂ ಅವರನ್ನು ಕಾಡಿತು. ಬಿದಿರುಗಳೆಲ್ಲಾ ಹಳದಿಯಾಗಿ ತೆನೆ ಬಿಟ್ಟವು. ಬಿದರಕ್ಕಿಯಿಂದ ಹೊಸ ಬಿದಿರುಗಳನ್ನು ಬೆಳೆಸಬೇಕಾದರೆ ಬಹಳಕಾಲಗಳವರೆಗೆ ಕಾಯಬೇಕು. ಮೇದರರಿಗೆ ಬುಟ್ಟಿಯನ್ನು ತಯಾರಿಸಲು ಬಿದಿರುಗಳು ಸಿಗದೆ ಹೋದವು. ಬಿದಿರುಗಳನ್ನು ಬೆಳೆಸುವುದಕ್ಕೆ ಅವರಿಗೆ ಉತ್ಸಾಹ ಇರಲಿಲ್ಲ. ಮಾರುಕಟ್ಟೆಗಳಲ್ಲಿ ಪ್ಲಾಸ್ಟಿಕ್ ಚೀಲಗಳಿಗೆ ಇರುವ ಬೇಡಿಕೆ ಇದಕ್ಕೆ ಕಾರಣವಾಗಿತ್ತು. ಹೀಗಾಗಿ ಅವರು ಕಸುಬನ್ನು ಅರಸುತ್ತಾ ಬೇರೊಂದು ಊರಿಗೆ ವಲಸೆ ಹೋದರು. ಮೇದರಹಳ್ಳಿಯ ಬಿದಿರ ವ್ಯಾಪಾರವು ನಿಂತಿತು. ಮೇದರ ಸಮುದಾಯ ಇಲ್ಲದೆ ಊರೂ ಬರಿದಾಯಿತು.

## ಚಟುವಟಿಕೆಗಳು

### ಉತ್ತರಿಸಿರಿ

ತಮ್ಮ ಅಭಿಪ್ರಾಯಗಳನ್ನು ಆಶಯಕ್ಕೆ ಅನುಗುಣವಾಗಿ ಸ್ವತಂತ್ರವಾಗಿ ವ್ಯಕ್ತಪಡಿಸುವ ಸಾಮರ್ಥ್ಯವನ್ನು ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಬೆಳೆಸುವುದು ಅಗತ್ಯ. ಚರ್ಚೆ, ಸಂವಾದ, ವಿಚಾರ ಗೋಷ್ಠಿ ಮೊದಲಾದ ಕಲಿಕಾ ಪ್ರಕ್ರಿಯೆಯ ಮೂಲಕ ಅದನ್ನು ಸಾಧಿಸಬಹುದಾಗಿದೆ. ಇದರಿಂದ ತರಗತಿ ಹೆಚ್ಚು ಕ್ರಿಯಾಶೀಲವಾಗಿರುವುದಲ್ಲದೆ ಮಕ್ಕಳಲ್ಲಿ ನಿರರ್ಗಳ ಮಾತುಗಾರಿಕೆ, ಪದಗಳ ಬಳಕೆಯಲ್ಲಿ ಪ್ರೌಢಿಮೆ ಮೊದಲಾದವುಗಳನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ.

ತರಗತಿಯಲ್ಲಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನಿರ್ದಿಷ್ಟ ಗುಂಪುಗಳನ್ನು ರಚಿಸುವುದು. ಬಳಿಕ ಚಟುವಟಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಮಕ್ಕಳು ಗುಂಪಿನಲ್ಲಿ ಉತ್ತರವನ್ನು ಬರೆದುಕೊಳ್ಳಲಿ. ಪ್ರಶ್ನೆಗಳಿಗೆ ಬರೆದ ಉತ್ತರವನ್ನು ಗುಂಪುಗಳಲ್ಲಿ ಅನುಕ್ರಮವಾಗಿ ಒಬ್ಬೊಬ್ಬರಲ್ಲಿ ಓದಿಸುವುದು. ಅಧ್ಯಾಪಕರ ಮಾರ್ಗದರ್ಶನದಲ್ಲಿ ಸೂಕ್ತ ತಿದ್ದುಪಡಿಯೊಂದಿಗೆ ಉತ್ತರಗಳನ್ನು ಪರಿಷ್ಕರಿಸಿ ಬರೆಯುವುದು.

### ಸಮರ್ಥಿಸಿ ಬರೆಯುವುದು

ಪಾಠ ಭಾಗದಲ್ಲಿ ಬಂದಿರುವ 'ತಮ್ಮ ಕಸುಬಿಗೆ ಶಾಶ್ವತವಾದ ನೆರೆ ಬಂದಿದೆ. ಬಿದಿರಕ್ಕಿಯ ಬೀಜದಿಂದ ಮತ್ತೊಮ್ಮೆ ಬಿದಿರು ಮೊಳಕೆ ಒಡೆದು ಚಿಗುರಿದರೂ ತಮ್ಮ ಕಸಬು ಮಾತ್ರ ಇನ್ನೆಂದೂ ಚಿಗುರುವುದಿಲ್ಲ.'ಎಂಬ ಹೇಳಿಕೆಯ ಕುರಿತು ಚರ್ಚೆಗೆ ನಡೆಸುವುದು.

ವಿದ್ಯಾರ್ಥಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಗುಂಪಿನಲ್ಲಿ ಹೇಳಿಕೊಳ್ಳಲಿ. ಗುಂಪಿನಲ್ಲಿ ಒಬ್ಬರು

ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಹೇಳಿಕೆಗೆ ಸಮರ್ಥನೆಯನ್ನು ಬರೆದು ಕೊಳ್ಳಲಿ. ಪ್ರತಿಯೊಂದು ಗುಂಪಿನಿಂದ ಒಬ್ಬರು ಮಂಡಿಸಲಿ. ಬಳಿಕ ಅಧ್ಯಾಪಕರ ಮಾರ್ಗದರ್ಶನದಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಿ ಎಲ್ಲರೂ ಬರೆದಿಟ್ಟುಕೊಳ್ಳುವುದು.

## ಟಿಪ್ಪಣಿ ಬರೆಯುವುದು

ಗುಂಪುಗಳಲ್ಲಿ ಚರ್ಚೆಯನ್ನು ಮುಂದುವರಿಸುವುದು. ಮೇದರಹಳ್ಳಿಯಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಅದ ಬದಲಾವಣೆಗಳ ಕುರಿತು ಚರ್ಚೆ ನಡೆಯಲಿ.

ಮೇದರಹಳ್ಳಿಯಲ್ಲಿ ಪ್ಲಾಸ್ಟಿಕ್ ಬಳಕೆ ಉಂಟು ಮಾಡಿದ ದುಷ್ಪರಿಣಾಮಗಳನ್ನು ಒಂದೊಂದಾಗಿ ಗುರುತಿಸಿಕೊಂಡು ಹೋಗುವುದು.

- ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ಚೀಲ ಬರುವವರೆಗೂ ಮೇದರಹಳ್ಳಿಯ ಬಿದಿರ ಉತ್ಪನ್ನಗಳಿಗೆ ಒಳ್ಳೆಯ ಬೇಡಿಕೆ ಇತ್ತು.
- ಪ್ಲಾಸ್ಟಿಕ್ ಚೀಲಗಳ ಬಳಕೆ ಆರಂಭವಾದಾಗ ಬಿದಿರ ಉತ್ಪನ್ನಗಳಿಗೆ ಬೇಡಿಕೆ ಕಡಿಮೆ ಆಯಿತು.
- ಪ್ಲಾಸ್ಟಿಕ್ ಚೀಲಗಳು ತೆಳುವಾಗಿ ಹಗುರವಾಗಿ ಇರುವುದರಿಂದ ಜನರು ಅದನ್ನು ಹೆಚ್ಚು ಇಷ್ಟಪಡುತ್ತಿದ್ದರು.
- ಮೊದಮೊದಲು ಸಂಪ್ರದಾಯಸ್ಥರು ಬಿದಿರ ಕುಕ್ಕೆಗಳನ್ನೇ ಆಶ್ರಯಿಸುತ್ತಿದ್ದರೂ ಬಳಿಕ ಅವರು ಪ್ಲಾಸ್ಟಿಕ್ ಚೀಲಗಳನ್ನು ಬಳಸುವುದಕ್ಕೆ ತೊಡಗಿದರು.
- ಇದರಿಂದಾಗಿ ಮೇದರರು ದೂರದ ಪೇಟೆಗೆ ಹೋಗಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬೇಕಾಯಿತು.
- ಪ್ಲಾಸ್ಟಿಕ್ ಚೀಲಗಳು ಯಾವುದೇ ಸಂದರ್ಭದಲ್ಲಿ ಸುಲಭವಾಗಿ ದೊರಕುತ್ತಿದ್ದುದರಿಂದ ಬಿದಿರ ಕುಕ್ಕೆಗಳಿಗೆ ಬೇಡಿಕೆ ಕಡಿಮೆಯಾಯಿತು.
- ಬರುಬರುತ್ತಾ ಮೇದರಹಳ್ಳಿಯಲ್ಲಿ ಬಿದಿರಿನ ಅಭಾವ ಕೂಡ ಕಂಡುಬರುವುದರಿಂದ ಕುಕ್ಕೆಗಳ ನಿರ್ಮಾಣ ತುಂಬಾ ಕಡಿಮೆಯಾಯಿತು.
- ಮೇದರರು ತಮ್ಮ ಹೊಟ್ಟೆಪಾಡಿಗಾಗಿ ಬೇರೊಂದು ಕಸುಬನ್ನು ಹುಡುಕುತ್ತಾ ಚೆಲ್ಲಾಪಿಲ್ಲಿಯಾಗಿ ಆ ಊರಿಂದ ಹೊರಟರು.
- ಇದರಿಂದ ಮೇದರಹಳ್ಳಿ ಪೂರ್ತಿ ಬರಿದಾಯಿತು.

ಗುಂಪಿನಲ್ಲಿ ಬಂದಿರುವ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಆ ಕುರಿತು ಟಿಪ್ಪಣಿಯೊಂದನ್ನು ಬರೆಯಲಿ. ಬಳಿಕ ಗುಂಪಲ್ಲಿ ಒಬ್ಬರಂತೆ ತರಗತಿಯಲ್ಲಿ ಮಂಡಿಸುವುದು. ಅಧ್ಯಾಪಕರ ಸಹಾಯದಿಂದ

ಸೂಕ್ತ ತಿದ್ದುಪಡಿಗಳೊಂದಿಗೆ ಪರಿಷ್ಕರಿಸಿ ಬರೆಯುವುದು.

## ಕರಪತ್ರ ತಯಾರಿ

ಕರಪತ್ರದ ಕುರಿತು ಮಕ್ಕಳು ಈ ಮೊದಲೇ ತಿಳಿದಿರುತ್ತಾರೆ. ಕರಪತ್ರದ ಉದ್ದೇಶ ಮತ್ತು ಅದರ ವಿನ್ಯಾಸದ ಕುರಿತು ಮಕ್ಕಳಿಗೆ ತಿಳಿಯಪಡಿಸುವುದು ಇಲ್ಲಿ ಉಪಯುಕ್ತವಾಗಬಹುದು.

- ಕರಪತ್ರಗಳನ್ನು ಯಾವ ಯಾವ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳುತ್ತಾರೆ?
- ಕರಪತ್ರದ ಪ್ರಧಾನ ಉದ್ದೇಶವೇನು?

ಇವೇ ಮೊದಲಾದ ಪ್ರಶ್ನೆಗಳನ್ನು ಕೇಳುತ್ತಾ ಕರಪತ್ರದ ಸ್ಪಷ್ಟವಾದ ಚಿತ್ರಣವನ್ನು ಒದಗಿಸಿಕೊಡುವುದು. ಕರಪತ್ರದ ಮಾದರಿಯೊಂದನ್ನು ಈ ಹಂತದಲ್ಲಿ ತೋರಿಸುವುದು. ಜನರಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ಕರಪತ್ರದ ಪ್ರಾಧಾನ್ಯವನ್ನು ತಿಳಿಯಪಡಿಸುವುದು. ಬಳಿಕ ಚಟುವಟಿಕೆಯಲ್ಲಿ ಕೊಟ್ಟಿರುವ ವಿಷಯದ ಕುರಿತಾಗಿ ಕರಪತ್ರವನ್ನು ಬರೆಯುವಂತೆ ಸೂಚಿಸುವುದು. ಪ್ರತಿಯೊಂದು ಗುಂಪು ಕರಪತ್ರದ ಮಾದರಿ ಒಂದನ್ನು ಬರೆದಿಟ್ಟುಕೊಳ್ಳಲಿ.

ಗುಂಪಿನಿಂದ ಬಂದ ಉತ್ಪನ್ನವನ್ನು ಅಧ್ಯಾಪಕರು ಮೌಲ್ಯ ಮಾಪನಕ್ಕೆ ಒಳಪಡಿಸುವುದು.ಸೂಕ್ತ ತಿದ್ದುಪಡಿಗಳೊಂದಿಗೆ ಪರಿಷ್ಕರಿಸಿ ಬರೆದಿಟ್ಟು ಕೊಳ್ಳುವುದು.

**ಕರಪತ್ರದ ಮಾದರಿ**

### ಪ್ಲಾಸ್ಟಿಕ್ ತ್ಯಜಿಸೋಣ

ಪ್ರಿಯರೇ ............

ಪ್ಲಾಸ್ಟಿಕ್ ಚೀಲಗಳ ಬಳಕೆ ಪರಿಸರಕ್ಕೆ ತುಂಬಾ ಮಾರಕವಾದದು ಎಂಬ ವಿಷಯ ತಮಗೆಲ್ಲ ತಿಳಿದಿರುವುದೇ ಆಗಿದೆ. ಆದರೂ ನಮ್ಮಲ್ಲಿ ಪ್ಲಾಸ್ಟಿಕ್ ಚೀಲಗಳ ಬಳಕೆ ಕಡಿಮೆಯಾಗಿಲ್ಲ. ವಾತಾವರಣವನ್ನು ವಿಷಮಯವನ್ನಾಗಿಸುವ, ಪರಿಸರ ವ್ಯವಸ್ಥೆಗೆ ಮಾರಕವಾಗಿರುವ ಪ್ಲಾಸ್ಟಿಕ್ ಹಲವಾರು ರೋಗಗಳಿಗೆ ಕಾರಣವಾಗಬಹುದು. ನಮ್ಮ ಜೀವಕ್ಕೆ ಅಪಾಯವನ್ನು ತಂದೊಡ್ಡಬಹುದು. ನಾವು ಈಗಲೇ ಜಾಗೃತರಾಗಿ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆಗೊಳಿಸಬೇಕು.ಪ್ಲಾಸ್ಟಿಕ್ ಚೀಲಗಳನ್ನು ಬಹಿಷ್ಕರಿಸಿ ಬಟ್ಟೆಯ ಚೀಲಗಳನ್ನು ಬಳಸುವಲ್ಲಿ ನಮ್ಮ ಆದ್ಯತೆ ಇರಲಿ.. ಆ ಮೂಲಕ ಪರಿಸರ ಸಂರಕ್ಷಣೆಗೆ ನಾವು ಬದ್ಧರಾಗೋಣ.

ಇತಿ ನಿಮ್ಮ

ಪರಿಸರ ಸಂರಕ್ಷಣಾ ಜಾಗೃತ ಸಮಿತಿ

## ವಿರುದ್ಧಾರ್ಥ ಪದ

ವಿದ್ಯಾರ್ಥಿಗಳಲ್ಲಿ ಚಟುವಟಿಕೆಯಲ್ಲಿ ಕೊಟ್ಟಿರುವ ವಾಕ್ಯಗಳನ್ನು ಗಮನಿಸುವಂತೆ ಹೇಳುವುದು. ಅಧ್ಯಾಪಕರು ವಿರುದ್ಧಾರ್ಥ ಪದಗಳ ಔಚಿತ್ಯವನ್ನು ತಿಳಿಯಪಡಿಸುವುದು. ಚಟುವಟಿಕೆಯಲ್ಲಿ ಕೊಟ್ಟಿರುವ ಪದಗಳ ವಿರೋಧಾರ್ಥಗಳನ್ನು ಆಯ್ದ ಕೆಲವರಲ್ಲಿ ಹೇಳಿಸುವುದು. ಬಳಿಕ ಪದಗಳ ಮತ್ತು ಅವುಗಳ ವಿರೋಧಾರ್ಥ ಪದವನ್ನು ಬಳಸಿಕೊಂಡು ಮಕ್ಕಳು ವಾಕ್ಯಗಳನ್ನು ರಚಿಸುವಂತೆ ಹೇಳುವುದು. ತರಗತಿಯಲ್ಲಿ ಮಂಡನೆ. ಸ್ವ ಮೌಲ್ಯಮಾಪನಕ್ಕೆ ಅವಕಾಶ ನೀಡುವುದು.

## ಸಂಧಿ ಗುರುತಿಸುವುದು - ಲೋಪ ಸಂಧಿ

ಚಟುವಟಿಕೆಯಲ್ಲಿ ಕೊಟ್ಟಿರುವ ತಖ್ತೆಯನ್ನು ವಿದ್ಯಾರ್ಥಿಗಳಲ್ಲಿ ಗಮನಿಸುವಂತೆ ಹೇಳುವುದು. ಪದ ವಿಂಗಡಣೆಯ ಬಗ್ಗೆ ವಿದ್ಯಾರ್ಥಿಗಳು ಹಿಂದಿನ ತರಗತಿಗಳಲ್ಲಿ ಕಲಿತಿರುತ್ತಾರೆ. ಪದಗಳು ಸೇರಿ ರೂಪುಗೊಳ್ಳುವ ಸಂಧಿ ಪದಗಳ ಬಗ್ಗೆ ಹಾಗೂ ಅದರ ನಿಯಮಗಳ ಕುರಿತು ವಿವರಣೆಯನ್ನು ಕೊಡುವುದು. ಪದವನ್ನು ವಿಂಗಡಿಸಿದಾಗ ಮೊದಲ ಪದ ಮತ್ತು ಎರಡನೆಯ ಪದಕ್ಕೆ ಇರುವ ವಿಶೇಷತೆಯನ್ನು ಹೇಳುವುದು. ಸಂಧಿಕಾರ್ಯ ನಡೆಯುವಾಗ ಸ್ವರಗಳಲ್ಲಿ ನಡೆಯುವ ಬದಲಾವಣೆಯನ್ನು ತಿಳಿಸುವುದು. ಬಳಿಕ ಲೋಪ ಸಂಧಿಯ ಬಗ್ಗೆ ವಿವರಣೆಯನ್ನು ಕೊಡುವುದು.

ಸ್ವರಕ್ಕೆ ಸ್ವರವು ಪರವಾಗಿ ಬಂದಾಗ ಪೂರ್ವ ಪದದ ಅಂತ್ಯದಲ್ಲಿರುವ ಸ್ವರವು ಲೋಪವಾಗುತ್ತದೆ ಎಂಬುದನ್ನು ಇನ್ನೂ ಕೆಲವು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸುವುದು.

ಪಾಠ ಭಾಗದಲ್ಲಿ ಬಂದಿರುವ ಲೋಪಸಂಧಿಯಾಗುವ ಪದಗಳನ್ನು ಪಟ್ಟಿ ಮಾಡಿಕೊಂಡು ಬರಲು ಹೇಳುವುದು, ತರಗತಿಯಲ್ಲಿ ಮೌಲ್ಯಮಾಪನಕ್ಕೆ ಅಳವಡಿಸುವುದು.

**ಉದಾಹರಣೆಗೆ**

- ಕಾಡು+ಆಗಿ = ಕಾಡಾಗಿ
- ಎದುರು+ ಆಗು = ಎದುರಾಗು
- ಒಂದು+ಒಂದು= ಒಂದೊಂದು
- ನಾಲ್ಕು+ಆರು = ನಾಲ್ಕಾರು
- ಗೊತ್ತು+ಇತ್ತು = ಗೊತ್ತಿತ್ತು
- ಹಿಂದೆ +ಒಮ್ಮೆ= ಹಿಂದೊಮ್ಮೆ
- ಕಾಲದ+ ಒಳಗೆ = ಕಾಲದೊಳಗೆ..... ಇತ್ಯಾದಿ

# ಕಾರ್ಗಾಲ ವೈಭವ

ಮಳೆ ಎಂದರೆ ಮಕ್ಕಳಿಗೆ ತುಂಬಾ ಮೋಜು. ಮಳೆಯಲ್ಲಿ ನಿಂತು ಆಟ ಆಡುವುದು, ನಡೆಯುವುದು, ನಿಂತ ನೀರಿಗೆ ನೆಗೆಯುವುದು, ಓಡುವುದು ಮೊದಲಾದವುಗಳು ಪ್ರತಿಯೊಂದು ಮಗುವೂ ಇಷ್ಟಪಡುವ ಸಂಗತಿಗಳಾಗಿವೆ. ಮಳೆಯ ಸೊಬಗು ಮತ್ತು ಅದರ ಸೊಗಸನ್ನು ಆಸ್ವಾದಿಸಿದ ಮಕ್ಕಳು ತಮ್ಮ ಅನುಭವಗಳನ್ನು ಬಾಯ್ದೆರೆಯಾಗಿ ಹೇಳಲಿ, ಮಳೆಯೊಂದಿಗೆ ಅಬ್ಬರಿಸುವ ಗಾಳಿ ಗುಡುಗು ಮಿಂಚು ಇವುಗಳ ಆರ್ಭಟದ ಬಗ್ಗೆಯೂ ತಮ್ಮ ಅನುಭವಗಳನ್ನು ಹೇಳಲಿ ಮಕ್ಕಳ ಅನುಭವಗಳನ್ನು ಪಡೆದ ನಂತರ ಮಳೆಯ ಅಬ್ಬರದ ಕುರಿತಾದ ವಿವರಣೆಯನ್ನು ಅಧ್ಯಾಪಕರು ಈ ಹಂತದಲ್ಲಿ ನೀಡುವುದು. ರಭಸವಾಗಿ ಬೀಸುವ ಗಾಳಿ ಬಾಗಿ ತೂಗುವ ಬಾಳೆ ತೆಂಗು ಕಂಗು ಮೊದಲಾದ ಮರಗಳು, ಬಿರುಸಾಗಿ ಬೀಳುವ ಮಳೆ, ವೇಗವಾಗಿ ಹರಿಯುವ ಮಳೆ ನೀರು ಮೊದಲಾದವುಗಳ ವಿವರಣೆಯನ್ನು ನೀಡಿ ನೇರವಾಗಿ 'ಕಾರ್ಗಾಲ ವೈಭವ'ಪದ್ಯದ ಕಡೆಗೆ ಬರುವುದು.

## ಚಟುವಟಿಕೆಗಳು

### ಪದ್ಯವನ್ನು ರಾಗವಾಗಿ ಹಾಡುವುದು

ಪದ್ಯದ ರಸಾಸ್ವಾದನೆ ಆಗಬೇಕಾದರೆ ರಾಗ ತಾಳ ಲಯಬದ್ಧವಾಗಿ ಹಾಡಬೇಕು. ಪದ್ಯವನ್ನು ಮೊದಲಿಗೆ ಮಕ್ಕಳು ವೈಯಕ್ತಿಕವಾಗಿ ಬಾಯ್ದೆರೆಯಾಗಿ ಓದಲಿ. ಬಳಿಕ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಗುಂಪುಗಳನ್ನು ರಚಿಸಿ ಒಂದೊಂದು ಗುಂಪಿನಿಂದ ಪದ್ಯವನ್ನು ಹಾಡಿಸುವುದು.

**ಮೌಲ್ಯಮಾಪನಸೂಚಕಗಳು**

- ಉತ್ತಮವಾಗಿ ಹಾಡಿದ ಗುಂಪು ಯಾವುದು?
- ಪದ್ಯವನ್ನು ಇನ್ನೂ ಉತ್ತಮವಾಗಿ ರಾಗದಿಂದ ಹಾಡಲು ಸಾಧ್ಯವಿದೆಯೇ?

ಎಂಬುದರ ಕುರಿತು ಮಕ್ಕಳಿಂದಲೇ ಮೌಲ್ಯ ನಿರ್ಣಯ ನಡೆಯಲಿ. ಬಳಿಕ ಅಧ್ಯಾಪಕರು ಸಾಧ್ಯವಾದರೆ ಮಕ್ಕಳು ಹಾಡಿದ ರಾಗಕ್ಕಿಂತ ಭಿನ್ನವಾದ ರಾಗದಲ್ಲಿ ಹಾಡುವುದು. ಈ ಹಂತದಲ್ಲಿ ಅಧ್ಯಾಪಕರು ಪದ್ಯದಲ್ಲಿ ಕವಿ ಬಳಸಿರುವ ಪದಗಳ ಅರ್ಥವಿವರಣೆ ಹಾಗೂ ಪದ್ಯಸಾಲುಗಳ ವಿಶೇಷತೆಗಳನ್ನು ತಿಳಿಸುವುದು.

- ಪದ್ಯದಲ್ಲಿ ಕವಿ ಗುಡುಗು ಮಿಂಚುಗಳನ್ನು ಯಾವುದಕ್ಕೆ ಹೋಲಿಸಿರುವನು?
- ಕವಿ ಮಳೆಯನ್ನು ಜಗಜಟ್ಟಿ ಎಂದು ಕರೆದಿರುವುದೇಕೆ ?
- ಮಳೆ ಬಂದು ಹೋದ ಮೇಲೆ ಮೇದಿನಿ ಹೇಗೆ ಕಂಗೊಳಿಸುತ್ತಿತ್ತು?

ಹೀಗೆ ಪದ್ಯವನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಲು ಸಹಾಯಕವಾಗುವಂತೆ ಅಧ್ಯಾಪಕರು ಆಶಯ ಗ್ರಹಣ ಪ್ರಶ್ನೆಗಳನ್ನು ಕೇಳುವುದು. ವಿದ್ಯಾರ್ಥಿಗಳು ಉತ್ತರವನ್ನು ಬರೆದಿಟ್ಟುಕೊಳ್ಳುವುದು

ತರಗತಿಯಲ್ಲಿ ಪ್ರಸ್ತುತಪಡಿಸುವುದು.

## ಪ್ರಾಸ ವಿಶೇಷತೆಗಳನ್ನು ಗುರುತಿಸುವುದು

ಕವಿತೆಯಲ್ಲಿ ಕಂಡುಬರುವ ಕಾವ್ಯಾತ್ಮಕ ಅಂಶಗಳನ್ನು ಪದ್ಯದ ಸೌಂದರ್ಯವನ್ನು ಹೆಚ್ಚಿಸುತ್ತದೆ. 'ಕಾರ್ಗಾಲ ವೈಭವ'ಕವಿತೆಯಲ್ಲಿ ಪ್ರಾಸ ಪದಗಳ ಬಳಕೆ ಪದ್ಯಕ್ಕೆ ವಿಶೇಷ ಮೆರುಗನ್ನು ನೀಡಿದೆ. ಅಂತ್ಯಪ್ರಾಸವನ್ನು ಕವಿ ಪದ್ಯದಲ್ಲಿ ಬಳಸಿದ್ದಾರೆ. ವಿದ್ಯಾರ್ಥಿಗಳು ಪದ್ಯದಲ್ಲಿ ಪ್ರಯೋಗವಾದ ಅಂತ್ಯ ಪ್ರಾಸವನ್ನು ಗುರುತಿಸಿ ಅವುಗಳ ವಿಶೇಷತೆಗಳನ್ನು ಬರೆದಿಟ್ಟುಕೊಳ್ಳಲಿ.

## ಕವಿತೆಯ ಆಶಯ ಬರೆಯುವುದು

ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಗುಂಪನ್ನು ರಚಿಸುವುದು. ಗುಂಪಿನಲ್ಲಿ ಮತ್ತೊಮ್ಮೆ ಪದ್ಯವನ್ನು ಓದಿ ಅದರ ಆಶಯದ ಕುರಿತಾಗಿ ಪರಸ್ಪರ ತಮ್ಮೊಳಗೆ ಚರ್ಚಿಸುವುದು. ಬಳಿಕ ಪದ್ಯದ ಆಶಯವನ್ನು ಪ್ರತಿಯೊಬ್ಬರೂ ಬರೆಯುವುದು. ಅಧ್ಯಾಪಕರು ಸೂಕ್ತ ಸಲಹೆ ಮಾರ್ಗದರ್ಶನವನ್ನು ನೀಡುವುದು. ಪದ್ಯದ ಆಶಯನ್ನು ಆಯ್ದ ಕೆಲವರಲ್ಲಿ ಓದಿಸುವುದು. ಅಧ್ಯಾಪಕರ ತಿದ್ದುಪಡಿಗಳೊಂದಿಗೆ ಪರಿಷ್ಕರಿಸುವುದು.

## ಪದ್ಯದ ಆಶಯ ಹೀಗೂ ಇರಬಹುದಲ್ಲವೇ?

ಕನ್ನಡ ನಾಡಿನ ಪಶ್ಚಿಮ ಕರಾವಳಿಯ ಮಳೆಯ ವೈಭವವನ್ನು ಬರಿ ಮಾತುಗಳಿಂದ ವರ್ಣಿಸಲು ಸಾಧ್ಯವಿಲ್ಲ. ಚೆಲ್ಲಿದಷ್ಟು ಮುಗಿಯದ ನೀರನ್ನು ತನ್ನಲ್ಲಿ ಇರಿಸಿಕೊಂಡು ನಿಸ್ತೇಜಗೊಂಡಂತೆ ಕಾರ್ಮೋಡಗಳು ನೆಲೆನಿಂತಿದೆ. ಎಡೆಬಿಡದೆ ಸುರಿವ ಮಳೆಯಿಂದ ಕೆರೆ ತೊರೆಗಳು ನೀರಿನಿಂದ ತುಂಬಿ ಹರಿಯುತ್ತಿವೆ. ಗುಡ್ಡ ಬೆಟ್ಟಗಳನ್ನು ಕೊರೆ ಕೊರೆದು ಹರಿದು ಬರುವ ಝರಿಗಳ ಸದ್ದು ಕಡಲಿನ ಅಲೆಗಳ ಸದ್ದಿನಂತೆ ಕಿವಿಯಲ್ಲಿ ರಿಂಗಣಿಸುತ್ತಿದೆ.

ಕುದುರೆಯ ಮುಖಕ್ಕೆ ಬಿಗಿದಿರುವ ಬಾಗಿದ ಕಡಿವಾಣದಂತೆ ಆಕಾಶದಲ್ಲಿ ಮಿಂಚು ಬಾಗಿ ಬಳುಕಿ ಥಳ ಥಳಿಸುತ್ತಿದೆ. ದೂರದಲ್ಲಿ ಓಡುತ್ತಿರುವ ಕುದುರೆಯ ಗೊರಸಿನ ಸದ್ದು ಎಡೆಬಿಡದೆ ಕೇಳಿಸುತ್ತಾ ಹತ್ತಿರ ಬಂದಂತೆ ಜೋರಾಗಿ ಕೇಳಿಸುವ ಹಾಗೆ ಥಟ್ಟನೆ ಒಂದರ ಹಿಂದೆ ಒಂದರಂತೆ ಗುಡುಗು ಗುಡುಗಾಡುತ್ತಿತ್ತು. ಹಗಲಿರುಳು ಎನ್ನದೆ ಸುರಿಯುತ್ತಿರುವ ಜಡಿ ಮಳೆಯಿಂದ ನೀರು ರಭಸವಾಗಿ ಹರಿದು ಬರುತ್ತಿದೆ. ಅತಿಯಾದ ಆವೇಶದಿಂದ ಊರಿನ ಸಂದುಗೊಂದುಗಳಲ್ಲಿಹಾರುತ್ತಾ ಸಾಗುವ ಮಳೆ ನೀರು ಮರಗಳನ್ನು ಕೀಳುತ್ತಾ ಬಂಡೆಗಳನ್ನು ಸೀಳುತ್ತಾ ಜಗಜಟ್ಟಿಯಂತೆ ಮೆರೆದಾಡುತ್ತಿದೆ. ಗಾಳಿ,ಗುಡುಗು ಮಿಂಚುಗಳೊಡನೆ ಸುರಿವ ಮಳೆ, ಹನಿಗಳ ಸೋನೆ ಮನ ಮನಗಳಲ್ಲಿಯೂ ಭಯವನ್ನು ಮೂಡಿಸುತ್ತಿದೆ.

ನಲ್ಲನು ಮುಗಿಲೆಂಬ ತನ್ನ ಹುಬ್ಬುಗಳನ್ನು ಗಂಟಿಕ್ಕುತ್ತಾ ದೊಡ್ಡದಾದ ಧ್ವನಿಯಿಂದ ಆಕಾಶವೆಂಬ ಹೆಣ್ಣನ್ನು ಗದರಿಸುತ್ತಿದ್ದಾನೆ. ದುಃಖದಿಂದ ಆಗಸವೆಣ್ಣು ಅಳುತ್ತಿದ್ದಾಳೆ. ಆಗ ಅವಳ ಕಣ್ಣುಗಳಿಂದ ಹರಿಯುವ ಕಣ್ಣೀರು ಹೀಗೆ ಮಳೆಯ ರೂಪದಲ್ಲಿ ಹರಿದು ಬಂತೋ ಎಂಬಂತೆ ಆಕಾಶ ಒಡೆದು ಮಳೆ ಸುರಿಯುತ್ತಿದೆ. ಮಳೆ ನೀರು ಪ್ರವಾಹದಂತೆ ಹರಿಯುತ್ತಿದೆ. ಎಷ್ಟು ಅತ್ತರೂ ಸಾಲದೆ, ಬೇಸರವೂ ನೀಗದೆ, ಸತ್ತೂ ಸಾಯದಂತೆ ನೋವನ್ನು ಸಹಿಸಿಕೊಂಡು ಹೇಗಾದರೂ ಬಾಳಲೇಬೇಕು ಎಂಬ ಸ್ಥಿತಿಯಲ್ಲಿ ಇರುವೆನು ಎಂಬಂತೆ ಆ ಆಗಸವು ಕಣ್ಣೀರಧಾರೆಯಂತೆ ಮಳೆಯನ್ನು ಸುರಿಸುತ್ತಿತ್ತು.

ಈಗ ಮಳೆ ಸುರಿಯುವುದು ನಿಂತಿದೆ. ನೆರೆಯೂ ಇಳಿದಿದೆ. ನದಿಯ ನೀರಿನ ಕೆಂಬಣ್ಣ ನಿಧಾನವಾಗಿ ತಿಳಿಯಾಗುತ್ತಾ ಈಗ ಶುಭ್ರವಾಗಿ ಕಂಗೊಳಿಸುತ್ತಿದೆ. ತೆಳುವಾದ ಹಗುರವಾದ ಶಾಂತರೂಪದ ಅಲೆಗಳು ನೀರಿನಲ್ಲಿ ತರಂಗಗಳನ್ನು ಉಂಟು ಮಾಡಿವೆ. ಆ ತರಂಗಗಳ ಬಲೆಯಲ್ಲಿ ಸೂರ್ಯನು ಗೋಚರಿಸುತ್ತಿದ್ದಾನೆ.

ಮೇದಿನಿಯು ಕಾರ್ಮೋಡದ ಬಟ್ಟೆಯನ್ನು ಕಳಚಿ ಬಿಳಿ ಮೋಡಗಳನ್ನು ಧರಿಸಿದಂತೆ ಈಗ ಕಂಗೊಳಿಸುತ್ತಿದೆ. ಹೊಸ ಚಿಗುರನ್ನು ಧರಿಸಿ ಸೌಂದರ್ಯದಿಂದ ಶೋಭಿಸುತ್ತಿದೆ. ಮೂಗುತ್ತಿಯು ಮುಖದ ಸೌಂದರ್ಯವನ್ನು ಹೆಚ್ಚಿಸುವಂತೆ ಅರಳಿ ನಿಂತ ಹೂಗಳು ಮೇದಿನಿಯ ಸೌಂದರ್ಯವನ್ನು ಹೆಚ್ಚಿಸಿದೆ.

## ಆಸ್ವಾದನ ಟಿಪ್ಪಣಿ ಬರೆಯುವುದು

ಚಟುವಟಿಕೆಯಲ್ಲಿ ಕೊಟ್ಟಿರುವ ಪದ್ಯ ಸಾಲುಗಳ ವಿಶೇಷತೆಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯು ಗುರುತಿಸಿಕೊಳ್ಳಲಿ. ಪ್ರಾಸ ಪದದ ವಿಶೇಷತೆಗಳನ್ನು ಈ ಮೊದಲೇ ಅವರು ತಿಳಿದಿರುವುದರಿಂದ ಪದ್ಯ ಸಾಲುಗಳು ಯಾಕೆ ಅವರಿಗೆ ಇಷ್ಟವಾಯಿತು ಎಂಬುದರ ಕುರಿತು ಆಸ್ವಾದನ ಟಿಪ್ಪಣಿಯೊಂದನ್ನು ಬರೆಯಲಿ. ಅಧ್ಯಾಪಕರು ಅಗತ್ಯ ನಿರ್ದೇಶಗಳನ್ನು ಕೊಡುವುದು ಆಯ್ದ ಕೆಲವು ವಿದ್ಯಾರ್ಥಿಗಳಲ್ಲಿ ಬರೆದುದನ್ನು ತರಗತಿಯಲ್ಲಿ ಮಂಡಿಸಲು ಹೇಳುವುದು. ಅಧ್ಯಾಪಕರು ಸೂಕ್ತ ತಿದ್ದುಪಡಿಗಳೊಂದಿಗೆ ಬರೆದುದನ್ನು ಸರಿಪಡಿಸುವಲ್ಲಿ ಮಾರ್ಗದರ್ಶನ ನೀಡುವುದು.

## ಆಸ್ವಾದನ ಟಿಪ್ಪಣಿ ಹೀಗೂ ಇರಬಹುದಲ್ಲವೇ?

ಮಳೆಯೊಂದಿಗೆ ಕೂಡಿ ಬರುವ ಮಿಂಚು ಗುಡುಗು ಇವುಗಳ ಕುರಿತಾದ ವರ್ಣನೆಯನ್ನು ಇಲ್ಲಿ ಕಾಣಬಹುದು. ಕುದುರೆಯ ಮುಖಕ್ಕೆ ಬಿಗಿದಿರುವ ಬಾಗಿದ ಕಡಿವಾಣದಂತೆ ಆಕಾಶದಲ್ಲಿ ಮಿಂಚು ಬಾಗಿ ಬಳುಕಿ ಥಳ ಥಳಿಸುತ್ತಿದೆ. ದೂರದಲ್ಲಿ ಓಡುತ್ತಿರುವ ಕುದುರೆಯ ಗೊರಸಿನ ಸದ್ದು ಎಡೆಬಿಡದೆ ಕೇಳಿಸುತ್ತಾ ಹತ್ತಿರ ಬಂದಂತೆ ಜೋರಾಗಿ ಕೇಳಿಸುವ ಹಾಗೆ ಥಟ್ಟನೆ ಒಂದರ ಹಿಂದೆ

ಒಂದರಂತೆ ಗುಡುಗು ಗುಡುಗಾಡುತ್ತಿತ್ತು. ಹೀಗೆ ಮಿಂಚು ಗುಡುಗುಗಳ ಕುರಿತು ಸುಂದರವಾಗಿ ವರ್ಣಿಸಲಾಗಿದೆ. ಪದ್ಯಸಾಲುಗಳಲ್ಲಿ ಬಂದಿರುವ ಘಟ್ಟನೆ, ಥಟ್ಟನೆ ಪದಗಳು ಮನ ಸೆಳೆಯುತ್ತದೆ. ಥಳಥಳಿಸುವುವು,ಗುಡುಗಾಡಿಸುವುವು ಎಂದು ಬಂದಿರುವ ಅಂತ್ಯಪ್ರಾಸ ಪದ್ಯಕ್ಕೆ ಮೆರಗನ್ನು ನೀಡಿವೆ.

## ಅನುಕರಣ ಪದ

ಭಾಷಿಕ ಅಂಶಗಳಲ್ಲಿ ಪದ ವೈಚಿತ್ರ್ಯ ಒಂದು. ಭಾಷೆಯ ದಿನನಿತ್ಯದ ಬಳಕೆಯಲ್ಲಿ ಅವುಗಳ ವಿಶೇಷತೆಯನ್ನು ತಿಳಿದುಕೊಳ್ಳುವುದರಿಂದ ವಿದ್ಯಾರ್ಥಿಗಳ ಶಬ್ದ ಭಂಡಾರ ವೃದ್ಧಿಯಾಗುತ್ತದೆ. ಇಂತಹ ಪದಗಳ ಬಳಕೆಯಲ್ಲಿ ಭಾಷೆಯ ಸೊಬಗು ಇದೆ.

ಪದ್ಯದಲ್ಲಿ ಬಂದಿರುವ ಥಳಥಳಿಸು ಎಂಬ ಪದವನ್ನು ಗಮನಿಸುವಂತೆ ವಿದ್ಯಾರ್ಥಿಗಳಲ್ಲಿ ಹೇಳುವುದು. ಆ ಪದದ ವಿಶೇಷತೆಯನ್ನು ತಿಳಿಸಿಕೊಡುವುದು. ಮಿಂಚು ಹೇಗೆ ಹೊಳೆಯಿತು ಎಂಬುದನ್ನು ಆ ಪದವು ತಿಳಿಸಿಕೊಡುತ್ತದೆ.

ತೊರೆಯು **ಫಳ ಫಳನೆ** ಹೊಳೆಯುತ್ತದೆ.

ಇಲ್ಲಿ ಫಳ ಫಳನೆ ಎಂಬುವುದು ಕ್ರಿಯೆಯ ಅನುಕರಣೆಯನ್ನು ಸೂಚಿಸುತ್ತದೆ. ಹೀಗೆ ಒಂದು ಕ್ರಿಯೆಯ ಅನುಕರಣೆಯನ್ನು ಸೂಚಿಸುವ ಪದಗಳು ಅನುಕರಣ ಪದಗಳಾಗಿವೆ. ಇವುಗಳು ದ್ವಿರುಕ್ತಿಯಂತೆ ಕಂಡುಬಂದರೂ ಅನುಕರಣೆಯನ್ನು ಸೂಚಿಸುವುದರಿಂದ ವಿಭಿನ್ನವಾಗಿ ನಿಲ್ಲುತ್ತದೆ.

ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ಕೊಟ್ಟಿರುವ ವಾಕ್ಯಗಳನ್ನು ಗಮನಿಸಲಿ. ಅಲ್ಲಿ ಬಂದಿರುವ ಅನುಕರಣೆಯ ಪದಗಳನ್ನು ಗುರುತಿಸಿಕೊಳ್ಳಲಿ ಮತ್ತು ಅದರ ವಿಶೇಷತೆಯನ್ನು ತಿಳಿದುಕೊಳ್ಳಲಿ. ಅನುಕರಣೆಯ ಪದಗಳನ್ನು ತಿಳಿದುಕೊಳ್ಳಲು ಈ ಚಟುವಟಿಕೆಯನ್ನು ಸಾಧ್ಯವಾದರೆ ಮಾಡಿಸುವುದು.

**ಆವರಣದಲ್ಲಿ ಕೊಟ್ಟಿರುವ ಸೂಕ್ತವಾದ ಪದಗಳಿಂದ ಬಿಟ್ಟ ಸ್ಥಳವನ್ನು ಭರ್ತಿ ಮಾಡಿರಿ.**

(ಜುಳುಜುಳು, ಫಳಫಳ, ಗಿರಗಿರ, ಛಟಛಟ. ಸರಸರ)

- ತೋಟದಲ್ಲಿ ಅಡಿಕೆಯ ಮರವು.................. ಎಂದು ಮುರಿದು ಬಿತ್ತು.
- ತೊರೆಯ ನೀರು ಹರಿಯುವ................. ಶಬ್ದ ಕೇಳಿಸುತ್ತಿತ್ತು.
- ನನ್ನ ಕಾಲ ಬುಡದಲ್ಲಿಯೇ ಹಾವು................. ಎಂದು ಸಾಗಿ ಹೋಯಿತು.
- ನದಿಯ ನೀರು ಕನ್ನಡಿಯಂತೆ...................... ಹೊಳೆಯುತ್ತಿತ್ತು.
- ಬುಗರಿ.........................ಎಂದು ತಿರುಗುತ್ತಿತ್ತು.

ಪ್ರಸ್ತುತ ಪಾಠ ಭಾಗದ ಪದ್ಯದಲ್ಲಿ ಅನುಕರಣೆಯ ಪದಗಳಿಗಿಂತ ದ್ವಿರುಕ್ತಿ ಪದ ಹೆಚ್ಚಾಗಿ ಬಂದಿದೆ. ಆದುದರಿಂದ ವಿದ್ಯಾರ್ಥಿಗಳು ಇಲ್ಲಿ ಸಹಜವಾಗಿಯೇ ಗೊಂದಲಕ್ಕೆ ಈಡಾಗಬಹುದು. ಈ ಕಾರಣದಿಂದ ದ್ವಿರುಕ್ತಿ ಪದದ ವಿಶೇಷತೆಗಳನ್ನು ಅಧ್ಯಾಪಕರು ಇಲ್ಲಿ ಸ್ಪಷ್ಟಪಡಿಸ ಬೇಕಾಗುತ್ತದೆ.

ದ್ವಿರುಕ್ತಿ ಎಂದರೆ ಹೆಸರೇ ಸೂಚಿಸುವಂತೆ ಒಂದು ಪದವನ್ನು ಎರಡು ಬಾರಿ ಹೇಳುವುದಾಗಿದೆ. ಈ ಪದಗಳು ಒಂದು ಕ್ರಿಯೆಯ ತೀವ್ರತೆಯನ್ನು ಸೂಚಿಸುತ್ತದೆ ಉದಾಹರಣೆಗೆ ಬರು ಬರುತ್ತಾ, ನೋಡು ನೋಡು, ಓಡೋಡು, ಎದ್ದೆದ್ದು ಇತ್ಯಾದಿ......ದ್ವಿರುಕ್ತಿ ಪದಗಳನ್ನು ಪರಿಚಯಿಸಿದ ಬಳಿಕ ವಿದ್ಯಾರ್ಥಿಗಳಲ್ಲಿ ಕಾರ್ಗಾಲ ವೈಭವ ಪದ್ಯದಲ್ಲಿ ಬಂದಿರುವ ಅಂತಹ ಪದಗಳನ್ನು ಪಟ್ಟಿ ಮಾಡುವಂತೆ ಸೂಚಿಸುವುದು.

**ಪದ್ಯದಲ್ಲಿ ಬಂದಿರುವ ದ್ವಿರುಕ್ತಿ ಪದಗಳು**

- ಕೊರೆಕೊರೆದು
- ಮೊರೆಮೊರೆವುದು
- ಸುರಿಸುರಿದು
- ಅತ್ತತ್ತು

## ಸಮನಾರ್ಥಕ ಪದಗಳು

ಸಮಾನವಾದ ಅರ್ಥವನ್ನು ಹೊಂದಿರುವ ಪದಗಳು ಸಮನಾರ್ಥಕ ಪದಗಳಾಗಿವೆ. ಆದಿತ್ಯ, ಭಾಸ್ಕರ, ನೇಸರ, ರವಿ ಈ ಪದಗಳು ಸೂರ್ಯ ಎಂಬ ಅರ್ಥವನ್ನು ಕೊಡುತ್ತದೆ. ಆದುದರಿಂದ ಈ ಪದಗಳು ಸಮಾನಾರ್ಥಕ ಪದ ಅಥವಾ ಪರ್ಯಾಯ ಪದಗಳು ಎಂದು ತಿಳಿಯಲ್ಪಡುತ್ತದೆ. ವಿದ್ಯಾರ್ಥಿಗಳು ಪಾಠ ಭಾಗದ ಚಟುವಟಿಕೆಯಲ್ಲಿ ಕೊಟ್ಟಿರುವ ಪದಗಳಿಗೆ ಸಮಾನವಾದ ಅರ್ಥ ಇರುವ ಪದವನ್ನು ಪದ್ಯದಿಂದ ಗುರುತಿಸಿಕೊಂಡು ಬರಲಿ. ತರಗತಿಯಲ್ಲಿ ಮಂಡಿಸಲಿ.

- ಸಮುದ್ರ- ಕಡಲು
- ನದಿ -ವಾಹಿನಿ
- ಸೂರ್ಯ -ನೇಸರ
- ಭೂಮಿ-- ಮೇದಿನಿ

## ಸ್ವಾರಸ್ಯ ಬರೆಯುವುದು

ಪದ್ಯ ಸಾಲುಗಳು ಸ್ವಾರಸ್ಯ ಪೂರ್ಣವಾಗಿದ್ದು ಆಸ್ವಾದನೆಗೆ ಯೋಗ್ಯವಾಗಿವೆ. ಚಟುವಟಿಕೆಯಲ್ಲಿ ಕೊಟ್ಟಿರುವ ಪದ್ಯದ ಸಾಲುಗಳನ್ನು ವಿದ್ಯಾರ್ಥಿಗಳಲ್ಲಿ ಗಮನಿಸುವಂತೆ ಹೇಳುವುದು. ಆ ಸಾಲುಗಳಲ್ಲಿ ಅಡಕವಾಗಿರುವ ಸ್ವಾರಸ್ಯವನ್ನು ವಿದ್ಯಾರ್ಥಿಗಳು ಗುರುತಿಸಿಕೊಳ್ಳಲಿ. ತಾವು ಗುರುತಿಸಿಕೊಂಡ ವಿಚಾರಗಳನ್ನು ಅವರು ಬರೆದಿಟ್ಟುಕೊಳ್ಳಲಿ. ಬಳಿಕ ಆಯ್ದ ವಿದ್ಯಾರ್ಥಿಗಳಲ್ಲಿ ಬರೆದುದನ್ನು ಮಂಡಿಸುವಂತೆ ಹೇಳುವುದು. ಸ್ವಯಂ ಮೌಲ್ಯಮಾಪನದೊಂದಿಗೆ ಅಧ್ಯಾಪಕರ ನೆರವಿನಿಂದ ವಿದ್ಯಾರ್ಥಿಗಳು ಬರೆದ ಟಿಪ್ಪಣಿಯನ್ನು ಪರಿಷ್ಕರಿಸಿ ಬರೆಯುವುದು.

## ವಿದ್ಯಾರ್ಥಿಗಳು ಬರೆದ ಟಿಪ್ಪಣಿ ಹೀಗೂ ಇರಬಹುದಲ್ಲವೇ?

ಧಾರಾಕಾರವಾಗಿ ಸುರಿದ ಮಳೆಯಿಂದ ಹರಿದು ಬರುವ ಮಳೆ ನೀರಿನ ರಭಸವನ್ನು ಕವಿ ಇಲ್ಲಿ ಜಗಜಟ್ಟಿಗೆ ಹೋಲಿಸಿ ಬರೆದಿರುವರು. ವೇಗವಾಗಿ ಹರಿದು ಬರುವ ನೀರು ತನ್ನ ದಾರಿಗೆ ಅಡ್ಡ ಬರುವ ಮರಗಳನ್ನು ಸೀಳಿ ಉರುಳಿಸಿಕೊಂಡು ಬರುತ್ತಿದೆ. ಬಂಡೆಗಳನ್ನು ಕೊರೆದು ಜಗಜಟ್ಟಿಯಂತೆ ಆವೇಶದಿಂದ ಆ ನೀರು ಸಾಗಿಬರುತ್ತಿದೆ. ಹರಿದು ಬರುವ ನೀರಿನ ಶಕ್ತಿಯನ್ನು ಜಗಜಟ್ಟಿಗೆ ಹೋಲಿಸಿರುವುದು ಇಲ್ಲಿ ತುಂಬಾ ಸ್ವಾರಸ್ಯ ಪೂರ್ಣವಾಗಿದೆ.

## ಅನುಭವ ಟಿಪ್ಪಣಿ

ಮಳೆಯ ಅಬ್ಬರವನ್ನು ಕವಿ ವರ್ಣಿಸಿದ ರೀತಿಯನ್ನು ಪದ್ಯದಲ್ಲಿ ಕಾಣಬಹುದು. ಮಳೆಯ ಕುರಿತಾದ ಕವಿಯ ಭಾವನೆಯನ್ನು ತಿಳಿದೆವು. ಜೋರಾಗಿ ಬೀಸುವ ಗಾಳಿ ಗುಡುಗು ಮಿಂಚುಗಳೊಂದಿಗೆ ಬೀಳುವ ಮಳೆ ಕೇರಿ ಕೇರಿಗಳಲ್ಲಿ ಸಂದುಗೊಂದುಗಳಲ್ಲಿ ಹರಿಯುವ ನೀರು ಮೊದಲಾದ ದೃಶ್ಯವನ್ನು ನೀವು ಕಂಡಿದ್ದೀರಿ.

- **ಅದರ ಅನುಭವವನ್ನು ಹೇಳಬಹುದೇ?**

ಎಂಬ ಪ್ರಶ್ನೆಯ ಮೂಲಕ ವಿದ್ಯಾರ್ಥಿಗಳಲ್ಲಿ ಮಳೆಯ ಅಬ್ಬರದ ಕುರಿತಾದ ಅನುಭವ ಟಿಪ್ಪಣಿಯನ್ನು ಬರೆಸುವುದು. ಆಯ್ದ ಕೆಲವು ವಿದ್ಯಾರ್ಥಿಗಳಲ್ಲಿ ತರಗತಿಯಲ್ಲಿ ಮಂಡಿಸುವುದು. ಅಧ್ಯಾಪಕರ ಸಹಾಯದೊಂದಿಗೆ ಸೂಕ್ತ ತಿದ್ದುಪಡಿಗಳನ್ನು ಮಾಡಿ ಪರಿಷ್ಕರಿಸಿ ಬರೆಸುವುದು.